## ಅಧ್ಯಾಯ 11

# ಮುಸುಕು ಹಾಕಿಕೊಳ್ಳುವದರ ಮತ್ತು ಕರ್ತನ ಭೋಜನದ ಕುರಿತು ಸೂಚನೆಗಳು

### ಮುಸುಕು ಹಾಕಿಕೊಳ್ಳುವದು (11:1-16)

ಹೊಸ ಒಡಂಬಡಿಕೆಯಲ್ಲಿ ಕೆಲವು ಪುಟಗಳು 11ನೇ ಅಧ್ಯಾಯದಲ್ಲಿ ಮುಸುಕು ಹಾಕಿಕೊಳ್ಳುವದರ ಕುರಿತು ಪೌಲನ ಸೂಚನೆಗಳಿಗಿಂತ ಹೆಚ್ಚು ಗೂಢ ಪ್ರಶ್ನೆಗಳನ್ನು ಹೊಂದಿವೆ. ಕೊರಿಂಥದಲ್ಲಿ ಸಾಂಸ್ಕೃತಿಕ ಮತ್ತು ಧಾರ್ಮಿಕ ವಾತಾವರಣದಲ್ಲಿರುವ ಆಸಕ್ತಿ ವಿಶಿಷ್ಟವಾಗಿದೆ ಎಂದು ತೋರಿಬರುತ್ತದೆ. ಈ ಪ್ರಶ್ನೆಗಳು ಹೊಸ ಒಡಂಬಡಿಕೆಯಲ್ಲಿ ಎಲ್ಲಿಯೂ ಕಂಡು ಬರುವದಿಲ್ಲ. ಪ್ರತಿನಿತ್ಯದ ಜೀವಿತದಲ್ಲಿ ಕೊರಿಂಥದವರು ಆಚಾರಪದ್ಧತಿ ಮತ್ತು ಸಂಪ್ರದಾಯಗಳನ್ನು ತೊಡಗಿಸಿಕೊಂಡಿದ್ದರು, ಎರಡು ಸಾವಿರ ವರ್ಷಗಳು ಕಳೆದುಹೋದ ನಂತರ ಇವುಗಳನ್ನು ಪುರ್ನರಚಿಸುವದು ಕಠಿಣವಾಗಿತ್ತು. ಕೊರಿಂಥ ಒಂದು ಅಂತರಾಷ್ಟ್ರೀಯ ಪಟ್ಟಣವಾಗಿತ್ತು. ಅಲ್ಲಿ ನೆಲೆಗೊಂಡಿರುವ ರೋಮನ್ನು ಇದರ ಅಸ್ತಿವಾರವನ್ನು ಪೌಲನ ಸಮಯದಲ್ಲಿ ವಿಶಿಷ್ಟವಾದ ಮುದ್ರೆಯನ್ನು ಒತ್ತುವ ಪೂರ್ವದಲ್ಲಿ ನೂರು ವರ್ಷಗಳ ಹಿಂದೆ ಹಾಕಲ್ಪಟ್ಟಿತ್ತು. ಗ್ರೀಕರು ವ್ಯಾಪಾರ ಸ್ಥಳಗಳನ್ನು ಮತ್ತು ನೆರೆಹೊರೆಯನ್ನು, ಮತ್ತು ಯೆಹೂದ್ಯರ ಉಪಸ್ಥಿತಿಯನ್ನು ಸೋಸಿ ತೆಗೆದಿರುವದು ವಿಶಿಷ್ಟವಾಗಿತ್ತು.

ಸಭೆಯು ತನ್ನಲ್ಲಿ ಪರಿವರ್ತನೆ ಹೊಂದಿದವರ ಬೋಧನೆಗಾಗಿ ಮಹಾ ದೇವಾಲಯವನ್ನು ಸಮೀಪಿಸಿತು, ಆದರೆ ಅದಕ್ಕೆ ಆರೋಗ್ಯಯುತ ಅನ್ಯ ಸ್ಪರ್ಧಿಗಳು ಸಹ ಇದ್ದರು. ಗ್ರೀಕ್ ಮತ್ತು ರೋಮನ್ ದೇವರುಗಳು ಇಸ್ರಾಯೇಲರ ದೇವರೊಂದಿಗೆ ಭಕ್ತರ ಆರಾಧನೆಗಾಗಿ ಸ್ಪರ್ಧಿಸುತ್ತಿದ್ದರು. ಅಲ್ಲದೇ ಅರಸರ ಕುಟುಂಬದ ಇತ್ತೀಚಿನ ಮೃತ ಸದಸ್ಯರ ಆರಾಧನೆಗಾಗಿ ಗುಡಿಗಳು ಮತ್ತು ದೇವಾಲಯಗಳು ಜನಪ್ರಿಯವಾಗಿದ್ದವು. ವಿಭಿನ್ನ ಧಾರ್ಮಿಕ ನಂಬಿಕೆಗಳು ಸಾಮಾಜಿಕ ಆತಂಕವನ್ನು ಸೃಷ್ಟಿಸುತ್ತಿದ್ದವು ಆದರೆ ಕೇವಲ ಇವುಗಳೇ ಕಲಹಕ್ಕೆ ಕಾರಣವಾಗಿರಲಿಲ್ಲ. ಕೋರಿಂಥವು ಶ್ರೀಮಂತ ಮತ್ತು ಬಡವರ ಮಧ್ಯದಲ್ಲಿ ದೊಡ್ಡ ಅಂತರವಿರುವ ನಾಗರೀಕ ಪಟ್ಟಣವಾಗಿತ್ತು. ಮುಸುಕು

ಹಾಕಿಕೊಳ್ಳುವದರ ಕುರಿತು ಪೌಲನ ಎಚ್ಚರಿಕೆ ಈ ಮಿಶ್ರ ಮತ್ತು ಜಟಿಲ ಸಂಸ್ಕೃತಿಯಿಂದಾಗಿ ಬಂದದ್ದಾಗಿತ್ತು.

ಯಾವುದೇ ಕಠಿಣ ವೇದಭಾಗವನ್ನು ಅರ್ಥೈಸುವದಕ್ಕೆ ಸನ್ನಿವೇಶವು ಪ್ರಾಮುಖ್ಯವಾಗಿದೆ; ಆದರೆ ಕೊರಿಂಥದಲ್ಲಿ ಮುಸುಕು ಹಾಕಿಕೊಳ್ಳುವ ವಿಷಯದಲ್ಲಿ, ಅದು ಸಾಮಾನ್ಯ ಸಂಗತಿಗಳಿಗಿಂತ ಹೆಚ್ಚು ಜಟಿಲವಾಗಿದೆ. ಅಧ್ಯಾಯ 11 ನ್ನು ಅಧ್ಯಾಯ 8:1ರಲ್ಲಿ ಪ್ರಾರಂಭವಾದ ವಿಗ್ರಹಾರಾಧನೆಯ ಪ್ರಶ್ನೆಗೆ ವಿಸ್ತರಣೆ ಎಂದು ತೆಗೆದುಕೊಳ್ಳಬಹುದೋ ಅಥವಾ 12:1ರಲ್ಲಿ ಪ್ರಾರಂಭವಾದ ಆಂತರಿಕ ಕಾರ್ಯಗಳು ಮತ್ತು ಸಭೆಯ ಆರಾಧನೆಯ ಕುರಿತು ಇದು ಹೊಸ ಪ್ರಶ್ನೆಯನ್ನು ಪರಿಚಯಿಸುತ್ತದೋ? "ಈಗ ಸಂಬಂಧಿಸಿದ" ಸೂತ್ರವು 8:1 ಮತ್ತು 12:1ರ ಮಧ್ಯದಲ್ಲಿ ಕಂಡುಬರುವದಿಲ್ಲ, ಆದರೆ Anthony C. Thiselton ಹೀಗೆ ವಾದಿಸುತ್ತಾರೆ, ಪತ್ರಿಕೆಗಳಲ್ಲಿ "ಈಗ ನಿಮ್ಮನ್ನು ಹೊಗಳುತ್ತೇನೆ . . ." ಎಂಬ ಪದಗಳ ಮೂಲಕ ಹೊಸ ಮಾರ್ಗದರ್ಶನವನ್ನು ತೆಗೆದುಕೊಳ್ಳುತ್ತವೆ 11:2. ಅವನ ಪಕ್ಷಿನೋಟವು ಈ ಕೆಳಗಿನಂತಿದೆ: ". . . ಇದರ ಹಿಂದಿರುವ ಐಕ್ಯತೆಯನ್ನು ತರುವ ಮುಖ್ಯವಿಷಯ [8:1—11:1] ಬಲಹೀನ ಸಹೋದರನೆಡೆಗೆ ಪ್ರೀತಿಯಲ್ಲಿ ತಾಳ್ಮೆಯಿಂದ ವರ್ತಿಸುವದು; [11:2-14:40]ರಲ್ಲಿ ಒಟ್ಟಾಗಿ ಸೇರಿ ಬಂದು ಆರಾಧಿಸುವ ಸಮುದಾಯದ ಸನ್ನಿವೇಶದಲ್ಲಿ ನಮ್ಮ ವರ್ತನೆಯ ಕುರಿತು."[1]

ಒಬ್ಬನು Thiselton ನೊಂದಿಗೆ 8:1—11:1ರಲ್ಲಿರುವ ಐಕ್ಯತೆಯಲ್ಲಿ ತರುವ ಮುಖ್ಯವಿಷಯವು ವಿಗ್ರಹಾರಾಧನೆಗೆ ಸರಿಯಾದ ಪ್ರತಿಕ್ರಿಯೆಯಾಗಿದೆ ಎಂದು ಅಸಮ್ಮತಿಯಿಂದ ಪ್ರತಿಕ್ರಿಯಿಸಬಹುದು ಮತ್ತು ಈ ಮುಖ್ಯವಿಷಯವನ್ನು 11:2-34ರಲ್ಲಿ ಇತರ ಕ್ಷೇತ್ರಗಳಲ್ಲಿ ಕೊಂಡೊಯ್ಯುತ್ತದೆ ಸಭೆ ಮತ್ತು ಆರಾಧನೆಯಲ್ಲಿ ಸಹ. ಬಲಹೀನ ಸಹೋದರರ ಕುರಿತು ಆಸಕ್ತಿ ಅಪೊಸ್ತಲನು ವಿಗ್ರಹಗಳ ದೇವಾಲಯದಲ್ಲಿ ಮಾಂಸವನ್ನು ತಿನ್ನುವದನ್ನು ನಿಷೇಧಿಸಲು ಇರುವ ಒಂದೇ ಒಂದು ಕಾರಣವಾಗಿರಬಹುದು. ಮುಸುಕು ಹಾಕಿಕೊಳ್ಳುವದು ಸಹ ವಿಗ್ರಹಾರಾಧನೆಯೊಂದಿಗೆ ಸಂಬಂಧವನ್ನು ಹೊಂದಿದೆ.

ಈ ಪ್ರಶ್ನೆಗಳ ಕುರಿತು ವಾದಿಸಲು Richard E. Oster, Jr, ಅವರು ಗಣನೀಯವಾದ ಸಂಶೋಧನೆಗಳನ್ನು ಮಂಡಿಸಿದ್ದಾರೆ ಮುಸುಕು ಹಾಕಿಕೊಳ್ಳುವದರ ಕುರಿತು ಕೊರಿಂಥದಲ್ಲಿ ವಿಶಿಷ್ಟವಾದ ಧಾರ್ಮಿಕ ವಾತಾವರಣವನ್ನು ಬೆಳೆಸಿತು. ಮುಸುಕು ಹಾಕಿಕೊಳ್ಳುವದು ಮತ್ತು ಕರ್ತನ ಭೋಜನ ಅಧ್ಯಾಯ 8ರಿಂದ ಅಧ್ಯಾಯ 10ರಲ್ಲಿ ವಿಗ್ರಹಗಳಿಗೆ ಅರ್ಪಿಸಿದ ಮಾಂಸದ ಕುರಿತು ಉಪಯುಕ್ತ ಬದಲಾವಣೆಯನ್ನು ತರುವ ಮತ್ತು ಸಭೆಯಲ್ಲಿ ವರ್ತನೆಯ ಕುರಿತು ಅಧ್ಯಾಯಗಳು 12ರಿಂದ 14ರಲ್ಲಿ ಬರುವ ಪೌಲನ ಎಚ್ಚರಿಕೆಯ ಮಾತುಗಳು ಕಾರ್ಯಮಾಡುತ್ತವೆ.[2]

## ಪೌಲನ ಉದಾಹರಣೆ (11:1)

**1ನಾನು ಕ್ರಿಸ್ತನನ್ನು ಅನುಸರಿಸಿದಂತೆಯೇ ನೀವು ನನ್ನನ್ನು ಅನುಸರಿಸುವವರಾಗಿರಿ.**

**ವಚನ 1.** ಸಾಮಾನ್ಯ ಸಮ್ಮತಿಯಿಂದ, ಸತ್ಯವೇದದ ವಿವರಣಾಕರ್ತರು ಈ ವಚನವು ಅಧ್ಯಾಯ 10ರ ಕೊನೆಯಲ್ಲಿ ಬರುವಂತದ್ದಾಗಿದೆ ಎಂದು ನಿರ್ಣಯಿಸುತ್ತಾರೆ. ವಿಗ್ರಹಗಳ

ಆಲಯದಲ್ಲಿ ವಿಗ್ರಹಗಳಿಗೆ ಅರ್ಪಿಸಿದ ಮಾಂಸವನ್ನು ತಿನ್ನುವದರ ಕುರಿತು ಅಪೊಸ್ತಲನು ಎಚ್ಚರಿಸಿದ ನಂತರ, ಅವನು ಕೊರಿಂಥದಲ್ಲಿರುವ ಕ್ರೈಸ್ತರನ್ನು ದೇವರಿಗೆ ಮಹಿಮೆ ತರುವಲ್ಲಿ ತನ್ನನ್ನು **ಅನುಸರಿಸುವವರಾಗಿರ್ರಿ** ಮತ್ತು ಯೆಹೂದ್ಯರಿಗಾಗಿ ಅಥವಾ ಅನ್ಯರಿಗಾಗಲಿ ಬೇಸರವನ್ನುಂಟು ಮಾಡಬಾರದೆಂದು ಬೇಡಿಕೊಳ್ಳುತ್ತಾನೆ (ನೋಡಿರಿ 4:16). ಅವನು ಫಿಲಿಪ್ಪಿಯಲ್ಲಿರುವವರನ್ನು ಮತ್ತು ಥೆಸಲೋನಿಕದಲ್ಲಿರುವವರನ್ನು ತಾನು ಮಾಡಿದಂತೆ ಮಾಡಲು ಕರೆ ನೀಡುತ್ತಾನೆ (ಫಿಲಿಪ್ಪಿ 3:17; 4:9; 1 ಥೆಸಲೋನಿಕ 1:6; 2 ಥೆಸಲೋನಿಕ 3:9).

## ಪೌಲನ ಪ್ರಸ್ತಾವನೆ (11:2, 3)

**2ನೀವು ಎಲ್ಲಾದರಲ್ಲಿಯೂ ನನ್ನನ್ನು ಜ್ಞಾಪಕಮಾಡಿಕೊಂಡು ನಾನು ನಿಮಗೆ ತಿಳಿಸಿಕೊಟ್ಟ ಕಟ್ಟಳೆಗಳನ್ನು ಅನುಸರಿಸಿ ನಡಿಯುತ್ತೀರೆಂದು ನಿಮ್ಮನ್ನು ಹೊಗಳುತ್ತೇನೆ. 3ಆದರೂ ಒಂದು ಸಂಗತಿಯನ್ನು ನೀವು ತಿಳಿಯಬೇಕೆಂದು ನನ್ನ ಇಷ್ಟ; ಅದೇನಂದರೆ ಪ್ರತಿ ಪುರುಷನಿಗೂ ಕ್ರಿಸ್ತನು ತಲೆ, ಸ್ತ್ರೀಗೆ ಪುರುಷನು ತಲೆ, ಕ್ರಿಸ್ತನಿಗೆ ದೇವರು ತಲೆ ಆಗಿದ್ದಾನೆ.**

11:2-16ರಲ್ಲಿ ಪೌಲನ ಚರ್ಚೆಯ ಪ್ರಾರಂಭದಲ್ಲಿ ಎರಡು ಸಂಗತಿಗಳು ಗಮನಾರ್ಹವಾಗಿವೆ. ಮೊದಲನೆಯದಾಗಿ ಅಪೊಸ್ತಲನು ಕೊರಿಂಥದಲ್ಲಿರುವ ಸಭೆಗೆ ವಿಚಿತ್ರವಾಗಿರುವ ಸನ್ನಿವೇಶವನ್ನು ಸಂಬೋಧಿಸುತ್ತಿದ್ದಾನೆ, ತಲೆಗೆ ಮುಸುಕು ಹಾಕಿಕೊಳ್ಳುವದು ಹೊಸ ಒಡಂಬಡಿಕೆಯಲ್ಲಿ ಎಲ್ಲಿಯೂ ಉಲ್ಲೇಖಿಸಲಾಗಿಲ್ಲ. ಎರಡನೆಯದಾಗಿ, ಕ್ರೈಸ್ತರು ಸಂಸ್ಕೃತಿಯಲ್ಲಿರುವ ಕೆಲವು ವಿಗ್ರಹಾರಾಧಕರ ಸಂಗತಿಗಳಿಗೆ ನೇತುಬೀಳುವ ಶೋಧನೆ ಪತ್ರದ ವಿಷಯವಾಗಿದೆ, 8:1ರಿಂದ ಪ್ರಾರಂಭಿಸಲಾಗಿದೆ. ಸಹಜವಾಗಿ, ತಲೆಗೆ ಮುಸುಕು ಹಾಕಿಕೊಳ್ಳುವದು ಕೊರಿಂಥದಲ್ಲಿರುವ ಕ್ರೈಸ್ತರು ವಿಗ್ರಹಗಳ ಸಂಪ್ರದಾಯಕ್ಕೆ ಸಂಬಂಧಿಸಿದ ವಿಷಯವಾಗಿದೆ.

ಕೊರಿಂಥದವರ ಜೀವಿತದ ಇತರ ಸಂಗತಿಗಳು ಬಹಳ ಮಟ್ಟಿಗೆ ತಲೆಗೆ ಮುಸುಕುಹಾಕುವದರ ಕುರಿತಾದ ಗೊಂದಲಕ್ಕೆ ಕೊಡುಗೆಯನ್ನು ನೀಡಿರಬಹುದು. ಮೊದಲನೆಯದಾಗಿ ರೋಮನ್ರ ನೈತಿಕತೆ ಕೊರಿಂಥದ ಸಾಮಾಜಿಕ ಜೀವನದಲ್ಲಿ ಹರಡಿತ್ತು, ಗ್ರೀಕ್ರದ್ದಲ್ಲ ಇದನ್ನು ಗಮನಿಸುವದು ಮಹತ್ವವುಳ್ಳದ್ದಾಗಿದೆ. ಇನ್ನೊಂದು ಪರಿಗಣಿಸುವಿಕೆ ಏನಂದರೆ ದೇವರುಗಳಿಗೆ ಗೌರವವನ್ನು ಅರ್ಪಿಸುವಾಗ ಪುರುಷ ಮತ್ತು ಸ್ತ್ರೀ ಇಬ್ಬರಿಗೂ ತಲೆಯ ಮೇಲೆ ಯಾವುದಾದರು ಬಟ್ಟೆಯನ್ನು ಹಾಕಿಕೊಳ್ಳಬೇಕು ಎಂಬುದು ರೋಮನ್ರ ಆಚರಣೆಯಾಗಿತ್ತು ಅದರೊಟ್ಟಿಗೆ, ಯೆಹೂದ್ಯ ವೃತ್ತದಲ್ಲಿ ತಲೆಯ ಮೇಲೆ ಬಟ್ಟೆಯನ್ನು ಎಳೆದುಕೊಳ್ಳುವದು ಅಧೀನತೆಯ ಸಂಕೇತವಾಗಿತ್ತು. ಮತ್ತೊಂದು ಪತಿ/ತಂದೆಗೆ ಕುಟುಂಬದಲ್ಲಿ ಧರ್ಮಕ್ಕೆ ಸಂಬಂಧಿಸಿದ ವಿಷಯದಲ್ಲಿ ಸಂಪೂರ್ಣ ಅಧಿಕಾರವಿದೆ ಎಂಬ ವಿಚಾರವನ್ನು ಹೊಂದಿತ್ತು. ಕೊನೆಯದಾಗಿ, ನಾವು ಪುರುಷ ಮತ್ತು ಸ್ತ್ರೀ ಸಾಮಾನ್ಯವಾಗಿ ಧಾರ್ಮಿಕ ಅಥವಾ ಇತರ ಸಾರ್ವಜನಿಕ ಸಭೆಗಳಲ್ಲಿ ಪರಸ್ಪರರು ಬೆರೆಯುತ್ತಿರಲಿಲ್ಲ ಎಂಬುದನ್ನು ನಾವು ಜ್ಞಾಪಕದಲ್ಲಿ ಇಟ್ಟುಕೊಳ್ಳಬೇಕು.

ಸಭೆಯ ಸಮೂಹದಲ್ಲಿ, ಹಾಗೂ, ಸ್ತ್ರೀ ಮತ್ತು ಪುರುಷರು ಒಟ್ಟಾಗಿ ಸೇರಿಬರುತ್ತಿದ್ದರು,

ಅಧ್ಯಾಯ 14 ಇದನ್ನು ಸ್ಪಷ್ಟಪಡಿಸುತ್ತದೆ. ಇದರೊಟ್ಟಿಗೆ, ಅವರು ವಯಕ್ತಿಕ ಮನೆಗಳಲ್ಲಿ ಬೇಟಿಯಾಗುತ್ತಿದ್ದರು, ಇದು ಔಪಚಾರಿಕ ಹಿನ್ನೆಯಲ್ಲಿ. ಕೊರಿಂಥದಲ್ಲಿ ಕ್ರೈಸ್ತರು ಸಭೆಯ ಸಮೂಹದಲ್ಲಿ ಸರಿಯಾದ ಸಾಮಾಜಿಕ ನಿಯಮಗಳ ಅನ್ವಯಿಸುವಿಕೆಯ ಕುರಿತು ಗಲಿಬಿಲಿ ಮತ್ತು ವಿರೋಧವನ್ನು ಅನುಭವಿಸಿದರು, ಅದರಲ್ಲೂ ನಿರ್ಧಿಷ್ಟವಾಗಿ ಮಿಶ್ರ ಸಾಮಾಜಿಕ ಹಿನ್ನೆಲೆಯಲ್ಲಿ ಸಂಪ್ರದಾಯವು ಪುರುಷ ಮತ್ತು ಸ್ತ್ರೀಯರ ಗೌರವಾರ್ಹ ವರ್ತನೆಯ ಕ್ರಮಪಡಿಸುವದು. ಕ್ರಿಸ್ತೀಯ ನಂಬಿಕೆಯನ್ನು ಅಳವಡಿಸಿಕೊಳ್ಳುವಲ್ಲಿ ಪುರುಷ ಮತ್ತು ಸ್ತ್ರೀಯರು ಸಮಕಾಲಿನ ಸಾಮಾಜಿಕ ಸಭೆಗಳು ಒಟ್ಟಾಗಿ ದೇವರನ್ನು ಆರಾಧಿಸಲು ಸೇರಿ ಬರುವದು ಆತಂಕಕ್ಕೆ ಕಾರಣವಾಯಿತು. ಪ್ರಶ್ನೆಗಳು ಸೂಕ್ಷ್ಮವಾಗಿದ್ದವು ಮತ್ತು ಬಲವಾದ ಅಭಿಪ್ರಾಯಗಳನ್ನು ಹೊಂದಿದ್ದವು.

**ವಚನ 2.** ಅಪೊಸ್ತಲನು ತಾನು ಏನನ್ನು ಹೇಳಲಿಕ್ಕಿದ್ದಾನೋ ಅದಕ್ಕಾಗಿ ಕೊರಿಂಥದವರನ್ನು ಸಿದ್ಧಪಡಿಸುತ್ತಿರುವ ಹಾಗೆ, ತನ್ನ ಮಾತುಗಳು ಪ್ರತಿಯೊಬ್ಬರಿಗೆ ಮೆಚ್ಚಿಗೆಯಾಗುವದಿಲ್ಲ ಎಂದು ಆತನಿಗೆ ತಿಳಿದಿತ್ತು. ಸಭೆಯು ತನಗೆ ತೋರಿಸಿದ ಗೌರವಕ್ಕೆ ಸುತ್ತಿ ಮತ್ತು ಮೆಚ್ಚಿಗೆಯನ್ನು ವ್ಯಕ್ತಪಡಿಸುತ್ತಾ ಅವನು ಮೂಲ ವಿಚಾರಗಳೊಂದಿಗೆ ವಿಷಯಕ್ಕೆ ಬಂದನು. ತಲೆಗೆ ಮುಸುಕು ಹಾಕಿಕೊಳ್ಳುವದರ ಕುರಿತಾದ ಪ್ರಶ್ನೆಗಳು ಈಗಾಗಲೇ ಉದ್ಭವಿಸಿದ್ದವು ಮತ್ತು ಈಗ ಕೊರಿಂಥದ ಕ್ರೈಸ್ತರು ಪೌಲನು ತಮಗೆ ಏನನ್ನು ಬೋಧಿಸಿದ್ದನೋ ಅದನ್ನು **ಜ್ಞಾಪಕದಲ್ಲಿಟ್ಟುಕೊಂಡಿದ್ದರು**. ಅವರು ಅವನು ತಮಗೆ ನೀಡಿದ **ಸಂಪ್ರದಾಯಗಳನ್ನು** ಅನುಸರಿಸಲು ಕೂತೂಹಲವುಳ್ಳವರಾಗಿದ್ದರು. ಅವರ ಅಸಮ್ಮತಿಗೆ ಕಾರಣವಾದ ಎಚ್ಚರಿಕೆಯ ಯಾವುದೇ ಮಾತು ಅಥವಾ ಯಾವುದೇ ಬೋಧನೆಯನ್ನು ಅವರ ಕುರಿತು ಅವನು ಆಡಿದ ಮೆಚ್ಚಿಕೆಯ ಮಾತುಗಳ ಬೆಳಕಿನಲ್ಲಿ ಪರಿಗಣಿಸಬೇಕು.

ಪೌಲನು ತಲೆಗೆ ಮುಸುಕು ಹಾಕುವದರ ಕುರಿತಾದ ತನ್ನ ಚರ್ಚೆಯ ವಾಡಿಕೆಯನ್ನು "ಈಗ ಇದಕ್ಕೆ ಸಂಬಂಧಿಸಿದ" ಹಾಗೆ ಪರಿಚಯಿಸಲಿಲ್ಲ ಆದರೆ **ಈಗ ನಾನು ನಿಮ್ಮ ಹೊಗಳುವದು** ಎಂದು ಪರಿಚಯಿಸಿದನು. ಆದುದರಿಂದ, ಈ ಸೂಚನೆಗಳು ಸಹಜವಾಗಿ 8:1ರಲ್ಲಿ ಪರಿಚಯಿಸಿದ ಅದೇ ಸಾಮಾನ್ಯ ವರ್ಗಕ್ಕೆ ಸೇರುತ್ತವೆ: ". . . ವಿಗ್ರಹಗಳಿಗೆ ಅರ್ಪಿಸಿದ ವಸ್ತುಗಳು." ಅದೇ ಸಮಯದಲ್ಲಿ ತಲೆಗೆ ಮುಸುಕು ಹಾಕಿಕೊಳ್ಳುವದು ವಿಗ್ರಹಗಳಿಗೆ ಸಮರ್ಪಿಸುವ ಬಲಿಯ ಜೊತೆಯಲ್ಲಿ ನೇರ ಸಂಬಂಧವನ್ನು ಹೊಂದಿರಲಿಲ್ಲ, ಇದು ವಿಗ್ರಹಾರಾಧನೆಯ ಸಂಸ್ಕೃತಿಯಲ್ಲಿ ಕ್ರೈಸ್ತರಾಗಿ ಜೀವಿಸುವದರೊಂದಿಗೆ ಸಂಬಂಧವನ್ನು ಹೊಂದಿತ್ತು. ಕ್ರೈಸ್ತರು ಈ ಹಿನ್ನೆಲೆಗಳಲ್ಲಿ ಹೇಗೆ ನಡೆದುಕೊಳ್ಳಬೇಕು ಎಂಬುದನ್ನು ತಿಳಿದುಕೊಳ್ಳುವದು ಅವಶ್ಯವಾಗಿದೆ. ಬಹುಶಃ ಕೊರಿಂಥದವರಿಗೆ ಪತ್ರವನ್ನು ನೀಡಿದ ಮೂರು ಪುರುಷರು (16:17) ತಲೆಯ ಮೇಲೆ ಮುಸುಕು ಹಾಕುವದರ ಕುರಿತಾದ ಆಸಕ್ತಿಯನ್ನು ಪೌಲನಿಗೆ ನಿವೇದಿಸಿರಬಹುದು.

**ವಚನ 3.** ಈ ವಚನವನ್ನು ಚರ್ಚಿಸುವಲ್ಲಿ **ತಲೆ** ಅನ್ನುವಾಗ ನಿರ್ಧಿಷ್ಟವಾಗಿ ಪೌಲನು ಏನನ್ನು ಉದ್ದೇಶಿಸಿದ್ದನ್ನು ಎಂಬುದು ಮೂಲ ಸಮಸ್ಯೆಯಾಗಿದೆ. ಮೊದಲನೆಯದಾಗಿ, ಆಧುನಿಕ ಇಂಗ್ಲೀಷ್ ಭಾಷೆಯಲ್ಲಿ, "ತಲೆ" ಸಾಮಾನ್ಯವಾಗಿ ನಿಯಂತ್ರಣದಲ್ಲಿಟ್ಟುಕೊಳ್ಳುವ ಬಲ ಅಥವಾ ಅಧಿಕಾರವನ್ನು ಉಲ್ಲೇಖಿಸುತ್ತದೆ: ಇಲ್ಲಿ "ತಲೆ" ನಿರ್ದೇಶಕರುಗಳು, ಎರಡನೆಯದಾಗಿ, ಪದವನ್ನು ಪ್ರಾಚೀನ ಲೋಕದಲ್ಲಿ ಆ ರೀತಿಯಲ್ಲಿ

ಉಪಯೋಗಿಸುತ್ತಿರಲಿಲ್ಲ ಎಂದು ಕೆಲವರು ಹೇಳುತ್ತಾರೆ. "ತಲೆ," ಅದನ್ನು ವಾದಿಸಿದಂತೆ, ಒಂದು ರೀತಿಯ ತಳಹದಿಯಾಗಿ ಉಪಯೋಗಿಸಲಾಗಿದೆ, "ನದಿಯ ಉಗಮಸ್ಥಾನ (ತಲೆ)" ಅಥವಾ ಪ್ರಾಮುಖ್ಯವಾದ ಸ್ಥಳ, ಉದಾಹರಣೆಗೆ "ವರ್ಗದ ಮುಖ್ಯಸ್ಥ (ತಲೆ)." ಈ ವಿಷಯದಲ್ಲಿ ಅದು ಕ್ರಿಸ್ತನ ಮೇಲೆ ದೇವರ ಅಧಿಕಾರವಲ್ಲ, ಅಲ್ಲದೇ ಇದು ಸ್ತ್ರೀಯ ಮೇಲೆ ಪುರುಷನ ಅಧಿಕಾರವಲ್ಲ ಎಂಬುದು ಪ್ರಶ್ನೆಯಾಗಿದೆ. ಬದಲಾಗಿ, ನಿರ್ಧಿಷ್ಟವಾದ ಸ್ಥಳದ ಆದ್ಯತೆಯ ವಿಷಯವಾಗಿದೆ. ಉದಾಹರಣೆಗೆ, ಪುರುಷನ ಸೃಷ್ಟಿ ಮೊದಲು ಬಂತು, ಅದನ್ನು ಅನುಸರಿಸಿ ಸ್ತ್ರೀಯ ಸೃಷ್ಟಿ. ಈ ದೃಷ್ಟಿಕೋನದಲ್ಲಿ, ಪುರುಷನ ಅಧಿಕಾರಕ್ಕಿಂತ ಅಥವಾ ಸ್ತ್ರೀಯು ಪುರುಷನಿಗೆ ಅಧೀನಳಾಗುವದಕ್ಕಿಂತ ಸೃಷ್ಟಿಯಲ್ಲಿ ಪುರುಷನ ಆದ್ಯತೆಯನ್ನು ತಲೆಗೆ ಮುಸುಕು ಹಾಕುವದರ ಸಂಕೇತವಾಗಿಯೆಂದು ಹೇಳುವದು ಪೌಲನ ವಿಷಯವಾಗಿದೆ.

Oster ಅವರು ಈ ಭಾಗದಲ್ಲಿ ಪೌಲನ ವಿಚಿತ್ರವಾದ ಪದ "ತಲೆ" (κεφαλή, *kephalē*) ಆತನು ಕೊರಿಂಥದಲ್ಲಿರುವ ಸನ್ನಿವೇಶವನ್ನು ಸಂಭೋಧಿಸುವದಕ್ಕಾಗಿ ಅವನು ಈ ಶಬ್ದವನ್ನು ಸೃಷ್ಟಿಸಿದ್ದಾನೆ ಎಂದು ತೋರಿಬರುತ್ತದೆ ಎಂದು ವಾದಿಸುತ್ತಾರೆ, ಅವರು ಹೀಗೆ ಹೇಳುತ್ತಾರೆ,

> ವಿಶಿಷ್ಟವಾಗಿ, ಪೌಲನು "ತಲೆ" (*kephalē*) ಈ ಪದವನ್ನು ಕ್ರಿಸ್ತನು ಮತ್ತು ಪ್ರತಿಯೊಬ್ಬ ಪುರುಷನ ಮಧ್ಯದಲ್ಲಿರುವ ಸಂಬಂಧವನ್ನು ತೋರಿಸಲು ಮತ್ತೇಲ್ಲಿಯೂ ಉಪಯೋಗಿಸಲಿಲ್ಲ. ಅಲ್ಲದೇ ದೃಢಪಡಿಸುವ ಸಾಕ್ಷಿ ಎಲ್ಲಿಯೂ ಪುರುಷ ಮತ್ತು ಸ್ತ್ರೀಯರ ಸಂಬಂಧವನ್ನು ತೋರಿಸಲು ಪೌಲನು ಈ ಪದವನ್ನು ಉಪಯೋಗಿಸಲಿಲ್ಲ.[3]

ಎಫೆಸ 5:21-33ರಲ್ಲಿರುವ ಅಡಿಟಿಪ್ಪಣೆಯಲ್ಲಿ ಅವನು ಗಂಡ ಮತ್ತು ಹೆಂಡತಿಯರ ಕುರಿತು ಸೇರಿಸುತ್ತಾನೆ, ಪುರುಷ ಮತ್ತು ಸ್ತ್ರೀಯರ ಮಧ್ಯದಲ್ಲಿರುವ ಹೆಚ್ಚು ಸಾಮಾನ್ಯ ಸಂಬಂಧದ ಕುರಿತಾಗಿ ಅಲ್ಲ. ಹಾಗೂ, ಗಂಡ ಮತ್ತು ಹೆಂಡತಿ ಮಧ್ಯದಲ್ಲಿರುವ ಸಂಬಂಧ ಪುರುಷ ಮತ್ತು ಸ್ತ್ರೀಯರ ಮಧ್ಯದಲ್ಲಿರುವ ಸಂಬಂಧದಿಂದ ಸರಳವಾಗಿ ಪ್ರತ್ಯೇಕಿಸಬಹುದೋ ಎಂದು ಆಶ್ಚರ್ಯಪಡಬಹುದು. ಒಮ್ಮೆ ಪುರುಷ ಮತ್ತು ಸ್ತ್ರೀಯರ ಸಂಬಂಧವನ್ನು ಸ್ಪಷ್ಟೀಕರಿಸಿದ ಮೇಲೆ ನಿರ್ಧಾರವು ಖಂಡಿತವಾಗಿ ಪರಸ್ಪರ ವಿವಾಹವಾಗಿರುವ ಪುರುಷ ಮತ್ತು ಸ್ತ್ರೀಗೆ ಅನ್ವಯಿಸುತ್ತದೆ.

"ತಲೆ" ಎಂಬ ಹೇಳಿಕೆಗೆ ಯಾವುದೇ ಅಧಿಕಾರದ ಒಳಾರ್ಥವಿಲ್ಲ ಅದನ್ನು ಬಲವಾಗಿ ಚರ್ಚಿಸಿಲ್ಲ. ಕೆಲವು ಪಂಡಿತರು ಗ್ರೀಕೋ-ರೋಮನ್ ಲೋಕದಲ್ಲಿ ಅಧಿಕಾರದಲ್ಲಿರುವ ಒಬ್ಬನ ಕುರಿತು ಮಾತನಾಡುವಾಗ "ತಲೆ" ಎಂದು ಉಪಯೋಗಿಸುತ್ತಿದ್ದರು ಎಂಬುದಕ್ಕೆ ಸಾಕ್ಷಿಯನ್ನು ನೀಡುತ್ತಾರೆ, ಉದಾಹರಣೆಗೆ, ಸರಕಾರದ ತಲೆ. Joseph A. Fitzmyer ಅವರು ಸಾಕ್ಷಿಗಳನ್ನು LXX ದಲ್ಲಿರುವ Philo ಮತ್ತು Josephus, ಅವರ ಬರಹಗಳಿಂದ ಮತ್ತು ಇತರ ಮೂಲಗಳಿಂದ ಪರೀಕ್ಷಿಸಿದ್ದಾರೆ ಅವರು "ನಾಸ್ತಿಕ ಯೆಹೂದ್ಯ ಬರಹಗಾರ ಉದಾಹರಣೆಗೆ κεφαλή 1 ಕೊರಿಂಥ 11:3ರಲ್ಲಿ ತಾಸ್ರುದ ಪೌಲ ಇದನ್ನು ಉದ್ದೇಶಿಸಿದ್ದನು, ಅಧಿಕಾರವನ್ನು ಅಥವಾ ಇನ್ನೊಬ್ಬರ ಮೇಲೆ ಶ್ರೇಷ್ಠತೆಯನ್ನು ತೋರಿಸುವದನ್ನು 'ತಲೆ' ಎಂಬುದಾಗಿ ಅರ್ಥಮಾಡಿಕೊಂಡಿದ್ದನು"[4] ಇಲ್ಲಿ ತಿಳಿದುಕೊಳ್ಳುವದೇನಂದರೆ ಕೊಟ್ಟಿರುವ

ಸನ್ನಿವೇಶದಲ್ಲಿ *kephalē* ಪ್ರಾಮುಖ್ಯತೆಯ ಸ್ಥಾನವನ್ನು ಉಲ್ಲೇಖಿಸುತ್ತದೆ ಆದಾಗ್ಯೂ ಕೆಲವು ಸಮಯದಲ್ಲಿ ಇದು ಅಧಿಕಾರ ಎಂಬ ಅರ್ಥವನ್ನು ನಿರ್ವಹಿಸುತ್ತದೆ.

ಪುರುಷ ಮತ್ತು ಸ್ತ್ರೀಯರ ಮಧ್ಯದಲ್ಲಿರುವ ಸಾಮಾಜಿಕ ಸಂವಹನವು ಗ್ರೀಕ್ ಸಂಸ್ಕೃತಿಯಲ್ಲಿ ವಿರಳವಾಗಿದೆ,[5] ಆದುದರಿಂದ ಸಭೆಯ ಸಮುದಾಯದಲ್ಲಿ ಒಟ್ಟಾಗಿ ಇರುವದು ಅವರಿಗೆ ಅವಮಾನಕರವಾಗಿರಬಹುದು (ನೋಡಿರಿ 14:34). ಅವರ ಪಾತ್ರಗಳ ಕುರಿತು ಅವರಿಗೆ ಪ್ರಶ್ನೆಗಳಿರಬಹುದು. ಅಧಿಕಾರ ಮತ್ತು ಅಧೀನತೆಯ ಕುರಿತು ಮತ್ತು ಪ್ರತಿಯೊಬ್ಬ ಸದಸ್ಯರು ಸಭೆಯಲ್ಲಿ ಪೋಷಿಸಲು ಮತ್ತು ಬೋಧಿಸಲು ಸಹಾಯ ಮಾಡಬೇಕು ಎಂಬುದರ ಕುರಿತು ಪ್ರಶ್ನೆಗಳು ಒಂದಕ್ಕೊಂದು ಹೆಣೆದುಕೊಂಡಿರಬಹುದು.

## ಪೌಲನ ವಿವರಣೆ (11:4-16)

**4ತಲೆಯನ್ನು ಮುಚ್ಚಿಕೊಂಡು ಪ್ರಾರ್ಥನೆಯನ್ನಾಗಲಿ ಪ್ರವಾದನೆಯನ್ನಾಗಲಿ ಮಾಡುವ
ಪುರುಷನು ತನ್ನ ತಲೆಯನ್ನು ಅವಮಾನಪಡಿಸುತ್ತಾನೆ. 5ತಲೆಯ ಮೇಲೆ ಮುಸುಕು
ಹಾಕಿಕೊಳ್ಳದೆ ಪ್ರಾರ್ಥನೆಯನ್ನಾಗಲಿ ಪ್ರವಾದನೆಯನ್ನಾಗಲಿ ಮಾಡುವ ಸ್ತ್ರೀಯು ತನ್ನ
ತಲೆಯನ್ನು ಅವಮಾನಪಡಿಸುತ್ತಾಳೆ. ಸ್ತ್ರೀಯು ಮುಸುಕಿಲ್ಲದಿರುವದೂ ತಲೆಬೋಳಿಸಿ
ಕೊಂಡಿರುವದೂ ಒಂದೇ. 6ಸ್ತ್ರೀಯು ಮುಸುಕುಹಾಕಿಕೊಳ್ಳದಿದ್ದರೆ ಆಕೆಯು ಕೂದಲನ್ನು
ತೆಗೆಸಿಬಿಡಬೇಕಷ್ಟೆ. ಆದರೆ ಕೂದಲನ್ನು ಕತ್ತರಿಸಿಕೊಳ್ಳುವದಾಗಲಿ ತಲೆಬೋಳಿಸಿ
ಕೊಳ್ಳುವದಾಗಲಿ ಸ್ತ್ರೀಗೆ ಅವಮಾನಕರವಾಗಿದ್ದರೆ ಆಕೆಯು ಮುಸುಕನ್ನು ಹಾಕಿಕೊಳ್ಳಲಿ.
7ಪುರುಷನು ದೇವರ ಪ್ರತಿ ರೂಪವೂ ಪ್ರಭಾವವೂ ಆಗಿರುವದರಿಂದ ತಲೆಯನ್ನು
ಮುಚ್ಚಿಕೊಳ್ಳಕೂಡದು; ಸ್ತ್ರೀಯಾದರೋ ಪುರುಷನ ಪ್ರಭಾವವಾಗಿದ್ದಾಳೆ. 8ಪುರುಷನು
ಸ್ತ್ರೀಯಿಂದ ಉತ್ಪತ್ತಿಯಾಗಲಿಲ್ಲ; ಸ್ತ್ರೀಯು ಪುರುಷನಿಂದ ಉತ್ಪತ್ತಿಯಾದಳು. 9ಇದಲ್ಲದೆ
ಪುರುಷನು ಸ್ತ್ರೀ ನಿಮಿತ್ತವಾಗಿ ನಿರ್ಮಾಣವಾಗಲಿಲ್ಲ; ಸ್ತ್ರೀಯು ಪುರುಷನ ನಿಮಿತ್ತವಾಗಿ
ನಿರ್ಮಾಣವಾದಳು. 10ಹೀಗಿರುವದರಿಂದ ದೂತರ ನಿಮಿತ್ತವಾಗಿ ಸ್ತ್ರೀಯು ಪುರುಷನ
ಅಧಿಕಾರ ಸೂಚಿಸುವ ಮುಸುಕನ್ನು ತಲೆಯ ಮೇಲೆ ಹಾಕಿಕೊಂಡಿರಬೇಕು. 11ಆದರೂ
ಕರ್ತನ ಸಂಬಂಧದಲ್ಲಿ ಪುರುಷರಿಲ್ಲದೆ ಸ್ತ್ರೀಯರೂ ಸ್ತ್ರೀಯರಿಲ್ಲದೆ ಪುರುಷರೂ
ಸಂಪೂರ್ಣರಲ್ಲ. 12ಸ್ತ್ರೀಯು ಪುರುಷನಿಂದ ಉತ್ಪತ್ತಿಯಾದಳು; ಹಾಗೆಯೇ ಪುರುಷನು ಸ್ತ್ರೀ
ಮೂಲಕವಾಗಿ ಹುಟ್ಟುತ್ತಾನೆ; ಸಮಸ್ತಕ್ಕೂ ದೇವರೇ ಮೂಲಕಾರಣನು 13ನಿಮ್ಮೊಳಗೆ ನೀವೇ
ಯೋಚಿಸಿ ತೀರ್ಮಾನಿಸಿಕೊಳ್ಳಿರಿ. ಸ್ತ್ರೀಯು ಮುಸುಕು ಹಾಕಿಕೊಳ್ಳದೆ ದೇವರಿಗೆ ಪ್ರಾರ್ಥನೆ
ಮಾಡುವದು ಯುಕ್ತವೋ? 14ಪುರುಷನು ಕೂದಲು ಬೆಳಸಿಕೊಂಡರೆ ಅದು ಅವನಿಗೆ
ಅವಮಾನಕರವಾಗಿದೆಯೆಂದೂ 15ಸ್ತ್ರೀಯು ಬೆಳಸಿಕೊಂಡರೆ ಕೂದಲು ಅವಳಿಗೆ ಮುಸುಕಿಗೆ
ಬದಲಾಗಿ ಕೊಡಲ್ಪಟ್ಟಿರುವದರಿಂದ ಅದು ಅವಳಿಗೆ ಗೌರವವಾಗಿದೆಯೆಂದೂ ನಿಮಗೆ
ಸ್ವಭಾವ ಸಿದ್ಧವಾಗಿ ತಿಳಿಯುತ್ತದಲ್ಲವೋ? 16ಒಬ್ಬನು ವಾಗ್ವಾದಪ್ರಿಯನಾಗಿ ಕಾಣಿಸಿಕೊಂಡರೆ
ಇಂಥ ಪದ್ಧತಿ ನಮ್ಮಲ್ಲಿಲ್ಲ, ಮತ್ತು ದೇವರ ಸಭೆಗಳಲ್ಲಿಯೂ ಇಲ್ಲ ಎಂದು ತಿಳಿದುಕೊಳ್ಳಲಿ.**

**ವಚನ 4. ಪ್ರಾರ್ಥಿಸುವ** ಸಮಯದಲ್ಲಿ ಪವಿತ್ರಾತ್ಮನ ವಿಶೇಷವಾದ ವರವನ್ನು ಸೂಚಿಸಬಹುದು ಸೂಚಿಸಲಿಕ್ಕಿಲ್ಲ, **ಪ್ರವಾದನೆಯು** ಖಂಡಿತವಾಗಿ ಈ ಎರಡ ಸೂಚಿಸುತ್ತದೆ.

ಪೌಲನು ಚಟುವಟಿಕೆಗಳನ್ನು ಉಲ್ಲೇಖಿಸುತ್ತಿದ್ದಾನೆ ಯಾಕಂದರೆ ಇವುಗಳನ್ನು ಸಭೆಯ ಸಮುದಾಯದಲ್ಲಿ ಅಭ್ಯಾಸಿಸುತ್ತಿದರು.[6] **ತನ್ನ ತಲೆಯ ಮೇಲೆ ಏನನ್ನಾದರೂ ಹಾಕಿಕೊಳ್ಳುವದು** ಎಂಬ ವಾಕ್ಯಂಗವು (ವಾಸ್ತವದಲ್ಲಿ, "ತಲೆಗೆ ಅನುಸಾರವಾಗಿ ಹೊಂದಿಕೊಳ್ಳುವದು") ಉದ್ದವಾದ ಕೂದಲನ್ನು ಉಲ್ಲೇಖಿಸಿರಬಹುದು, ಅದರಂತೆ ಉಲ್ಲೇಖವು ಪೌಲನು ತಲೆಯನ್ನು ಮುಚ್ಚಿಕೊಳ್ಳುವದರ ಕುರಿತು ಮಾತನಾಡುತ್ತಿದ್ದಾನೆ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಪೌಲನು ಹೊರಗಿನ ಮುಸುಕನ್ನು ಉಪಯೋಗಿಸುವದು ಮತ್ತು ಕೂದಲು ಒದಗಿಸುವ ಸ್ವಾಭಾವಿಕ ಮುಸುಕು ಎರಡರ ಮಧ್ಯದಲ್ಲಿ ವ್ಯತ್ಯಾಸವನ್ನು ತೋರಿಸುತ್ತಾನೆ. ಒಂದು ವೇಳೆ ಒಬ್ಬರ ಕೂದಲಿನ ಉದ್ದಳತೆ ವಿಷಯವಾಗಿದ್ದಲ್ಲಿ, ಪೌಲನು ಪುರುಷನು ಆರಾಧನೆಮಾಡುವಾಗ ತನ್ನ ತಲೆಯನ್ನು ಬೋಳಿಸಿಕೊಳ್ಳಬೇಕು ಎಂದು ವಾದಿಸುತ್ತಿದ್ದಾನೆ. ಇಂಥಹ ಅವಶ್ಯಕತೆ ನಂಬಲಸಾಧ್ಯವಾಗಿದೆ. ಇದರೊಟ್ಟಿಗೆ, ಅವನು ಸ್ತ್ರೀಯ ಕೂದಲು ಅವಳಿಗೆ "ಗೌರವದ" ಸಂಕೇತವಾಗಿವೆ ಎಂದು ಉಲ್ಲೇಖಿಸುತ್ತಾನೆ (11:15). ಒಬ್ಬ ಸ್ತ್ರೀಯು ತನ್ನ ಗೌರವವನ್ನು ಏಕೆ ಮುಚ್ಚಿಕೊಳ್ಳಬೇಕು? Ben Witherington III, ಅವರ ಪ್ರಕಾರ,

> ಕೂದಲಿನ ಕುರಿತಾದ ಪೌಲನ ಚರ್ಚೆ (ವಚನಗಳು. 14ಜಿ.) ಬೆಂಬಲದ ವಾದವಾಗಿ ಕೊನೆಯಲ್ಲಿ ತರಲಾಗಿದೆ, ಒಂದು ಉದಾಹರಣೆ ತಲೆಗೆ ಮುಸುಕು ಹಾಕಿಕೊಳ್ಳುವ ವಿಧ . . . ಸಮಸ್ಯೆ ತಲೆಗೆ ಮುಸುಕುಗಳನ್ನು ಹಾಕಿಕೊಳ್ಳುವದು.[7]

ಹಳೆಯ, ಅದರೊಟ್ಟಿಗೆ ಕೆಲವು ಇತ್ತೀಚಿನ ವಿಮರ್ಶನಾ ಗ್ರಂಥಗಳು, ಪುರುಷರು ತಲೆಗೆ ಮುಸುಕು ಹಾಕಿಕೊಳ್ಳುವದು ಒಂದು ಅಲಂಕಾರಿಕ ತಂತ್ರವಾಗಿ ಸೇರಿಸಲಾಗಿದೆ ಇದರಿಂದಾಗಿ ಅವನು ಪುರುಷ ಮತ್ತು ಸ್ತ್ರೀ ಓದುಗರನ್ನು ಸಂಬೋಧಿಸಬಹುದು ಎಂದು ಅರ್ಥೈಸುತ್ತಾರೆ. ಈ ವಿಚಾರಕ್ಕೆ ಅನುಗುಣವಾಗಿ ಪೌಲನು ಪುರುಷರು ತಮ್ಮ ತಲೆಯ ಮೇಲೆ ಏನನ್ನು ಹೊದ್ದುಕೊಳ್ಳುತ್ತಾರೆ ಎಂಬ ವಿಷಯದಲ್ಲಿ ಆಸಕ್ತಿವುಳ್ಳವನಾಗಿಲ್ಲ; ತಲೆಗೆ ಮುಸುಕು ಹಾಕಿಕೊಳ್ಳುವದರ ಕುರಿತು ಆತನ ಎಚ್ಚರಿಕೆ ಸ್ತ್ರೀಯರ ಕುರಿತು ಕಾಳಜಿವುಳ್ಳವನಾಗಿದ್ದನು. ವಾಸ್ತವದಲ್ಲಿ ಮತ್ತು ಪುರಾತನ ವಸ್ತು ಶಾಸ್ತ್ರದ ಸಾಕ್ಷಿಗಳು ವಿಗ್ರಹಗಳ ಆರಾಧನೆಯಲ್ಲಿ ರೋಮನ್ನ ಪುರುಷರು ಮತ್ತು ಸ್ತ್ರೀಯರು ತಲೆಗೆ ಮುಸುಕು ಹಾಕಿಕೊಳ್ಳುವದು ಸ್ವಾಭಾವಿಕವಾಗಿತ್ತು.[8] ಕ್ರೈಸ್ತ ಪುರುಷ ಮತ್ತು ಸ್ತ್ರೀಯರು ತಲೆಗೆ ಮುಸುಕು ಹಾಕಿಕೊಳ್ಳುವದು ಅಪೊಸ್ತಲನಿಗೆ ಮಹತ್ವದ ವಿಷಯವಾಗಿತ್ತು.

ರೋಮನ್ನರ ಸಂಸ್ಕೃತಿ ಕೊರಿಂಥದಲ್ಲಿ ಮೊದಲನೆಯ ಶತಮಾನದ ಮಧ್ಯದಲ್ಲಿ ಬೇರೂರಿತ್ತು. ರೋಮನ್ನರ ಧಾರ್ಮಿಕ ಆಚಾರಗಳು ಆರಾಧಕರು, ಅದರಲ್ಲೂ ಪುರುಷರು ಆದರೆ ಸ್ತ್ರೀಯು ಸಹ, ದೇವರುಗಳಿಗೆ ಪ್ರತಿಷ್ಟಿಸಿದ ವಿಧಿಗಳನ್ನು ಆಚರಿಸುವಾಗ ತಮ್ಮ ತಲೆಯ ಮೇಲೆ ಯಾವುದೇ ವಿಧವಾದ ಮುಸುಕನ್ನು ಎಳೆದುಕೊಳ್ಳಬೇಕು. ರೋಮನ್ನ ಪರಂಪರೆಯ ಕ್ರೈಸ್ತರು ಸಹಜವಾಗಿ "ಪ್ರಾರ್ಥಿಸುವ ಅಥವಾ ಪ್ರವಾದನೆಯನ್ನು ಹೇಳುವಾಗ" ತಲೆಗೆ ಮುಸುಕನ್ನು ಹಾಕಿಕೊಳ್ಳುವ ಅಭ್ಯಾಸವನ್ನು ಮುಂದುವರೆಸಿದರು. ಪೌಲನು ನಂಬುವದನ್ನು Oster ಅವರು "ಆರಾಧನೆಯ ಸಮಯದಲ್ಲಿ ಪುರುಷರು ತಲೆಗೆ ಮುಸುಕು ಹಾಕಿಕೊಳ್ಳುವದು 11:3ರಲ್ಲಿ ದೃಢಪಡಿಸಿರುವ ಪುರಷ 'ನಾಯಕತ್ವಕ್ಕೆ'

ವಿರೋಧಭಾವದ್ದಾಗಿದೆ."[9]

ಖಂಡಿತವಾಗಿಯೂ, ಪೌಲನು ರೋಮನ್ ಅಭ್ಯಾಸವನ್ನು ಕ್ರೈಸ್ತ ಸಮುದಾಯದಲ್ಲಿ ತಲೆಗೆ ಮುಸುಕು ಹಾಕುವದನ್ನು ಪುರುಷರ ರೂಢಿಸಿಕೊಂಡಿರುವದನ್ನು ಪೌಲನು ತಿದ್ದುವದಕ್ಕೆ ಪ್ರಯತ್ನಿಸುತ್ತಿದ್ದಾನೆ. ಅಪೊಸ್ತಲನು ಸ್ತ್ರೀಯರನ್ನು, ರೋಮನ್ರನ್ನು ಅಥವಾ ಬೇರೆ ರೀತಿಯಲ್ಲಿ "ಪ್ರಾರ್ಥಿಸುವಾಗ ಅಥವಾ ಪ್ರವಾದನೆಯನ್ನು ಹೇಳುವಾಗ" ಮುಸುಕು ಹಾಕಿಕೊಳ್ಳದೇ ಇರುವವರನ್ನು ಸಹ ತಿದ್ದುತ್ತಿದ್ದಾನೆ.

Everett Ferguson ಅವರು ಹೇಳುತ್ತಾರೆ, ". . . ಯಜ್ಞವನ್ನು ಅರ್ಪಿಸುವದರಲ್ಲಿ ರೋಮನ್ರ ಅಭ್ಯಾಸ ಸ್ತ್ರೀಯರಿಗೆ ಮತ್ತು ಪುರುಷರಿಗೆ ಅನ್ವಯಿಸಿರುವದು ಈ ವಿವರಣೆಯನ್ನು ಜಟಿಲಗೊಳಿಸುತ್ತದೆ."[10] ಅವನು ಹೀಗೆ ಬರೆಯುತ್ತಾನೆ,

> 1 ಕೊರಿಂಥ 11ರಲ್ಲಿರುವ ಸಾಮಾಜಿಕ ಸನ್ನಿವೇಶವನ್ನು ನಾವು ಪುನಃ ರಚಿಸುವುದಾದರೆ, ಬಹುಶಃ ನಾವು ಸಭೆ ಅಥವಾ ಮನೆಯಲ್ಲಿ (ಅಥವಾ ಮನೆಗಳಲ್ಲಿ) ಕೂಡಿಬಂದಿರುವ ಕ್ರೈಸ್ತ ಶ್ರೀಮಂತ ಸದಸ್ಯರ (ಗಳ) ಅಥವಾ ಅನುಕಂಪವು (ಳ್ಳವರ) ಗುಂಪು ಎಂದು ಕಲ್ಪಿಸಿಕೊಳ್ಳಬಹುದು. ಮನೆಯಲ್ಲಿರುವ ಸ್ತ್ರೀಯರು ಸ್ವಂತತ್ರದಿಂದ ಮಾತಾಡುವ ಮತ್ತು ತಮ್ಮ ಸ್ವಂತ ಮನೆಯಲ್ಲಿ ಮುಸುಕಿಲ್ಲದೇ ಇರುವ ರೂಢಿಯನ್ನು ಹೊಂದಿರಬಹುದು. ಸನ್ನಿವೇಶದ ವಿಶೇಷವಾದ ಗುಣಲಕ್ಷಣದಿಂದಾಗಿ, "ನೀವು ಸಭೆಯಾಗಿ ಸೇರಿಬರುವಾಗ" (1 ಕೊರಿಂಥ 11:18), "ಸಂಪೂರ್ಣ ಸಭೆಯಾಗಿ ಸೇರಿಬರುವಾಗ" (1 ಕೊರಿಂಥ 14:23), ಪೌಲನು ಸಾರ್ವಜನಿಕ ಕೂಟದಲ್ಲಿ ಸರಿಹೊಂದುವ ಉಡುಪು ಮತ್ತು ವರ್ತನೆಯನ್ನು ನಿರ್ದೇಶಿಸುತ್ತಾನೆ.[11]

**ವಚನ 5.** ಪ್ರಾರ್ಥಿಸುವಾಗ ಅಥವಾ **ಪ್ರವಾದಿಸುವಾಗ ತನ್ನ ತಲೆಯ ಮೇಲೆ ಮುಸುಕನ್ನು ಹಾಕಿಕೊಳ್ಳದಿರುವ** ಸ್ತ್ರೀಯು ತನ್ನ ಮೇಲೆ ಸಹಜವಾಗಿ ತನ್ನ ಸ್ವಂತ ತಲೆಯ ಮೇಲೆ ಅವಮಾನವನ್ನು ಬರಮಾಡಿಕೊಳ್ಳುವವಳಾಗಿದ್ದಾಳೆ. ಪೌಲನು ಇದನ್ನು ಒತ್ತಾಯ ಪಡಿಸಲು ಈ ಪದವನ್ನು ಉಪಯೋಗಿಸಿರುವದಕ್ಕೆ ಯಾವ ಕಾರಣವೂ ಇಲ್ಲ. ರೂಪಕಾಲಂಕರಾವಾಗಿ 11:5 ಮತ್ತು ಆತನು ಹೇಳಿದಂತೆ 11:3ರಲ್ಲಿ "ತಲೆ" ಆಕೆಯ ಗಂಡನನ್ನು ಉಲ್ಲೇಖಿಸುತ್ತದೆ.

ಪ್ರವಾದನೆಯು ಪವಿತ್ರಾತ್ಮನ ಪ್ರಭಾವದಿಂದ ನಡೆಯುತ್ತದೆ. ಬಹುಶಃ ಪೌಲನ ಮನಸ್ಸಿನಲ್ಲಿರುವ ಪ್ರಾರ್ಥನೆ ಪ್ರವಾದನೆಯ ಭಾಗವಾಗಿರಬಹುದು. ಅಪೋಸ್ತಲನು "ಪ್ರಾರ್ಥಿಸುವ ಅಥವಾ ಪ್ರವಾದಿಸುವ" ಸ್ತ್ರೀಯ ಕಾರ್ಯಗಳನ್ನು ಆತ್ಮನ ಪ್ರಭಾವದಲ್ಲಿ ನಿರ್ಬಂದಿಸಲು ಕಲ್ಪಿಸಿಕೊಳ್ಳುತ್ತಿಲ್ಲ; ಆದರೆ ಇಂಥಹ ವಿಷಯದಲ್ಲಿ ಸಹ ಅವಳು ಪುರುಷ ಮತ್ತು ಸ್ತ್ರೀಯರ ಮಧ್ಯದಲ್ಲಿರುವ ಸಂಸ್ಕೃತಿಯ ವ್ಯತ್ಯಾಸವನ್ನು ಗುರುತಿಸುವಂತೆ ತನ್ನ ತಲೆಯ ಮೇಲೆ ಮುಸುಕನ್ನು ಎಳೆದುಕೊಳ್ಳಬೇಕು (14:34, 35ರಲ್ಲಿರುವ ವಿಮರ್ಶೆಯನ್ನು ನೋಡಿರಿ).

ಕ್ರೈಸ್ತ ಸ್ತ್ರೀಗೆ ಪೌಲನು ಹಾಕಿರುವ ನಿಷೇಧ ಸಾರ್ವಜನಿಕವಾಗಿ ತಲೆಯ ಮೇಲೆ ಮುಸುಕಿಲ್ಲದೆ ಕಾಣಿಸಿಕೊಳ್ಳುವದು ಬಹಳ ಮಟ್ಟಿಗೆ ಅವಳ ಯೆಹೂದ್ಯ/ಫರಿಸಾಯರ ಶಿಕ್ಷಣದಲ್ಲಿ ಕಂಡುಬರುತ್ತದೆ. ಯೆಹೂದ್ಯ ಸ್ತ್ರೀ ಮದುವೆಯಾಗುವಾಗ ಅವಳು ಮರ್ಯಾದೆಯ ಕೆಲವೊಂದು ನಿಯಮಗಳನ್ನು ಅನುಸರಿಸಬೇಕೆಂದು ನಿರೀಕ್ಷಿಸಲಾಗುತಿತ್ತು:

> . . . ಅವಳು ತನ್ನ ತಲೆಯ ಮೇಲೆ ಹಾಕಿಕೊಳ್ಳುವ ಮುಸುಕು ಅವಳ ಕೂದಲುಗಳನ್ನು ಕಟ್ಟಿ ಕೆನ್ನೆಯವರೆಗೆ ಬರಬೇಕಾಗಿತ್ತು. ಸಂಪ್ರದಾಯದಲ್ಲಿ ಅವಳು ತಲೆಗೆ ಮುಸುಕು ಹಾಕಿಕೊಳ್ಳದೇ ಹೊರಗೆ ಹೋಗುವಂತಿರಲಿಲ್ಲ. ಅದು ಅವಳಿಗೆ ಅವಮಾನಕರವಾಗಿತ್ತು ಅವಳ ಪತಿ ಅದನ್ನು ಮದುವೆಯಲ್ಲಿ ನೀಡಿದ ವರದಕ್ಷಿಣೆಯನ್ನು ನೀಡದೇ ವಿಛೇದನಕ್ಕೆ ಉಪಯೋಗಿಸಬಹುದಿತ್ತು.[12]

ಪುರುಷ ಮತ್ತು ಸ್ತ್ರೀ ಇಬ್ಬರೂ ದೇವರ ಎದುರಿನಲ್ಲಿ ಸಮಾನರಾಗಿದ್ದಾರೆ (ಗಲಾತ್ಯ 3:28). ಇದರ ಅರ್ಥ ಇಬ್ಬರ ಮಧ್ಯದಲ್ಲಿರುವ ಸಂಸ್ಕೃತಿಯ ವ್ಯತ್ಯಾಸಗಳು ತೆಗೆದುಹಾಕಲ್ಪಡುತ್ತವೆ ಎಂದಲ್ಲ. ಕೊರಿಂಥದಲ್ಲಿದ್ದ ಕ್ರೈಸ್ತ ಸ್ತ್ರೀಯು, ತಲೆಗೆ ಮುಸುಕು ಹಾಕಿಕೊಳ್ಳದೆ ಪ್ರಾರ್ಥಿಸುವದು ಅಥವಾ ಪ್ರವಾದಿಸುವದು, ದೈವೀಕ ಪ್ರಕಟನೆಯ ಸಂಪ್ರದಾಯವನ್ನು ಆಧರಿಸಿದ ಪ್ರಸ್ತುತ ಸಂಸ್ಕೃತಿಕ ನಿಯಮಗಳನ್ನು ತಿರಸ್ಕರಿಸುವದರ ಮೂಲಕ ತನ್ನನ್ನು ತಾನೇ ಅವಮಾನಪಡಿಸಿಕೊಳ್ಳುವದಾಗಿದೆ (1 ಕೊರಿಂಥ 11:8, 9), ಮತ್ತು ಸ್ವರೂಪ (11:14).

ಪೌಲನು ತನ್ನ ವಾದಕ್ಕೆ ಒತ್ತು ನೀಡಲು ಅತಿಶಯೋಕ್ತಿಯನ್ನು ಉಪಯೋಗಿಸುತ್ತಾನೆ. ಅವನು ತಲೆಗೆ ಮುಸುಕಿಲ್ಲದೇ ಪ್ರಾರ್ಥಿಸುವ ಅಥವಾ ಪ್ರವಾದಿಸುವ **ಸ್ತ್ರೀಯು ಮುಸುಕಿಲ್ಲದೇ ಇರುವದು ತಲೆಬೋಳಿಸಿಕೊಂಡಿರುವದು ಒಂದೇ ಎಂದು ಅವನು ದೃಢೀಕರಿಸುತ್ತಾನೆ**. ಅಪೊಸ್ತಲನು ಬಲವಾದ ಅಲಂಕಾರಿಕ ಭಾಷೆಯನ್ನು ಉಪಯೋಗಿಸುತ್ತಾನೆ. ಸ್ತ್ರೀಗೆ ತಲೆಬೋಳಿಸಿಕೊಳ್ಳುವದು ಅವಮಾನಕರವಾಗಿದೆ; ಆದರೆ ಪೌಲನು ಇಲ್ಲಿ ವೇಶ್ಯಯರನ್ನು ಉಲ್ಲೆಖಿಸುತ್ತಿಲ್ಲ. ಅಲ್ಲದೇ ಕೊರಿಂಥದಲ್ಲಿರುವ ವೇಶ್ಯೆಯರು ತಲೆಯನ್ನು ಬೋಳಿಸಿಕೊಳ್ಳುತ್ತಿದ್ದರು ಎಂಬುದಕ್ಕೆ ಯಾವ ಸಾಕ್ಷಿಯು ಇಲ್ಲ.[13] "ತಲೆಬೋಳಿಸಿಕೊಂಡ ಸ್ತ್ರೀ" ಅವರು ಹೇಳುತ್ತಾರೆ, "ಇದೊಂದು ಅಸ್ವಾಬಾವಿಕ ಸ್ಥಿತಿ ಅದು ಪ್ರಕೃತಿಸಹಜವಾದ ಮುಸುಕನ್ನು ತೆಗದುಬಿಡುತ್ತದೆ, ಮತ್ತು ಇದು ಈ ಸಂಸ್ಕೃತಿಯಲ್ಲ ಅಗೌರವದ ಸಂಕೇತವಾಗಿದೆ, ವಾದವು ಯಾವ ತಿರುಳನ್ನು ಹೊಂದಿರುವದಿಲ್ಲ."[14] *ಪೌಲನು ಪುರುಷನಿಗೆ ತಲೆಯ ಮೇಲೆ ಮುಸುಕು ಇರಬಾರದು ಅದೇ ಸಮಯದಲ್ಲಿ ಸ್ತ್ರೀಗೆ ಇರಲೇಬೇಕು.*

**ವಚನ 6.** ತಲೆಬೋಳಿಸಿಕೊಂಡವರಾಗಿ ಸಾರ್ವಜನಿಕವಾಗಿ ಕಾಣಿಸಿಕೊಳ್ಳುವ ಕೊರಿಂಥದ ಸ್ತ್ರೀಯರು ಸಾರ್ವಜನಿಕ ನಿರ್ಲಕ್ಷಕ್ಕೆ ಗುರಿಯಾಗಿ ಅನಾವಶ್ಯಕವಾಗಿ ವಿಕ್ಷಿಪ್ತರಾಗುವರು ಎಂಬುದಕ್ಕೆ ವಿರ್ಮಶನಾಕರರು ಒತ್ತು ನೀಡುತ್ತಾರೆ. ಪೌಲನು ಕೂದಲಿನ ಅಳತೆ ಅಥವಾ ಕೂದಲಿನ ವಿನ್ಯಾಸದ ಕುರಿತು ಸಂಬೋಧಿಸುತ್ತಿಲ್ಲ. ಪುರುಷ ಮತ್ತು ಸ್ತ್ರೀಯ ಕೂದಲಿನ ಅಳತೆಯ ಪ್ರಶ್ನೆ ಕೇವಲ ಉದಾಹರಣೆ, ಮುಖ್ಯಾಂಶವಲ್ಲ. ಅಪೊಸ್ತಲನು, ಒಂದುವೇಳೆ ಸ್ತ್ರೀಯು **ತನ್ನ ತಲೆಗೆ ಮುಸುಕು ಹಾಕಿಕೊಳ್ಳದಿದ್ದರೆ,** ಅವಳು **ತನ್ನ ತಲೆಯನ್ನು ಬೋಳಿಸಿಕೊಳ್ಳುವದು** ಒಳ್ಳೆಯದು ಎಂದು ತನ್ನ ಕೈಯಲ್ಲಿರುವ ವಿವಾದಕ್ಕೆ ಬೆಂಬಲವಾಗಿ ಈ ವಿಚಾರವನ್ನು ನಿವೇದಿಸುತ್ತಾನೆ. ಯಾಕಂದರೆ ಉದ್ದವಾದ ಕೂದಲು ಪುರುಷನಿಗೆ ಅವಮಾನಕರ ಆದರೆ ಸ್ತ್ರೀಗೆ ಗೌರವವಾಗಿತ್ತು (11:14, 15), ತಲೆಗೆ ಮುಸುಕು ಹಾಕಿಕೊಳ್ಳುವದು ಸ್ತ್ರೀಯ ನಿಲುವನ್ನು ಹೆಚ್ಚಿಸುತ್ತದೆ ಆದರೆ ಪುರುಷನಿಗೆ ಗೌರವದಿಂದ ಬೇರ್ಪಡಿಸುತ್ತದೆ. ಪೌಲನ ವಾದವು ಇಂದು ಅನೇಕರಿಗೆ ಗಲಿಬಿಲಿಯನ್ನು ಉಂಟು

ಮಾಡಿದರೂ, ಅದು ಕೊರಿಂಥಲ್ಲಿರುವ ಯೆಹೂದ್ಯ ಮತ್ತು ವಿಗ್ರಹಾರಾಧಕರ ಹಿನ್ನೆಲೆಯ ಇಬ್ಬರೂ ಕ್ರೈಸ್ತರಿಗೆ ಅರ್ಥಪೂರ್ಣವಾಗಿತ್ತು ಯಾಕಂದರೆ ಇದು ಅವರ ಜೀವಿತದ ಅನುಭವದಿಂದ ತೆಗೆದುಕೊಂಡಥದ್ದಾಗಿತ್ತು.

ಪ್ರಸ್ತುತದಲ್ಲಿರುವ ಪ್ರಶ್ನೆ ಪುರುಷ ಮತ್ತು ಸ್ತ್ರೀಯರ ಪರಸ್ಪರ ಸಂಬಂಧದ ಸಾಮಾಜಿಕ ನಿಯಮಗಳಿಗೆ ಸಂಬಂಧಿಸಿದ್ದಾಗಿತ್ತು. ಅದೇ ಸಮಯದಲ್ಲಿ ಸ್ತ್ರೀಯ ಕೂದಲಿನ ಅಳತೆಗೆ ಯಾವ ಮಹತ್ವವೂ ಇರಲಿಲ್ಲ, ಈ ಪಠ್ಯವು ಸಮಾಜದ ನಿಯಮಗಳು ಅನೈತಿಕ ಅಥವಾ ಅಧಾರ್ಮಿಕವಾಗಿಲ್ಲದೇ ಇರುವ ಕ್ರೈಸ್ತರು ಸಮಾಜದ ನೀತಿನಿಯಮಗಳಿಗೆ ಅನುಸಾರವಾಗಿ ಜೀವಿಸಬೇಕು. ಕೊರಿಂಥದಲ್ಲಿ ತಲೆಯನ್ನು ಬೋಳಿಸಿಕೊಂಡ ಮತ್ತು ತಲೆಗೆ ಮುಸುಕು ಹಾಕಿಕೊಳ್ಳದಿರುವ ಇಬ್ಬರೂ ಸಾಮಾಜಿಕವಾಗಿ ಪುರುಷ ಮತ್ತು ಸ್ತ್ರೀಯರಲ್ಲಿ ವ್ಯತ್ಯಾಸವನ್ನು ಹುಟ್ಟಿಸುವಂಥವರಾಗಿದ್ದರು.

**ವಚನ 7**. ಸ್ತ್ರೀಯರು ಮುಸುಕು ಹಾಕಿಕೊಳ್ಳಬೇಕು ಮತ್ತು ಪುರುಷರು ಹಾಕಿಕೊಳ್ಳಬಾರದು, ಎಂದು ಸಾಮಾಜಿಕ ನೀತಿ ನಿಯಮಗಳನ್ನು ನಿವೇದಿಸಿದ ನಂತರ ಅಪೊಸ್ತಲನು 11:7ರಲ್ಲಿರುವ ಪ್ರಕಟನೆಯೆಡೆಗೆ ತಿರುಗಿಕೊಳ್ಳುತ್ತಾನೆ. ಅವನು 11:3ರಲ್ಲಿ ತಾನು ನೀಡಿದ ಅಂಶವನ್ನು ಬೆಳೆಸುತ್ತಾನೆ: ಕ್ರಿಸ್ತನು ಪ್ರತಿಯೊಬ್ಬ ಮನುಷ್ಯನಿಗೆ ತಲೆಯಾಗಿರುವ ಪ್ರಕಾರ, ಪುರುಷನು ಸ್ತ್ರೀಗೆ ತಲೆಯಾಗಿದ್ದಾನೆ ಮತ್ತು ದೇವರು ಕ್ರಿಸ್ತನಿಗೆ ತಲೆಯಾಗಿದ್ದಾನೆ. ಪ್ರಾರ್ಥಿಸುವ ಮತ್ತು ಪ್ರವಾದಿಸುವ ಸಮಯದಲ್ಲಿ ತನ್ನ ತಲೆಗೆ ಮುಸುಕು ಹಾಕಿಕೊಳ್ಳುವ ಒಬ್ಬ ಪುರುಷನು ದೇವರನ್ನು ಅವಮಾನ ಪಡಿಸುವವನಾಗಿದ್ದಾನೆ. ಸೃಷ್ಟಿಯಲ್ಲಿ, ದೇವರು ಪುರುಷನನ್ನು ತನ್ನ ಸ್ವರೂಪದಲ್ಲಿ ಉಂಟು ಮಾಡಿದನು (ಆದಿ 1:26). ಈ ಸೃಷ್ಟಿಯ ಕಾರ್ಯ ದೇವರೊಂದಿಗೆ ಮನುಷ್ಯನ ಸಂಬಂಧವನ್ನು ಸಮರ್ಥಿಸುತ್ತದೆ. ಮುಂದೆ, ದೇವರು ಸ್ತ್ರೀಯನ್ನು ಸೃಷ್ಟಿಸಿದನು. ಸೃಷ್ಟಿಯ ಕ್ರಮಕ್ಕೆ ಅನುಸಾರವಾಗಿ, ಪೌಲನು ಸ್ತ್ರೀ ಮತ್ತು ಪುರುಷರು ಪರಸ್ಪರ ಸ್ವಾಭಾವಿಕ ಸಂಬಂಧವನ್ನು ಹೊಂದಿದ್ದಾರೆ ಎಂದು ವಾದಿಸುತ್ತಾನೆ. ತಲೆಗೆ ಮುಸುಕನ್ನು ಹಾಕಿಕೊಳ್ಳುವದು ದೇವರು ಅವರಿಗೆ ನೀಡಿದ ಪಾತ್ರಗಳಿಗೆ ಸಂಕೇತವಾಗಿವೆ. ಇತರ ಸಂಕೇತಗಳನ್ನು ಸಹ ಇದೇ ರೀತಿಯ ನೈಜ್ಯತೆಯನ್ನು ತಿಳಿಸಲು ಉಪಯೋಗಿಸಿರಬಹುದು.

ಪೌಲನು ಪುರುಷನು "ದೇವರ ಮಹಿಮೆಯಾಗಿದ್ದಾನೆ" ಎಂದು ಹೇಳುವಾಗ ಸಹಜವಾಗಿ ಅವನ ಮಾನಸಿಕ, ದೈಹೀಕ ಮತ್ತು ಆತ್ಮೀಕ ಜೀವಿತ ದೇವರ ಮಹಿಮೆಯನ್ನು ಪ್ರತಿಬಿಂಬಿಸುತ್ತದೆ ಎಂದು ಅರ್ಥೈಸಿರಬಹುದು. ಇದಕ್ಕೆ ವ್ಯತ್ಯಾಸವಾಗಿ, ಸ್ತ್ರೀಯು ತನ್ನ ಗಂಡನ ಮಹಿಮೆಯನ್ನು ಪ್ರತಿಬಿಂಬಿಸುತ್ತಾಳೆ. ಅಪೊಸ್ತಲನು ಇಲ್ಲಿಗೆ ನಿಲ್ಲುತ್ತಾನೆ. ಅವನು ಸ್ತ್ರೀಯು ತನ್ನ ಲಿಂಗದ ಆಧಾರದ ಮೇಲೆ ದೇವರಿಂದ ಯಾವುದೇ ರೀತಿಯಲ್ಲಿ ಹೆಚ್ಚು ಅಥವಾ ಕಡಿಮೆ ನಿಲುವನ್ನು ಅಥವಾ ಮೆಚ್ಚಿಕೆಯನ್ನು ಹೊಂದಿದ್ದಾಳೆ ಎಂದು ಆವನು ಸಲಹೆಯನ್ನು ನೀಡುವದಿಲ್ಲ.

**ವಚನಗಳು 8, 9. ಇದರ** (*γάρ*, *gar*), ವಿವರಣೆಯೊಂದಿಗೆ ಪ್ರಾರಂಭಿಸಿ, ಪೌಲನು ಸ್ತ್ರೀಯು ತನ್ನ ಗಂಡನ ಗೌರವವಾಗಿದ್ದಾಳೆ ಎಂದು ಹೇಳುವದನ್ನು ಮುಂದುವರೆಸುತ್ತಾನೆ (11:7ಬ). ಆದಿಕಾಂಡದಲ್ಲಿರುವ ಕಥೆ ಪುರುಷನ ಆದ್ಯತೆಯನ್ನು ಪ್ರದರ್ಶಿಸುತ್ತದೆ. ದೇವರು

ಮೊದಲು ಪುರುಷನನ್ನು ಸೃಷ್ಟಿಸಿದನು ನಂತರ ಸರಿಬೀಳುವ ಸಂಗಾತಿಯಾಗಿ ಸ್ತ್ರೀಯನ್ನು ಸೃಷ್ಟಿಸಿದನು (ಆದಿ 2:7, 22). ಸೃಷ್ಟಿಯ ಕ್ರಮದಲ್ಲಿ, ಮನುಷ್ಯನು ಸ್ತ್ರೀಗೆ ಜೀವದ ಮೂಲನಾಗಿದ್ದಾನೆ. ಸಾಮಾಜಿಕ ನಿಯಮಗಳಿಗೆ ಅನುಸಾರವಾಗಿ ಮುಸುಕು ಹಾಕಿಕೊಳ್ಳುವದು, ಕೊರಿಂಥದಲ್ಲಿರುವ ಸ್ತ್ರೀಯರಿಗೆ ದೇವರ ಸೃಷ್ಟಿಯಲ್ಲಿ ಪುರುಷನಿಗಿರುವ ಆದ್ಯತೆಯ ಸಂಕೇತವಾಗಿದೆ ಎಂದು ಪೌಲನು ಉದ್ದೇಶಿಸುತ್ತಾನೆ.

ತಮ್ಮ ನಿವೇದನೆಯನ್ನು ಆದಿಕಾಂಡದಿಂದ ಮುಂದುವರೆಸಿ, ಪೌಲನು 11:9ರಲ್ಲಿ ತಲೆಗೆ ಮುಸುಕು ಹಾಕಿಕೊಳ್ಳುವದು ಸೃಷ್ಟಿಯ ಸಮಯದಲ್ಲಿ ದೇವರು ಸ್ಥಾಪಿಸಿದ ಕ್ರಮ ಮತ್ತು ಉದ್ದೇಶದ ಸಂಕೇತವಾಗಿದೆ. ಸ್ತ್ರೀಯು ಪುರುಷನಿಗೆ ಸರಿಬೀಳುವ ಸಂಗಾತಿಯಾಗಿರಬೇಕೆಂದು ಸೃಷ್ಟಿಸಲ್ಪಟ್ಟಳು, ಇನ್ನೊಂದು ರೀತಿಯಲ್ಲಿ ಅಲ್ಲ. ಪೌಲನು ಇದನ್ನು ಮಂಡಿಸುವ ಪ್ರಕಾರ, ಪುರುಷನು ಸ್ತ್ರೀಗಾಗಿ ಸೃಷ್ಟಿಸಲಿಲ್ಲ. ದೇವರು ಪುರಷ ಮತ್ತು **ಸ್ತ್ರೀಯನ್ನು ಏಕಕಾಲಕ್ಕೆ ಸೃಷ್ಟಿಸಲಿಲ್ಲ, ಅಲ್ಲದೆ ಆತನು ಸ್ತ್ರೀಯನ್ನು ಮೊದಲು ಸೃಷ್ಟಿಸಲಿಲ್ಲ.** ಸೃಷ್ಟಿಯ ಕ್ರಮವು ಪುರುಷ ಮತ್ತು ಸ್ತ್ರೀಯ ಮಧ್ಯದಲ್ಲಿರುವ ಸಂಬಂಧದ ಹೇಳಿಕೆಯನ್ನು ನೀಡುತ್ತದೆ. ಆ ಕಾರಣದಿಂದಾಗಿ, ಸಾರ್ವಜನಿಕ ಸ್ಥಳಗಳಿಗೆ ಬರುವಾಗ ಪುರುಷ ಮತ್ತು ಸ್ತ್ರೀಯರ ಮಧ್ಯದಲ್ಲಿ ಸಾಮಾಜಿಕ ವ್ಯತ್ಯಾಸವನ್ನು ನಿರ್ವಹಿಸಬೇಕು. ಮನುಷ್ಯನ್ನು ತಲೆಗೆ ಮುಸುಕು ಹಾಕಿಕೊಳ್ಳವದು (11:7ಅ) ಅಥವಾ ಸ್ತ್ರೀಯು ತನ್ನ ತಲೆಗೆ ಮುಸುಕು ಹಾಕಿಕೊಳ್ಳದಿರುವದು (11:6) ದೇವರು ಸ್ಥಾಪಿಸಿದ ವ್ಯತ್ಯಾಸಗಳನ್ನು ಆಚರಣೆಯಲ್ಲಿ ತರುವದರಲ್ಲಿ ವಿಫಲರಾಗುವದಾಗಿದೆ.

**ವಚನ 10.** ಪೌಲನು, **ಆದುದರಿಂದ** διὰ τοῦτο, *dia touto*, ವಾಸ್ತವದಲ್ಲಿ ("ಇದರ ಕಾರಣದಿಂದಾಗಿ . . .") ಎಂದು ಹೇಳುವಾಗ, ಅವನು ಸಹಜವಾಗಿ, ಸೃಷ್ಟಿಯ ಕಥೆಗಳ ಆಧಾರದ ಮೇಲೆ ತಾನು ಮಾಡಿದ ನಿವೇದನೆಯು ಈ ನಿರ್ಧಾರವು ಸೂಚಿಸುತ್ತದೆ ಎಂದು ಪೌಲು ವಿವರಿಸುತ್ತಾನೆ. ಆದಾಗ್ಯೂ, ಆದಿಕಾಂಡದಿಂದ ತೆಗೆದುಕೊಂಡ ಅಂಶವು ಸ್ತ್ರೀಯು ಪುರುಷನಿಗೆ ಅಧೀನಳಾಗಿರಬೇಕು ಎನ್ನುವದರ ಮೇಲೆ ಕೇಂದ್ರಿಕರಿಸುವದಿಲ್ಲ. ಅವು ಕೇವಲ ಸಭೆಯಲ್ಲಿ ಇಬ್ಬರ ಮಧ್ಯದಲ್ಲಿ ಸಾಮಾಜಿಕ ವ್ಯತ್ಯಾಸಗಳನ್ನು ತೀರ್ಮಾನಿಸುವಂತೆ ಕಂಡುಬರುತ್ತದೆ; ಅದೇನಂದರೆ ಸ್ತ್ರೀಯು ಪ್ರಾರ್ಥಿಸುವ ಮತ್ತು ಪ್ರವಾದಿಸುವ ಸಮಯದಲ್ಲಿ ತಲೆಗೆ ಮುಸುಕು ಹಾಕಿಕೊಳ್ಳಬೇಕು ಮತ್ತು ಪುರುಷನು ಮುಸುಕು ಹಾಕಿಕೊಳ್ಳಬಾರದು. ಇಲ್ಲಿ, ತಲೆಗೆ ಮುಸುಕು ಹಾಕಿಕೊಳ್ಳುವದರ ಕುರಿತಾದ ತನ್ನ ಚರ್ಚೆಯಲ್ಲಿ ಮೊದಲನೆಯ ಬಾರಿಗೆ ಅಪೊಸ್ತಲನು ಅಧಿಕಾರ (ἐξουσία, *exousia*) ಎಂಬ ಪದವನ್ನು ಉಪಯೋಗಿಸುತ್ತಾನೆ. NASB ಹೇಳುತ್ತದೆ, **ಸ್ತ್ರೀಯು ತನ್ನ ತಲೆಯ ಮೇಲೆ ಅಧಿಕಾರದ ಸಂಕೇತವನ್ನು ಹಾಕಿಕೊಳ್ಳಬೇಕು.** NASB ಯಲ್ಲಿ ಓರೆ ಅಕ್ಷರದಲ್ಲಿರುವ ಪದಗಳನ್ನು ಅಲಕ್ಷಿಸುವದಲ್ಲ; "ಸಂಕೇತವಾಗಿವೆ" ಎಂಬ ಪದಗಳು ಅನುವಾದಕರಿಂದ ಒದಗಿಸಲ್ಪಟ್ಟಿವೆ. NIV1984 "ಅಧಿಕಾರದ ಸಂಕೇತ" ಎಂದು ನೀಡುತ್ತದೆ. RSV ಗ್ರೀಕ್ ಪಠ್ಯದಿಂದ ಸ್ವೀಕೃತವಾದ ಬಲಹೀನ ಭಾಗವನ್ನು ಅಳವಡಿಸಿಕೊಳ್ಳುತ್ತದೆ: "ಸ್ತ್ರೀಯು ತನ್ನ ತಲೆಗೆ ಮುಸುಕನ್ನು ಹಾಕಿಕೊಳ್ಳಲೇಬೇಕು."

ಈ ವೇದಭಾಗವನ್ನು ಓದುವ ಒಂದು ವಿಧ ಮುಸುಕನ್ನು ಸ್ರೀಯು ಇರುವ "ಅಧಿಕಾರದ" ಸಂಕೇತವಾಗಿ ತಿಳಿದುಕೊಳ್ಳಬೇಕು, ಮುಖ್ಯವಾಗಿ, ಪುರುಷನ "ಅಧಿಕಾರ."

ಇನ್ನೊಂದು ರೀತಿಯಲ್ಲಿ ಈ ವೇದಭಾಗವನ್ನು ಅರ್ಥೈಸುವದು ತಲೆಗೆ ಮುಸುಕು ಹಾಕಿಕೊಳ್ಳುವದು ಸ್ತ್ರೀಯರು ಪ್ರಾರ್ಥಿಸುವ ಮತ್ತು ಪ್ರವಾದಿಸುವ ಅಧಿಕಾರದ ಸಂಕೇತವಾಗಿದೆ, ಅಥವಾ ಅವಳಿಗೆ ತನ್ನ ಮೇಲೆ ಇರುವ ಅಧಿಕಾರ. ಸೃಷ್ಟಿಯಲ್ಲಿ ಪುರುಷನ ಆಧ್ಯತೆಯ ಪೌಲನ ನಿವೇದನೆ (11:8, 9) ಮತ್ತು ಕೆಳಗಿನ ವಚನಗಳಲ್ಲಿ (11:11, 12) "ಅಧಿಕಾರ" ಎಂಬ ಪದವನ್ನು ಮೃದುಗೊಳಿಸುವದು ಹಿಂದಿನ ಅರ್ಥೈಸುವಿಕೆಯನ್ನು ಬೆಂಬಲಿಸುತ್ತವೆ.

ವೇದಭಾಗವನ್ನು "ಆದುದರಿಂದ ಸ್ತ್ರೀಯರಿಗೆ ತಮ್ಮ ಸ್ವಂತ ತಲೆಯ ಮೇಲೆ ಅಧಿಕಾರ ಇರಲೇಬೇಕು" ಅದು ಏನನ್ನು ಅರ್ಥೈಸುತ್ತದೆ ಎಂದು ಈ ಅಂಶದ ವರೆಗೆ ಓದವದು, ಎನ್ನುವದಕ್ಕಿಂತ ಮುಸುಕನ್ನು ಒಟ್ಟಾರೆ ಸಾಂಕೇತಿಕ ಮೌಲ್ಯವಾಗಿ ತೆಗೆದುಕೊಳ್ಳುವದು ಅವಶ್ಯವಾಗಿದೆ. ಮುಸುಕನ್ನು ಪುರುಷನ ಆಧ್ಯತೆಯಾಗಿ ನೋಡುವದಕ್ಕಿಂತ, ಅದು ಸ್ವಯಃ ದೃಢೀಕರಿಸುವಿಕೆಗೆ ಸ್ತ್ರೀಯ ಹಕ್ಕಿನ ಸಂಕೇತವಾಗಿದೆ ಎಂದು ತೆಗೆದುಕೊಳ್ಳುವದು ಉತ್ತಮವಾಗಿದೆ. ಅರ್ಥದಲ್ಲಿ ಇಂಥಹ ಅಡಿಪಾಯದ ಬದಲಾವಣೆ ವಿವರಣೆಯಿಲ್ಲದೆ ಅಸಂಭವವಾಗಿದೆ.

ಅಪೊಸ್ತಲನು 11:10ರಲ್ಲಿ "ಅಧಿಕಾರ" ಎಂದು ಉಪಯೋಗಿಸುವ ಪದ ಒಡಂಬಡಿಕೆಯಾಗಿಲ್ಲ. ಸಾಮಾನ್ಯವಾಗಿ "ಅಧಿಕಾರ" ಎಂಬ ಪದವನ್ನು ಕ್ರಿಯಾತ್ಮಕವಾಗಿ ಉಪಯೋಗಿಸಲಾಗುತ್ತದೆ, ಏನಾದರೂ ಮಾಡುವ ಹಕ್ಕನ್ನು ತೊಡಗಿಸಿ ಕೊಳ್ಳುವದರೊಂದಿಗೆ. ಹಾಗೂ, ವಚನ 10 ಮತ್ತು ಅದರ ಮುಂದಿರುವ ಎರಡು ವಚನಗಳ ಅಥವಾ ಅದನ್ನು ಅನುಸರಿಸಿರುವ ಎರಡು ವಚನಗಳ ಮಧ್ಯದಲ್ಲಿ ಸಂಬಂಧ ಇರುವುದಾದರೆ, ಸ್ತ್ರೀಗೆ ತನ್ನ ಸ್ವಂತ ತಲೆಯ ಮೇಲೆ ಇರುವ "ಅಧಿಕಾರವು" ಹೇಗೆ ವಿವಾದಾಂಶವಾಗುತ್ತದೆ. ಒಬ್ಬರು ಹೀಗೆ ಹೇಳಬಹುದು ಸೃಷ್ಟಿಯ ಕ್ರಮವು ಪುರುಷನ ಆದ್ಯತೆಯನ್ನು ಪ್ರದರ್ಶಿಸುತ್ತದೆ ಮತ್ತು ಆತನ "ಅಧಿಕಾರವನಲ್ಲ"; ಅದರೆ ಒಮ್ಮೆ ಪದವು ಪರಿಚಯಿಸಲ್ಪಟ್ಟಾಗ, ಓದುಗರು ತಕ್ಷಣದಲ್ಲಿ ಪೌಲನು ಸ್ತ್ರೀಗೆ ತನ್ನ ಸ್ವಂತ ತಲೆಯ ಮೇಲೆ "ಅಧಿಕಾರವಿದೆ" ಎಂದು ತೋರಿಸಲು ಆದಿಕಾಂಡವನ್ನು ಉಲ್ಲೇಖಿಸುತ್ತಾನೆ ಎಂದು ನಿರ್ಧರಿಸಲು ಆಗುವದಿಲ್ಲ. ಪುರುಷ ಮತ್ತು ಸ್ತ್ರೀಯರ ಮಧ್ಯದಲ್ಲಿ ಸಮಾನತೆಯ ಆಧುನಿಕ ಸೂಕ್ಷ್ಮಜ್ಞಾನ ಇಂಥಹ ಅರ್ಥೈಸುವಿಕೆಯ ಹಿಂದಿರುವ ಪ್ರೇರೆಪಣೆಯಾಗಿದೆ ಮತ್ತು ಪೌಲನು ಮತ್ತು ಆತನ ಓದುಗರು ತಿಳಿದುಕೊಂಡ ಅರ್ಥ ಇದಾಗಿರುವದಿಲ್ಲ ಎಂದು ಸಂದೇಹಿಸಬಹುದಾಗಿದೆ.

ಈ ಸನ್ನಿವೇಶಕ್ಕೆ ನಿಷ್ಕ್ರೀಯ ಭಾವನೆ ಅವಶ್ಯವಾಗಿರುವಾಗ, ಅನೇಕ ಅನುವಾದಗಳು NASB ಯಂತೆ ಇವೆ: ". . . ಸ್ತ್ರೀಯು ಅಧಿಕಾರದ ಸಂಕೇತವಾದ ಮುಸುಕನ್ನು ಹಾಕಿಕೊಳ್ಳಲೇಬೇಕು." ಪುರುಷನಿಗೆ ಸ್ತ್ರೀಯ ಮೇಲೆ ಯಾವ "ಅಧಿಕಾರವಿದೆ" ಅಥವಾ ಅದನ್ನು ಹೇಗೆ ಅಭ್ಯಾಸಿಸಬೇಕು ಇದರಲ್ಲಿ ಪೌಲನಿಗೆ ಆಸಕ್ತಿಯಿಲ್ಲ. ಅವನು ಪುರಷರು ನೈತಿಕವಾಗಿ ಅಥವಾ ಇಲ್ಲದೆಯೂ ಸ್ತ್ರೀಗಿಂತ ಶ್ರೇಷ್ಠರು ಎಂದು ಹೇಳುತ್ತಿಲ್ಲ. ಪೌಲನು ಅಸಾಮಾನ್ಯವಾದ ಆತ್ಮನ ಸಾಮರ್ಥ್ಯವನ್ನು ಹೊಂದಿದ್ದಾರೆ ಎಂಬುದರ ಕುರಿತಾಗಿ ಮಾತನಾಡುತ್ತಿದ್ದಾನೆ ಎಂಬುದನ್ನು ಓದುಗರು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು. ಆದುದರಿಂದ ಅವರು ಆತ್ಮನು ಪ್ರೇರೆಪಿಸುವ ಹಾಗೆ ಪ್ರಾರ್ಥಿಸಬೇಕು ಮತ್ತು

ಪ್ರವಾದಿಸಬೇಕು, ಆದರೂ ಅವರು ಪುರುಷರು ಮತ್ತು ಸ್ತ್ರೀಯರ ಮಧ್ಯದಲ್ಲಿ ಇರುವ ಸಾಮಾಜಿಕ ವ್ಯತ್ಯಾಸವನ್ನು ತೋರಿಸಲು ತಲೆಗೆ ಮುಸುಕನ್ನು ಹಾಕಿಕೊಳ್ಳಬೇಕು.

ಪೌಲನು **ದೇವದೂತರ** ಕಾರಣದಿಂದಾಗಿ ಎಂದು ಸೇರಿಸುವಾಗ, ಅವನು ಸಹಜವಾಗಿ ಸಭೆಯ ಆರಾಧನೆಯನ್ನು ಪರೀಕ್ಷಿಸುವ ಸಂದೇಶವಾಹಕರನ್ನು ಅಥವಾ ದೇವರ ದೂತರನ್ನು ಉಲ್ಲೇಖಿಸುತ್ತಿದ್ದಾನೆ. ಇದಕ್ಕಿಂತ ಹೆಚ್ಚು ವಿಶಿಷ್ಟವಾಗಿರುವದು ಅಸಾಧ್ಯವಾಗಿದೆ. ಪೌಲನು ಪ್ರಾಸಂಗಿಕವಾಗಿ ದುರಾತ್ಮಗಳ ಬಲದ ಕುರಿತು ಉಲ್ಲೇಖಿಸುವಾಗ, ಅವನು ಅವರನ್ನು "ದೂತರು" ಎಂದು ಕರೆಯುವದಿಲ್ಲ. ವಿರಳವಾದ ಸಂದರ್ಭಗಳಲ್ಲಿ, ದೂತರನ್ನು ಅವನು ಕೆಟ್ಟ ದೂತರು, "ಸೈತಾನನ ದೂತರು" ಎಂದು ಕರೆಯುತ್ತಾನೆ (2 ಕೊರಿಂಥ 12:7), ಅಥವಾ ವಾಗಾಡಂಬರದಿಂದ "ದೂತರುಗಳ ಆರಾಧನೆ" (ಕೊಲಸ್ಸೆ 2:18) ಎಂದು ಉಲ್ಲೇಖಿಸುತ್ತಾನೆ. ಸನ್ನಿವೇಶದ ಬೇಡಿಕೆಯಿಲ್ಲದಿದ್ದಲ್ಲಿ, ಓದುಗರು "ದೂತರುಗಳನ್ನು" ಉದಾರಿಗಳಾದ ದೇವರ ದೂತರು ಎಂದು ತಳಿದುಕೊಳ್ಳಬೇಕು (ನೋಡಿರಿ 1 ಕೊರಿಂಥ 4:9; 6:3).

**ವಚನ 11.** ಬಹುಶಃ ಕೆಲವು ಪುರುಷರು ಸೃಷ್ಟಿಯಲ್ಲಿರುವ ಪುರುಷನ ಪ್ರಾಧಾನ್ಯತೆಯನ್ನು ಪುರುಷನಿಗಿರುವ ಆತ್ಮೀಕ ಸ್ಥಾನದಲ್ಲಿ ಸ್ತ್ರೀಯರು ಹಂಚಿಕೊಳ್ಳಲು ಆಗುವದಿಲ್ಲ ಎಂದು ವಾದಿಸುವದಕ್ಕೆ ಉಪಯೋಗಿಸಿರಬಹುದು. ಪೌಲನು ಇದನ್ನು ಅನುಮತಿಸುವದಿಲ್ಲ. ಪುರುಷ ಮತ್ತು ಸ್ತ್ರೀ ಇಬ್ಬರೂ ಒಬ್ಬರಿಗೊಬ್ಬರು ಪೂರಕವಾಗಿದ್ದಾರೆ, ದೇವರನ್ನು ಮಹಿಮೆಪಡಿಸುವದಕ್ಕಾಗಿ ಒಟ್ಟಾಗಿ ಕಾರ್ಯಮಾಡುವವರಾಗಿದ್ದಾರೆ. ಪೌಲನು ಹೇಳುತ್ತಾನೆ **ಕರ್ತನಲ್ಲಿ ಸ್ತ್ರೀಯು ಪುರುಷನಿಗಿಂತ ಸ್ವತಂತ್ರಳಾಗಿಲ್ಲ ಅಲ್ಲದೆ ಪುರುಷನು ಸ್ತ್ರೀಗಿಂತ ಸ್ವತಂತ್ರನಾಗಿಲ್ಲ.** ಇಬ್ಬರೂ ಪಾಪದಲ್ಲಿ ತಪ್ಪಿಹೋಗಿದ್ದಾರೆ; ಇಬ್ಬರೂ ದೇವರ ಕೃಪೆಯಿಂದ ರಕ್ಷಣೆಯನ್ನು ಹೊಂದಿದ್ದಾರೆ. ಅಪೊಸ್ತಲನು ಕ್ರೈಸ್ತರು ಸಾಮಾಜಿಕ ಕೂಟಗಳನ್ನು ಗೌರವಿಸಬೇಕು ಎನ್ನುವದರಲ್ಲಿ ಕಳಕಳಿಯುಳ್ಳವನಾಗಿದ್ದಾನೆ. ಅವನು ತನ್ನ ಹೆಂಡತಿಯನ್ನು ಮತ್ತು ಮಕ್ಕಳನ್ನು ಉದ್ಧಟತನದಿಂದ ಆಳಲು ಪ್ರಯತ್ನಿಸುವ ಮನುಷ್ಯನನ್ನು ಬೆಂಬಲಿಸುವದಿಲ್ಲ.

**ವಚನ 12.** ಪ್ರಾರಂಭದಲ್ಲಿ, **ಸ್ತ್ರೀಯು ಪುರುಷನಿಂದ** ಉತ್ಪತ್ತಿಯಾದಳು; ಆದರೆ ಸಾಮಾನ್ಯ ಜನನದಲ್ಲಿ, **ಪುರುಷನು ಸ್ತ್ರೀಯ ಮೂಲಕ** ಈ ಲೋಕಕ್ಕೆ ಬರುತ್ತಾನೆ. ಯಾವುದೇ ಲಿಂಗವು ಇನ್ನೊಂದನ್ನು ಅಲಕ್ಷತನದಿಂದ ನೋಡುವದಲ್ಲ. ಎಲ್ಲರೂ ದೇವರಲ್ಲಿ ಒಂದೇ ಆಗಿದ್ದಾರೆ. Garland ಅವರು ಈ ರೀತಿಯಲ್ಲಿ ಹೇಳುತ್ತಾರೆ: ಈ ಪುರುಷ ಮತ್ತು ಸ್ತ್ರೀಯ ಪರಸ್ಪರ ಅವಲಂಬನೆ 12:21ರಲ್ಲಿರುವ ಹೇಳಿಕೆಯಂತೆಯೇ ಮುನ್ನಡೆಸುತ್ತದೆ: "ಕಣ್ಣು ಕೈಗೆ ನನಗೆ ನಿನ್ನ ಅವಶ್ಯವಿಲ್ಲವೆಂದು ಹೇಳಲಾಗುವದಿಲ್ಲ."[15]

**ವಚನ 13.** ಪೌಲನು ಸಾಮಾಜಿಕ ನಿಯಮಗಳನ್ನು ಕೊರಿಂಥದವರು ತಾವೇ ತಿಳಿದುಕೊಂಡಿರುವ ರೀತಿಯಲ್ಲಿ ನಿವೇದಿಸುತ್ತಾನೆ (ನೋಡಿರಿ 10:15). ಕೊರಿಂಥದ ಸಮಾಜದಲ್ಲಿರುವ ಸಂಪ್ರದಾಯಗಳು, ಸ್ತ್ರೀಯರು ಪ್ರಾರ್ಥಿಸುವಾಗ ತನ್ನ ತಲೆಗೆ "ಮುಸುಕಿಲ್ಲದೇ" (ἀκατακάλυπτον, *akatakalupton*) ಇರುವದಾಗಿರಲಿಲ್ಲ. ಸಹೋದರರು ತಮ್ಮನ್ನು ತಾವು **ತೀರ್ಮಾನಿಸಿಕೊಳ್ಳಬೇಕು**. ಸ್ತ್ರೀಗೆ ಮುಸುಕಿನ ಅವಶ್ಯಕತೆ ಇರುವದು ಸ್ವಯಂ-ಸಾಕ್ಷಿಯಾಗಿತ್ತು.

ಪೌಲನ ಮನಸ್ಸಿನಲ್ಲಿರುವ ಸಲಹೆ ಪುರುಷರ ಅನುಪಸ್ಥಿತಿಯಲ್ಲಿ ಸ್ತ್ರೀಯರು ಆರಾಧನೆಗಾಗಿ ಸೇರಿಬರುವಾಗ ಅವರು ನಡೆದುಕೊಳ್ಳುವ ರೀತಿಯನ್ನು ಅಲ್ಲಗಳೆಯದಿರುವದು ಅವಶ್ಯವಾಗಿತ್ತು. ಸಾರ್ವಜನಿಕ ಆರಾಧನೆಯ ಸ್ಥಳದಲ್ಲಿ ಪುರುಷರು ಮತ್ತು ಸ್ತ್ರೀಯರು ಉಪಸ್ಥಿತಿರಿರುವಾಗ, ಮುಸುಕಿಲ್ಲದೆ ಪ್ರಾರ್ಥಿಸುವದರ ಮೂಲಕ, ಕೊರಿಂಥದ ಸ್ತ್ರೀ ಅವಳು ವಾಸಿಸುವ ಸಂಸ್ಕೃತಿಯ ವ್ಯಾಖ್ಯಾನಿಸಿದ ಮರ್ಯಾದೆಗೆ ಅವಮಾನವನ್ನು ತರುವಂತವಳಾಗಿದ್ದಾಳೆ.

ಪೌಲನು ಕೇಳುತ್ತಾನೆ, **ಮುಸುಕಿಲ್ಲದೇ ದೇವರಿಗೆ ಪ್ರಾರ್ಥಿಸುವದು ಸ್ತ್ರೀಗೆ ಯೋಗ್ಯವಾಗಿದೆಯೋ?** ತಲೆಗೆ ಮುಸುಕುಹಾಕಿಕೊಳ್ಳುವದಕ್ಕೆ ಒಂದು ಕ್ರಮವಿದೆ. ಆ ಸಂಸ್ಕೃತಿಯಲ್ಲಿ, ಅವರಿಬ್ಬರೂ ಒಟ್ಟಾಗಿ ಸಾರ್ವಜನಿಕ ಕೂಟದಲ್ಲಿ ಸೇರಿಬರುವಾಗ, ಪುರುಷ ಮತ್ತು ಸ್ತ್ರೀಯರ ಮಧ್ಯದಲ್ಲಿ ಸ್ವಲ್ಪ ಸಮಂಜಸವಾದ ಮಟ್ಟಿಗೆ ಅಂತರವನ್ನು ಇಟ್ಟುಕೊಳ್ಳವದನ್ನು ಅವಳ ನಡತೆ ಸಾಕ್ಷೀಕರಿಸುತ್ತದೆ. ಪೌಲನು ತಾನು ಹೇಳಿದ್ದೆಲ್ಲವೂ, ಕೇವಲ ಸ್ತ್ರೀಯರೆಡೆಗೆ ಸೂಚಿಸುತ್ತದೆ ಎಂದು ಸಲಹೆ ನೀಡುವದಿಲ್ಲ. ಪ್ರಾರ್ಥಿಸುವ ಮತ್ತು ಪ್ರಾವಾದಿಸುವ ಪುರುಷರು ತಮ್ಮ ತಲೆಗೆ ಮುಸುಕು ಹಾಕಿಕೊಳ್ಳುವದು ಅವಮರ್ಯಾದೆ ಎಂಬುದು ಹಿನ್ನೆಲೆಯಲ್ಲಿದೆ.

**ವಚನಗಳು 14, 15.** ಉದ್ದವಾದ ಕೂದಲನ್ನು ಇಟ್ಟುಕೊಳ್ಳುವದು ಪುರುಷನಿಗೆ ಅವಮರ್ಯಾದೆಯಾಗಿದೆ ಎಂಬುದನ್ನು **ನಿಸರ್ಗವು ನಮಗೆ ಹೇಗೆ ಬೋಧಿಸುತ್ತದೆ?** ಸ್ಪಷ್ಟವಾಗಿ, ಪುರುಷನ ಕೂದಲೂ ಸಹ ಸ್ತ್ರೀಯ ಕೂದಲಿನಂತೆ ಉದ್ದವಾಗಿ ಬೆಳೆಯುತ್ತದೆ. ಪೌಲನು "ನಿಸರ್ಗ" ವನ್ನು ಅರ್ಥಮಾಡಿಕೊಂಡ ಒಂದು ವಿಧವೆಂದರೆ ಸಾಮಾನ್ಯವಾಗಿ ಸಮ್ಮತಿಸಿರುವ ಒಡಂಬಡಿಕೆಗಳ ಮೂಲಕವಾಗಿ ಬೋಧಿಸುತ್ತಾನೆ. ಅವನ ದೃಷ್ಟಿಕೋನದಲ್ಲಿ, ಮರ್ಯಾದೆಯ ಮಿತಿಯೊಳಗೆ ಇರುವ ಯಾವುದೇ ಆಗಲಿ ಅದು ಸೃಷ್ಟಿಯಿಂದ ದೊರೆತಂಥದ್ದು (11:13); ಯಾವುದೇ ರೀತಿಯ ಅನೈತಿಕ ಅಥವಾ ಸಮಾಜಿಕವಾಗಿ ಸಮ್ಮತಿಹೊಂದದಿರುವ ಅಭ್ಯಾಸಗಳು ಸೃಷ್ಟಿಗೆ ವಿಭಿನ್ನವಾಗಿವೆ. ಕೆಲವು ಸಂದರ್ಭಗಳಲ್ಲಿ, ಮರ್ಯಾದೆಗಿಂತ ಹೆಚ್ಚು ಅಪಾಯದಲ್ಲಿದೆ. ಉದಾಹರಣೆಗೆ, ರೋಮಾ 1:26ರಲ್ಲಿ ಅಪೊಸ್ತಲನು ದೇವರ ಅಭಿಷಿಕ್ತ ನೈತಿಕರೆ ಮತ್ತು ಸ್ತ್ರೀಯರು "ಸ್ವಾಭಾವಿಕ ಕಾರ್ಯಗಳನ್ನು, ಅಸ್ವಾಭಾವಿಕ ಕಾರ್ಯಗಳೊಂದಿಗೆ ಬದಲಾಯಿಸಿಕೊಳ್ಳುವದಾಗಿದೆ." "ಸೃಷ್ಟಿಯು ತಾನೇ" ನೈತಿಕತೆಯ ಬೋಧಕನಾಗಿದೆ, ಪೌಲನು ಸಹ ಧೀರ್ಘಕಾಲದ ಸಾಮಾಜಿಕ ಸಂಪ್ರದಾಯಗಳಿಗೆ ಸೃಷ್ಟಿಯ ಬೆಂಬಲವನ್ನು ಕೇಳಿಕೊಳ್ಳುತ್ತಾನೆ. ಆ ಸಮುಯದಲ್ಲಿ ಕೊರಿಂಥದ ಸಮಾಜದಲ್ಲಿ, ಉದ್ದವಾದ ಕೂದಲನ್ನು ಇಟ್ಟುಕೊಳ್ಳುವದು ಪುರುಷನಿಗೆ ಅವಮಾನವಾಗಿತ್ತು. ಇಂಥಹ ಅಭ್ಯಾಸವು ಸೃಷ್ಟಿಯ ಬೋಧನೆಗೆ ವ್ಯತಿರಿಕ್ತವಾಗಿದೆ. ಕೊರಿಂಥದವರ ಆಸಕ್ತಿಗೆ ಸಂಬಂಧಿಸಿದಂತೆ ಅದು ಅವರ ಅನುಭವಕ್ಕೆ ವಿಭಿನ್ನವಾಗಿತ್ತು. ಅಪೊಸ್ತಲನು ಈ ಸಂಪ್ರದಾಯವನ್ನು ತನ್ನ ವಾದವನ್ನು ಪುನಶ್ಚೇತನಗೋಳಿಸಲು ಉಪಯೋಗಿಸುತ್ತಾನೆ, ಪುರುಷನಿಗೆ ತಲೆಯ ಮೇಲೆ ಮುಸುಕನ್ನು ಹಾಕಿಕೊಂಡು ಪ್ರಾರ್ಥಿಸುವದು ಮತ್ತು ಪ್ರವಾದಿಸುವದು ಸರಿಯಲ್ಲ. ಅಪೊಸ್ತಲನು ಪುರುಷರ ಅಥವಾ ಸ್ತ್ರೀಯರ ಉದ್ದ ಅಥವಾ ಗಿಡ್ಡ ಕೂದಲಿನ ಹೊಸ ವಿಷಯವನ್ನು ತಕ್ಷಣ ತೆಗೆದುಕೊಳ್ಳುವದಿಲ್ಲ. ಬದಲಾಗಿ, ಅವನು ಪುರುಷರಿಗೆ ಗಿಡ್ಡ ಕೂದಲು

ಮತ್ತು ಸ್ತ್ರೀಯರಿಗೆ ಉದ್ದ ಕೂದಲು ಅವರ ಗುಣಲಕ್ಷಣವೆಂದು ಊಹಿಸುತ್ತಾನೆ ಮತ್ತು ಸ್ತ್ರೀಯು ತನ್ನ ತಲೆಗೆ ಮುಸುಕನ್ನು ಹಾಕಿಕೊಳ್ಳುವದು ಮರ್ಯಾದೆ ಎಂಬುದಕ್ಕೆ ಉದಾಹರಣೆಯಾಗಿ ಉಪಯೋಗಿಸುತ್ತಾನೆ.

ಪುರುಷನ **ಉದ್ದವಾದವಾದ ಕೂದಲು** ಅವನಿಗೆ **ಅವಮಾನಕಾರ** ಎಂಬ ಕಂಠೋಕ್ತಿ ಐತಿಹಾಸಿಕ ಆಸಕ್ತಿಯನ್ನು ಹೊಂದಿದೆ. ಸ್ಪಾರ್ಟಾದ ಯೋಧರು ಅವರ ಉದ್ದನೆಯ ಕೂದಲಿಗೆ ಹೆಸರಾಗಿದ್ದರು; ಅವರ ಸಂಪ್ರದಾಯ ತಮ್ಮ ಪೂರ್ವಜರಿಂದ ಆಸಕ್ತಿಯನ್ನು ಹೊಂದಿಕೊಂಡಿತ್ತು ಸಂಕ್ಷಿಪ್ತವಾಗಿ ಇದು ನಿಯಮಗಳಿಗೆ ವಿರೋಧವಾಗಿತ್ತು.[16] ಸಾಮಾನ್ಯವಾಗಿ, ಗ್ರೀಕ್ ಮತ್ತು ರೋಮ್ನಲ್ಲಿ ಪುರುಷರು ಗಿಡ್ಡ ಕೂದಲನ್ನು ಇಟ್ಟುಕೊಳ್ಳುತ್ತಿದ್ದರು; ಸ್ತ್ರೀಯರು ಕೂದಲನ್ನು ಉದ್ದವಾಗಿ ಬೆಳೆಸುತ್ತಿದ್ದರು. ಪೌಲನು ಅವರು ಸಾರ್ವಜನಿಕವಾಗಿ ಪ್ರಾರ್ಥಿಸುವಾಗ ಮುಸುಕು ಹಾಕಿಕೊಳ್ಳುವ ಈ ಅಭ್ಯಾಸವನ್ನು ಪುರುಷರು ಮತ್ತು ಸ್ತ್ರೀಯರಿಗೆ ತನ್ನ ಬೋಧನೆಯಲ್ಲಿ ಉಪಯೋಗಿಸಿಕೊಂಡನು. **ಅವಳಿಗೆ ಅವಳ ಕೂದಲು ಮುಸುಕಾಗಿ ಕೊಡಲ್ಪಟ್ಟಿದೆ** ಎಂದು ಅವನು ಸೇರಿಸುತ್ತಾನೆ (11:15) ಪುರುಷನ ಅಥವಾ ಸ್ತ್ರೀಯ ಉತ್ಪತ್ತಿಯಲ್ಲಿ ಉದ್ದ ಅಥವಾ ಗಿಡ್ಡ ಕೂದಲಿನ ಒಲವಿಗೆ ಸಂಬಂಧಿಸಿದ ಯಾವುದನ್ನೂ ಅಪೊಸ್ತಲನು ವಾದಿಸುತ್ತಿಲ್ಲ.

**ವಚನ 16.** ಪೌಲ ತಲೆಗೆ ಮುಸುಕು ಹಾಕಿಕೊಳ್ಳುವ ಚರ್ಚೆಯನ್ನು ಮತ್ತು ಸಮುದಾಯ ಆರಾಧನೆಯಲ್ಲಿ ಸದರ ಪರಿಣಾಮದ ಕುರಿತು ಕೊರಿಂಥದವರನ್ನು ಹೊಗಳುತ್ತಾ ಪ್ರಾರಂಭಿಸುತ್ತಾನೆ (11:2). ಸಭೆಯು ಪೌಲನು ಅವರಿಗೆ ಆಜ್ಞಾಪಿಸಿದ ಅಭ್ಯಾಸವನ್ನು ಅನುಸರಿಸುತ್ತಿರಬಹುದು. ಕ್ರೈಸ್ತ ಕೂಟದಲ್ಲಿ ತಮ್ಮ ತಲೆಗೆ ಮುಸುಕಿಲ್ಲದೇ ಆರಾಧಿಸುವಲ್ಲಿ ಪುರುಷರಿಗೆ ನೆಮ್ಮದಿ ಇರಲಿಲ್ಲ. ವಿಗ್ರಹಾರಾಧಕರಂತೆ, ಅವರು ರೋಮನ್ ದೇವರುಗಳಿಗೆ ಸೇವೆಯನ್ನು ಸಲ್ಲಿಸುವಾಗ ತಮ್ಮ ತಲೆಗೆ ಮುಸುಕನ್ನು ಹಾಕಿಕೊಳ್ಳುತ್ತಿದ್ದರು. ಆರಾಧನೆಯ ಕೂಟದಲ್ಲಿ ಒಂದುವೇಳೆ ಪುರುಷರಿಗೆ ಮುಸುಕು ಅನಾವಶ್ಯಕವಾಗಿದ್ದಲ್ಲಿ, ಅದು ತಮಗೂ ಸಹ ಅನಾವಶ್ಯಕವಾಗಿದೆ ಎಂದು ಸ್ತ್ರೀಯರು ಯೋಚಿಸುತ್ತಿದ್ದರು. ಪೌಲನ ಮಾತುಗಳು ಸಭೆಯ ಸಂಪ್ರದಾಯವನ್ನು ಪುನರುಜ್ಜೀವನಗೊಳಿಸಿದವು ಮತ್ತು ಈ ಕ್ರೈಸ್ತರು ಏನು ಮಾಡುತ್ತಿದ್ದರೋ ಅದಕ್ಕೆ ಪ್ರೋತ್ಸಾಹ ದೊರಕಿತು.

ಅಪೊಸ್ತಲನು ಇನ್ನೊಂದು ವಿಮರ್ಶೆಯನ್ನು ಸೇರಿಸಿದನು. ಕೊರಿಂಥದ ಸಭೆಯಲ್ಲಿ ಸಮಾಧಾನ ಅವನು ಯಾರಾದರೂ ಆರಾಧನೆಯಲ್ಲಿ ಪುರುಷ ಮತ್ತು ಸ್ತ್ರೀಯರಿಗೆ ಇರುವ ವಿಭಿನ್ನ ಪಾತ್ರಗಳನ್ನು ಅಲಕ್ಷಿಸಿದ್ದಲ್ಲಿ ಅವರು ಅಪೊಸ್ತಲರನ್ನು ಮತ್ತು ಎಲ್ಲೆಡೆಯಲ್ಲಿ ಇರುವ ದೇವರ ಸಭೆಯನ್ನು ವಿರೋಧಿಸುವವರಾಗಿದ್ದಾರೆ ಎಂದು ಸಹೋದರರಿಗೆ ಹೇಳಿದನು. ವಯಕ್ತಿಕ ಕ್ರೈಸ್ತರಿಗೆ ಮತ್ತು ವಯಕ್ತಿಕವಾಗಿ ಸಭೆಗಳಿಗೆ ಇತಿಹಾಸದ ಮತ್ತು ತಮ್ಮ ಸುತ್ತಲೂ ಇರುವ ವಿಶಾಲವಾದ ಸಮುದಾಯದ ದೃಢವಾದ ಪ್ರಭಾದ ಅವಶ್ಯಕತೆಯಿತ್ತು. **ಕಲಹಪ್ರಿಯ** (φιλόνεικος, *philoneikos*) ವ್ಯಕ್ತಿಗಳಾಗಿ ತಮ್ಮ ಫಿರ್ಯಾದಿಯಲ್ಲಿ ಸಭೀಕರನ್ನು ದುಃಖಃಕರವಾದ ಪರಿಸ್ಥಿತಿಯತ್ತ ನಡೆಸುತಿತ್ತು. ಆದುದರಿಂದ, ಪೌಲನು ಕೊರಿಂಥದವರಿಗೆ 11:16ರಲ್ಲಿ ತಾನು ತಲೆಗೆ ಮುಸುಕು ಹಾಕಿಕೊಳ್ಳುವದರ ಕುರಿತಾಗಿ ಏನನ್ನು ಹೇಳಿದ್ದನೋ ಅದು ಪ್ರತಿಯೊಂದು ಸ್ಥಳದಲ್ಲಿರುವ ಸಭೆಯ ಅಭ್ಯಾಸದಲ್ಲಿ

ಪ್ರತಿಬಿಂಬಿಸುತ್ತಿದೆ ಎಂದು ಜ್ಞಾಪಿಸುತ್ತಿದ್ದಾನೆ. ಕೊರಿಂಥದಲ್ಲಿ ಯಾರೂ ವಯಕ್ತಿಕವಾಗಿ ಅಥವಾ ಎಲ್ಲೆಡೆಯಲ್ಲಿಯೂ ದೈವೀಕವಾದ ಅಧಿಕಾರ ಹೊಂದಿದ ನಿಯಮಗಳ ವಿರೋಧವಾಗಿ ನಿಂತುಕೊಳ್ಳಬಾರದು (ನೋಡಿರಿ 7:17).

ಕೊರಿಂಥದಲ್ಲಿ, ಸಾಮಾಜಿಕ ಸಂಪ್ರದಾಯವು ಹೇಳುವಂತೆ ತಲೆಗೆ ಮುಸುಕು ಹಾಕಿಕೊಳ್ಳುವ ಪದ್ದತಿ, ಸಭೆಯಲ್ಲಿ ಕ್ರೈಸ್ತ ಪುರುಷ ಮತ್ತು ಸ್ತ್ರೀಯರ ಮಧ್ಯದಲ್ಲಿರುವ ಸಂಬಂಧವನ್ನು ಪ್ರತಿಬಿಂಬಿಸುತ್ತದೆ. ಹಾಗೂ, ಇತರ ಅಸಮ್ಮತಿಯ ಸಂಗತಿಗಳು ಸಭೆಯಲ್ಲಿ ನಿಜವಾಗಿಯೂ ಇವೆ. ಕೆಲವರು ಇತರರಿಗಿಂತ ಶ್ರೀಮಂತರಾಗಿದ್ದಾರೆ; ಕೆಲವರು ಯೆಹೂದ್ಯರಾಗಿದ್ದಾರೆ, ಅದೇ ಸಮಯದಲ್ಲಿ ಇತರರು ಗ್ರೀಕ್ ಅಥವಾ ರೋಮನ್ನಾಗಿದ್ದಾರೆ. ಉನ್ನತ ಸ್ಥಾನದಲ್ಲಿದ್ದವರು ತಮ್ಮ ಸುತ್ತಲೂ ಇರುವ ಸಾಮಾಜಿಕ ಸಂಸ್ಕೃತಿಯ ವ್ಯತ್ಯಾಸಗಳನ್ನು ಕ್ರೈಸ್ತರ ಸಭೆಗಳಲ್ಲಿ ತೆಗೆದುಕೊಂಡು ಬರುವಲ್ಲಿ ಒಲವನ್ನು ಹೊಂದಿದ್ದರು.

ಸ್ಥಾನಮಾನದ ವ್ಯತ್ಯಾಸಗಳು ಸಭೆಯು ಅನ್ಯೋನ್ಯ ಭೋಜನದಲ್ಲಿ ಪಾಲು ತೆಗೆದುಕೊಳ್ಳಲು ಸೇರಿಬರುವಾಗ ಅನಿವಾರ್ಯವಾಗಿತ್ತು. ಕ್ರಿಸ್ತನಲ್ಲಿ ಶ್ರೀಮಂತ ಮತ್ತು ಬಡವ, ದಾಸ ಮತ್ತು ಸ್ವತಂತ್ರ ಅಥವಾ ಯೆಹೂದ್ಯ ಮತ್ತು ಅನ್ಯ ಎಂಬ ವ್ಯತ್ಯಾಸವಿಲ್ಲ ("ಗ್ರೀಕ್"; ಗಲಾತ್ಯ 3:28). ಭೋಜನದಲ್ಲಿ ಪಾಲುತೆಗೆದುಕೊಳ್ಳುವದು ಅನ್ಯೋನ್ಯತೆಯ ಮತ್ತು ಕ್ರಿಸ್ತನಲ್ಲಿ ನಾವೆಲ್ಲರೂ ಒಂದೇ ಆಗಿದ್ದೇವೆ ಎಂಬ ಉದ್ದೇಶದಿಂದ, ಆದರೆ ಉನ್ನತ ಸ್ಥಾನದಲ್ಲಿರುವವರು ಕೆಳಗಿನ ಸ್ಥಾನದಲ್ಲಿರುವವರೊಂದಿಗೆ ಅನ್ಯೋನ್ಯ ಭೋಜನದಲ್ಲಿ ಪಾಲು ತೆಗೆದುಕೊಳ್ಳಲು ಹಿಂಜರಿಯುತ್ತಿದ್ದರು. ಅವರ ಭೋಜನಗಳು ದುಂದುಗಾರಿಕೆಯ ಔತಣಗಳಾಗಿದ್ದವು, ಅವು ಬಡವರಿಗೆ ನಿಲುಕುವಂಥವುಗಳಲ್ಲ. ಪೌಲನು ಈ ಸಮಸ್ಯಗೆ ಪರಿಹಾರವನ್ನು ಕಂಡುಕೊಂಡನು. Garland ಅವರು ಇದನ್ನು ವಿಮರ್ಶಿಸುತ್ತಾರೆ,

> ಕೊರಿಂಥದ ಸಭೆಯಲ್ಲಿರುವ ಒಂದು ಸಮಸ್ಯೆ ಎಂದರೆ ಅದು ರೋಮನ್ನರ ಸಾಂಸ್ಕೃತಿಕ ಮೌಲ್ಯಗಳಿಂದ ತುಂಬಿತ್ತು ಅದು ಕ್ರೂಜೆಯ ಜ್ಞಾನದೊಂದಿಗೆ ಅಡ್ಡ ಬರುತಿತ್ತು . . . ಪೌಲನು ಕೊರಿಂಥದವರ ಭೋಜನವನ್ನು ಗ್ರೀಕೋ-ರೋಮನ್ ಕೂಟಗಳ ವಿಷಪೂರಿತ ಮಣ್ಣಿನಿಂದ ಕಿತ್ತು ತೆಗೆಯುವದರಲ್ಲಿ ಮತ್ತು ಇತರರಿಗಾಗಿ ಕ್ರಿಸ್ತನ ಪ್ರೀತಿಯ ತ್ಯಾಗದ ಮಣ್ಣಿನಲ್ಲಿ ತಿರುಗಿ ನೆಡುವ ಒಂದು ವಿಷಯದಲ್ಲಿ ನಿರ್ಧಾರವುಳ್ಳವನಾಗಿದ್ದನು.[17]

ಸಭೆಯು ಒಟ್ಟಾಗಿ ಸೇರಿವರುವ ಸಮಯವು ಎಂಥದ್ದಾಗಿತ್ತೆಂದರೆ, ಅದು ಪಂಗಡಗಳ ಮತ್ತು ವಾದವಿವಾದದ ಮೂಲವಾಗಿತ್ತು. ಈ ಕಾರಣದಿಂದ ಪೌಲನಿಗೆ ಹೊಗಳುವದಕ್ಕೆ ಪದಗಳೇ ಇರಲಿಲ್ಲ.

## ಪಂಗಡಗಳ ಕುರಿತಾದ ಅವಮಾನ (11:17-22)

**17ನಾನು ಹೀಗೆ ನಿಮಗೆ ಅಪ್ಪಣೆ ಕೊಡುವಲ್ಲಿ ನಿಮ್ಮನ್ನು ಹೊಗಳುವದಿಲ್ಲ; ಯಾಕಂದರೆ ನೀವು ಕೂಡಿ ಬರುವದರಿಂದ ಕೇಡಾಗುತ್ತದೆಯೇ ಹೊರತು ಮೇಲಾಗುವದಿಲ್ಲ. 18ಹೇಗಂದರೆ ಮೊದಲನೇದು ನೀವು ಸಭೆಯಾಗಿ ಕೂಡಿಬರುವಾಗ ನಿಮ್ಮಲ್ಲಿ ಭೇದಗಳು ಉಂಟಾಗುತ್ತವೆಂದು ಕೇಳುತ್ತೇನೆ; ಮತ್ತು ಇದು ನಿಜವೆಂದು ಸ್ವಲ್ಪಮಟ್ಟಿಗೆ ನಂಬುತ್ತೇನೆ.**
**19ನಿಮ್ಮಲ್ಲಿ ಇಂಥಿಂಥವರು ಯೋಗ್ಯರೆಂದು ಕಾಣಬರುವಂತೆ ಭಿನ್ನಾಭಿಪ್ರಾಯಗಳೂ**

**ಇರುವದು ಅವಶ್ಯವೇ. [20]ಪರಂತು ನೀವೆಲ್ಲರು ಕೂಡಿಬರುವಾಗ ನೀವು ಮಾಡುವ ಭೋಜನವು ಕರ್ತನ ಭೋಜನವಲ್ಲ. [21]ಭೋಜನವಾಗುವಲ್ಲಿ ಪ್ರತಿಯೊಬ್ಬನು ತಾನು ತಂದದ್ದನ್ನು ಮತ್ತೊಬ್ಬರಿಗಿಂತ ಮುಂದಾಗಿ ಊಟಮಾಡುತ್ತಾನೆ; ಹೀಗೆ ಒಬ್ಬನು ಹಸಿದಿರುತ್ತಾನೆ. ಮತ್ತೊಬ್ಬನು ಕುಡಿದು ಮತ್ತನಾಗಿರುತ್ತಾನೆ, [22]ಏನು ಉಣ್ಣುವದಕ್ಕೂ ಕುಡಿಯುವದಕ್ಕೂ ಮನೆಗಳಿಲ್ಲದೆ ಇದ್ದೀರಾ? ಅಥವಾ ದೇವರ ಸಭೆಯನ್ನು ಅಸಡ್ಡೆಮಾಡಿ ಏನೂ ಇಲ್ಲದವರನ್ನು ನಾಚಿಕೆ ಪಡಿಸುತ್ತೀರಾ? ನಾನು ನಿಮಗೇನು ಹೇಳಲಿ? ನಿಮ್ಮನ್ನು ಹೊಗಳಲೋ? ಈ ವಿಷಯದಲ್ಲಿ ಹೊಗಳುವದಿಲ್ಲ.**

**ವಚನ 17.** ಈ ವಚನದ ಸನ್ನಿವೇಶದಲ್ಲಿ, ಜೋಡಿಸುವ ಪದ **ಆದರೆ** (δέ, *de*) ವ್ಯತ್ಯಾಸ ಅಥವಾ ವಿರೋಧವನ್ನು ತೋರಿಸುವ ವಿರುದ್ಧಾರ್ಥ ಕಾರ್ಯವನ್ನು ಹೊಂದಿದೆ. ಪೌಲನು ತಲೆಗೆ ಮುಸುಕುಹಾಕುವದರ ವಿಷಯವನ್ನು ತೊರೆದುಬಿಟ್ಟಿರುವದರಿಂದ, ಓದುಗರು ಬಹಳ ಮಟ್ಟಿಗೆ ಬಲವಾದ ಪದವನ್ನು ನಿರೀಕ್ಷಿಸಿರಬಹುದು. ಸಭೆಯಾಗಿ ಸೇರಿಬರುವ ಸಮಯದಲ್ಲಿ ತಲೆಗೆ ಮುಸುಕು ಹಾಕಿಕೊಳ್ಳುವದು ಮತ್ತು ಭೋಜನದಲ್ಲಿ ಪಾಲು ತೆಗೆದುಕೊಳ್ಳುವದು ಆ ಎರಡು ರೂಢಿಗಳು ಸಂಬಂಧವನ್ನು ಹೊಂದಿವೆ ("ನೀವು ಕೂಡಿಬರುವಾಗ [συνέρχεσθε, *sunerchesthe*]"). ಮುಂದೆ ಅವನು ನಾನು ನಿಮ್ಮನ್ನು ಹೊಗಳುವದಿಲ್ಲ ಎಂದು ಹೇಳುತ್ತಾನೆ ಯಾಕಂದರೆ, ಸಭೆಯು ಕೂಡಿಬರುವಾಗ (συνέρχεσθε, *sunerchesthe*, ಒಟ್ಟಾಗಿ ಕೂಡಿಬರುವದು), ಅದು ಒಳ್ಳೇಯದಕ್ಕಾಗಿ ಅಲ್ಲ ಆದರೆ ಕೆಟ್ಟದ್ದಕ್ಕಾಗಿ. ಪೌಲನ ಪತ್ರಗಳಲ್ಲಿ, ಕ್ರಿಯಾಪದದ ಈ ವಿಧ ಕೇವಲ 1 ಕೊರಿಂಥದಲ್ಲಿ ಮಾತ್ರ ಕಂಡುಬರುತ್ತದೆ: ಸಭೆಯ ಸಾಮಾನ್ಯ ಭೋಜನದ ಈ ಚರ್ಚೆಯಲ್ಲಿ ನಾಲ್ಕು ಬಾರಿ (11:17, 20, 33, 34) ಮತ್ತು ಭಾಷೆಗಳ ಮಾತಾಡುವದರ ಉಪಯೋಗ ಮತ್ತು ದುರುಪಯೋಗ ಪಡಿಸುವದರ ಬಗ್ಗೆ ಸಹೋದರರನ್ನು ಪೌಲನು ಎಚ್ಚರಿಸುವಾಗ ಎರಡು ಬಾರಿ ಉಪಯೋಗಿಸಿದನು (14:23, 26). ಇದಲ್ಲದೆ ಅಪೊಸ್ತಲನು ἐν ἐκκλησίᾳ (*en ekklēsia*, literally, "in church") ಎಂಬ ನುಡಿಗಟ್ಟನ್ನು ಉಪಯೋಗಿಸಿದನು, ವಿಶೇಷವಾಗಿ (1 ಕೊರಿಂಥ 11:18; 14:19, 28, 35) ಇಲ್ಲಿ "ಕೂಟದಲ್ಲಿ" ಎಂಬುದು ಅರ್ಥವಾಗಿದೆ. ಪೂರಕ ವೇದಭಾಗಗಳು ಸಲಹೆ ನೀಡುತ್ತವೆ ಅಥವಾ ವಯಕ್ತಿಕವಾದ ಸಭೆಯ ಸದಸ್ಯರನ್ನು ಉಲ್ಲೇಖಿಸುತ್ತವೆ (ಅ.ಕೃ. 20:7ರಲ್ಲಿರುವಂತೆ), ಆದರೆ ಹೊಸ ಒಡಂಬಡಿಕೆಯಲ್ಲಿ ಸಭೆಯಾಗಿ ಕೂಡಿಬರುವಾಗ ಅವರು ಏನು ಮಾಡುತ್ತಿದ್ದರು ಎಂಬುದರ ಕುರಿತು ವಿಸ್ತರಿತ ವಿವರಣೆಯನ್ನು ನೀಡುವದಿಲ್ಲ.

ಪೌಲನು ಈಗಾಗಲೇ ವಿಗ್ರಹಗಳಿಗೆ ಅರ್ಪಿಸಿದ ಮಾಂಸದ ಕುರಿತು ಚರ್ಚಿಸುವಾಗ ಕರ್ತನ ಭೋಜನವನ್ನು ಉಲ್ಲೇಖಿಸಿದ್ದಾನೆ (10:16-22). ಅವನು ಅನ್ಯೋನ್ಯ ಭೋಜನದ ಸನ್ನಿವೇಶದ ವಿಷಯವನ್ನು ಮತ್ತೇ ಪರಿಚಯಿಸುತ್ತಿದ್ದಾನೆ. ಯಾವುದೇ ಸ್ಥಳದಲ್ಲಿ ಕರ್ತನಭೋಜನವು ಮುಖ್ಯವಿಷಯವಾಗಿಲ್ಲ. ಅಧ್ಯಾಯ 10ರಲ್ಲಿ ಅಪೊಸ್ತಲನು ವಿಗ್ರಹಗಳ ಮೇಜಿನ ಬಳಿ ಕುಳಿತುಕೊಳ್ಳುವದು ಮತ್ತು ವಿಗ್ರಹಗಳಿಗೆ ಅರ್ಪಿಸಿದ ಊಟದಲ್ಲಿ ಪಾಲು ತೆಗೆದುಕೊಳ್ಳುವದರ ವಿರೋಧವಾಗಿ ಎಚ್ಚರಿಸುವ ಸಮಯದಲ್ಲಿ ಭೋಜನವನ್ನು ಉಲ್ಲೇಖಿಸುತ್ತಾನೆ. 11ನೇ ಅಧ್ಯಾಯದಲ್ಲಿ ರೊಟ್ಟಿ ಮತ್ತು ಪಾತ್ರೆಯಲ್ಲಿ ಸಾಂಕೇತಿಕವಾಗಿ ಪಾಲು ತೆಗೆದುಕೊಳ್ಳುವದನ್ನು ಕ್ರಿಸ್ತನ ನಿಸ್ವಾರ್ಥತೆಯೊಂದಿಗೆ, ತನ್ನ ಓದುಗರು

ಪಾಲುತೆಗೆದುಕೊಳ್ಳುವ ಭೋಜನದಲ್ಲಿ ಪ್ರದರ್ಶಿಸುವ ಸ್ವಾರ್ಥತೆಯೊಂದಿಗೆ ವ್ಯತ್ಯಾಸವನ್ನು ತೋರಿಸುತ್ತಾನೆ.

ಅಪೊಸ್ತಲನು, ಕರ್ತನು ಭೋಜನವನ್ನು ಸ್ಥಾಪಿಸಿರುವದು, ಕೊರಿಂಥದಲ್ಲಿ ರೂಢಿಯಲ್ಲಿರುವ ಸಾಮಾನ್ಯ ಭೋಜನ ಐಕ್ಯತೆಗೆ ಅಲ್ಲ ಪಂಗಡಗಳನ್ನು ಸೃಷ್ಟಿಸುವದರಲ್ಲಿ ಮುಂದುವರೆಯುತ್ತಿರುವದು ಅವನ ವಾದದ ಭಾಗವಾಗಿ ಪುನರ್ವಿಮರ್ಶಿಸುತ್ತಿದ್ದಾನೆ.

**ವಚನಗಳು 18, 19. ಒಟ್ಟಾಗಿ ಕೂಡಿಬರುವದು** ಎಂಬ ಕ್ರಿಯಾಪದವನ್ನು ಪುನರಾವರ್ತಿಸುವದರ ಮೂಲಕ, ಪೌಲನು ಮೊದಲಿಗಿಂತ ಹೆಚ್ಚು ಸ್ಪಷ್ಟವಾಗಿ ತಾನು ವಾರದ ಮೊದಲನೆಯ ದಿನದಲ್ಲಿ (ನೋಡಿರಿ ಅ.ಕೃ. 20:7; 1 ಕೊರಿಂಥ 16:2) ಸಭೆಯಾಗಿ ಕೂಡಿಬರುವ ಕ್ರೈಸ್ತ **ಸಭೆಯನ್ನು** (*en ekklēsia*) ಉಲ್ಲೇಖಿಸುತ್ತಿದ್ದೇನೆ ಎಂದು ಹೇಳುತ್ತಾನೆ. ಶಿಷ್ಯರು ಆ ದಿನದಲ್ಲಿಯೇ ಕರ್ತನ ಸಮಾಧಿ ಖಾಲಿಯಾಗಿರುವದನ್ನು ಕಂಡಿದ್ದರು (ಮತ್ತಾಯ 28:1; ಮಾರ್ಕ 16:2; ಲೂಕ 24:1; ಯೋಹಾನ 20:1).

ಹೊಸ ಒಡಂಬಡಿಕೆಯಲ್ಲಿ "ಕರ್ತನ ಬರುವ ದಿನ" (2 ಥೆಸಲೋನಿಕ 2:2; 2 ಪೇತ್ರ 3:10; ನೋಡಿರಿ 1 ಕೊರಿಂಥ 1:8) "ಕರ್ತನು ದಿನ" (ಪ್ರಕಟನೆ 1:10) ದಂತೆ ಒಂದೇ ಆಗಿಲ್ಲ. ಗ್ರೀಕ್ ವಾಕ್ಯಾಂಗಗಳು ವ್ಯತ್ಯಾಸವಾಗಿವೆ. ಮೊದಲನೆಯದ್ದನ್ನು ಹಳೆ ಒಡಂಬಡಿಕೆಯ ಪ್ರವಾದಿಗಳಿಂದ ತೆಗೆದುಕೊಳ್ಳಲಾಗಿದೆ (ἡ ἡμέρα τοῦ κυρίου, *hē hēmera kuriou*). ಇದು ಅಂತ್ಯದ ದಿನಗಳನ್ನು ಉಲ್ಲೇಖಿಸುತ್ತದೆ, ಕರ್ತನು ನ್ಯಾಯತೀರಿಸುವದಕ್ಕಾಗಿ ಎರಡನೆಯ ಸಾರಿ ಕಾಣಿಸಿಕೊಳ್ಳುವ ದಿನ (ಇಬ್ರಿಯ 9:28; 2 ಕೊರಿಂಥ 5:10). ಕರ್ತನ ದಿನ (ἡ κυριακὴ ἡμέρα, *hē kuriakē hēmera*), ಇನ್ನೊಂದು ರೀತಿಯಲ್ಲಿ ವಾರದ ಮೊದಲನೆಯ ದಿನವನ್ನು ಉಲ್ಲೇಖಿಸುತ್ತದೆ, ಆಗ ಕ್ರೈಸ್ತರು ಸೇರಿಬರುತ್ತಾರೆ. ಈ ವಾಕ್ಯಂಗವು ಸಂಪೂರ್ಣವಾಗಿ ಘಟಿಸುವ ವಾಕ್ಯಾಂಗ ಪ್ರಕಟನೆ 1:10; ಆದರೆ ಅಪೊಸ್ತಲನು "ಕರ್ತನ" (κυριακός, *kuriakos*), ಇದೇ ಕ್ರಿಯಾ ವಿಶೇಷಣವನ್ನು 1 ಕೊರಿಂಥ 11:20ರಲ್ಲಿ ಭೋಜನಕ್ಕೆ ಉಪಯೋಗಿಸುತ್ತಾನೆ.

ಪೌಲನು, ಇತರ ಬೋಧಕರ ಕುರಿತಾಗಿ ಕ್ರೈಸ್ತರಲ್ಲಿರುವ ನಿಷ್ಠೆಯ ಆಧಾರದ ಮೇಲೆ, ಅದರಲ್ಲೂ ಪೌಲನು ಮತ್ತು ಅಪೊಲ್ಲೋಸರ ಮಧ್ಯದಲ್ಲಿ ಉಂಟಾಗಿರುವ ಪಂಗಡಗಳ ಕುರಿತು ಎಚ್ಚರಿಸುವದರೊಂದಿಗೆ ಪ್ರಾರಂಭಿಸುತ್ತಾನೆ (1:10-15). ಕೊರಿಂಥದಲ್ಲಿ ಇತರ ಪಂಗಡಗಳು ವರ್ಗ-ಪ್ರಜ್ಞೆಯಿಂದಾಗಿ ಬೆಳೆದುಕೊಂಡಿವೆ. ವರ್ಗ-ಪಂಗಡಗಳು ಬಹಳಮಟ್ಟಿಗೆ ತಮ್ಮಷ್ಟಕ್ಕೆ ಅನೇಕ ಮಾರ್ಗಗಳಲ್ಲಿ ಪ್ರಕಟಗೊಂಡಿವೆ, ಆದರೆ ಇದು ಸಭೆಯಾಗಿ ಭೋಜನಕ್ಕಾಗಿ ಕೂಡಿಬರುವಾಗ ಅನಿವಾರ್ಯವಾಗುತ್ತದೆ.

Gerd Theissen ಅವರು ಪೌಲನು 11:17-22ರಲ್ಲಿ ಸಂಬೋಧಿಸಿದ ಪಂಗಡಗಳು ಭೋಜನದಲ್ಲಿ ಪಾಲುತೆಗೆದುಕೊಳ್ಳಲು ನಿರಾಕರಿಸುತ್ತಿರುವ ಸ್ವಾರ್ಥಪರ ವ್ಯಕ್ತಿಗಳಿಂದ ಉಂಟಾಗಿವೆ.[18] ಸಭೆಯಾಗಿ ಸೇರಿಬರುವದಕ್ಕೆ ಸ್ಥಳವನ್ನು ಒದಗಿಸಿದ ಕ್ರೈಸ್ತರು ಲೌಕಿಕ ಸ್ಥಾನ ಮತ್ತು ಸಾಮಾಜಿಕ ನಿಲುವನ್ನು ಹೊಂದಿರುತ್ತಾರೆ. ಅವರು ಭೋಜನವನ್ನು ಸ್ವೀಕರಿಸುವಾಗ, ಸಭೆಯಲ್ಲಿರುವ ಕೆಳಗಿನ ವರ್ಗದ ಜನರೊಂದಿಗೆ ಪ್ರತ್ಯೇಕಿಸಿಕೊಳ್ಳುತ್ತಾರೆ. ಅವರು ತಮಗೆ ಮನಸ್ಸಿಗೆ ಬಂದಾಗ ಊಟಮಾಡುತ್ತಾರೆ ಮತ್ತು ತಮಗೆಷ್ಟು ಬೇಕೋ ಅಷ್ಟು ಊಟಮಾಡುತ್ತಾರೆ. ವಿಶಾಲವಾದ ಸಂಸ್ಕೃತಿಯಲ್ಲಿ ಸಭೆಯು ವರ್ಗ ವ್ಯತ್ಯಾಸವನ್ನು

ಅಪ್ಪಿಕೊಂಡಿದೆ ಅದರೆ ಇದು ದೇವರ ಕೃಪೆಯಿಂದ ವಿಮೋಚನೆಯನ್ನು ಹೊಂದಿರುವವರ ಅನ್ಯೋನ್ಯತೆಗೆ ವಿಷಕಾರಿಯಾಗಿದೆ.

ಕೊರಿಂಥದಲ್ಲಿ ಸಾಮಾಜಿಕ ಪಂಗಡಗಳ ಹಿನ್ನೆಲೆಗೆ ಕಾರಣವಾದ ಸಾಮಾನ್ಯ ಭೋಜನವನ್ನು ಕರ್ತನ ಭೋಜನದೊಂದಿಗೆ ಸಮಾನತೆಯಲ್ಲಿ ತರಲಾಗುವದಿಲ್ಲ. ಇದು ಈ ಆಚರಣೆಯನ್ನು ಹೊರತುಪಡಿಸಿ ಕೊರಿಂಥದವರು ಸಮುದಾಯದ ಭೋಜನವನ್ನು ಕರ್ತನ ಭೋಜನದಲ್ಲಿ ಮುಂಚಿತವಾಗಿ ಅಥವಾ ಅದಾದ ನಂತರ ಪಾಲುತೆಗೆದು ಕೊಳ್ಳುತ್ತಿದ್ದರು.[19] ಈ ಭೋಜನವು ಐಕ್ಯತೆಯನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಮಾಡಲಾಗುತಿತ್ತು ಆದರೆ ಅದು ಪಂಗಡಗಳ ಸಂಕೇತವಾಗಿತ್ತು. ಅವರಲ್ಲಿರುವ ಶ್ರೀಮಂತ ಮತ್ತು ಬಡವ ಎಂಬ ಬೇರ್ಪಡಿಸುವಿಕೆ ಕ್ರಿಸ್ತನ ದೇಹದಲ್ಲಿ ಐಕ್ಯತೆಯನ್ನು ಸುಳ್ಳಾಗಿಸುತಿತ್ತು. ಪೌಲನು ಬಹಳ ಮಟ್ಟಿಗೆ ಸಭೆಯ ಕುಟುಂಬಗಳ ಅನ್ಯೋನ್ಯ ಭೋಜನವನ್ನು ಅನುಸರಿಸಿ ಉಂಟಾಗಿರುವ ಭೇದಗಳ ಕುರಿತು, ಇತರ ಪಂಗಡಗಳ ಕುರಿತು ಅವನಿಗೆ ತಿಳಿಸಿದವರ ಮೂಲಕ ಆಲಿಸಿರಬಹುದು. ಸಹಿಸಿಕೊಳ್ಳ ಅಸಾಧ್ಯವಾದ ಕ್ರೈಸ್ತ ರೂಢಿಯ ವಿಷಯದ ಕುರಿತು ಮುಂದಕ್ಕೆ ಚರ್ಚಿಸುವ ಪೂರ್ವದಲ್ಲಿ, ಪೌಲನು ಬಂದ ವರದಿಗಳನ್ನು ಸ್ವಲ್ಪಮಟ್ಟಿಗೆ ನಂಬುತ್ತೇನೆ ಎಂದು ಹೇಳುವದರ ಮೂಲಕ ತನ್ನ ದೋಷಾರೋಪಣೆಯನ್ನು ಮೃದುಗೊಳಿಸುತ್ತಾನೆ.

ಕನಿಷ್ಠಪಕ್ಷ ತಮ್ಮೊಳಗೆ ಹುರುಳಿಲ್ಲದ ವ್ಯತ್ಯಾಸಗಳನ್ನು ತಮ್ಮತಮ್ಮೊಳಗೆ ಮಾಡಿಕೊಳ್ಳುವ ಕ್ರೈಸ್ತರಿಂದ ಬಂದ ಭೇದಗಳನ್ನು ತಾನು 1:10ರಲ್ಲಿ ಬೇಡಿಕೊಂಡ ಐಕ್ಯತೆಯ ಬೆಳಕಿನಲ್ಲಿ ಹೊಗಳುವದು ಅಪೊಸ್ತಲನ ಗುಣಲಕ್ಷಣವಾಗಿರಲಿಲ್ಲ. ನಿಮ್ಮ ಮಧ್ಯದಲ್ಲಿರುವ ಪಕ್ಷಪಂಗಡಗಳನ್ನು **ಎಚ್ಚರಿಕೆಯಿಂದ ಪರಿಕ್ಷೀಸಿಕೊಳ್ಳುವದು ಈ ಸನ್ನಿವೇಶದಲ್ಲಿ ಅವಶ್ಯವಾಗಿದೆ.** 11:19ರ ಮೊದಲ ನೋಟದಲ್ಲಿ ಅದು ನಿಮ್ಮ ಸ್ವಭಾವವಾಗಿದೆ ಎಂದು ತೋರಿಬರುತ್ತದೆ; 11:18ರಲ್ಲಿರುವ ಭಿನ್ನಮತವನ್ನು ಖಂಡಿಸುವದರ ಅವಶ್ಯಕತೆಯನ್ನು ಪೌಲನು ಅರಿತುಕೊಂಡಿದ್ದನು. ಈ ರೀತಿಯಲ್ಲಿ ಓದಿರಿ, ಅಪೊಸ್ತಲನು "ಪಕ್ಷಪಂಗಡಗಳನ್ನು" ಕನಿಷ್ಠ ಕೆಲವು ಪರಿಸ್ಥಿತಿಯಲ್ಲಿ ಹೊಗಳುತ್ತಾನೆ. 1:10 ಮತ್ತು 11:18ನ್ನು ಪರಿಗಣಿಸುವಾಗ ಅಪೊಸ್ತಲನು ತಾನು ಬಲವಾಗಿ ತಿರಸ್ಕರಿಸಿದ್ದನ್ನು ಯಾವುದೇ ಪರಿಸ್ಥಿತಿಯಲ್ಲಿ ಪ್ರಶಂಶಿಸುವದಕ್ಕಾಗಿ ಅಪೊಸ್ತಲನು ಏಕೆ ಪ್ರಯತ್ನಿಸಿದನು? 11:19ನ್ನು ಓದಲು ಉತ್ತಮವಾದ ಇನ್ನೊಂದು ಮಾರ್ಗ ಇರಬಹುದು. ವಚನವು ಬಹಳ ಮಟ್ಟಿಗೆ 11:18ರಲ್ಲಿರುವ "ನಾನು ಸ್ವಲ್ಪಮಟ್ಟಿಗೆ ನಂಬುತ್ತೇನೆ" ಎಂಬ ವಾಕ್ಯಾಂಗದ ವಿಸ್ತರಣೆ ಆಗಿರಬಹುದು.

ಪೌಲನು ಸಭೆಯು ಸಮುದಾಯದ ಭೋಜನದಲ್ಲಿ ಪಾಲನ್ನು ತೆಗೆದುಕೊಳ್ಳುವಾಗ ಉಂಟಾದ ಅದೈವೀಕವಾದ ಈ ಭೇದಗಳ ವರದಿಯನ್ನು ಸ್ವಲ್ಪ ಮಟ್ಟಿಗೆ ನಂಬುತ್ತಾನೆ. ದೇವರು ಸಭೆಯನ್ನು ರೂಪಿಸುತ್ತಿದ್ದಾನೆ ಎಂಬುದನ್ನು ಆತನು ಕಾಣುತ್ತಾನೆ; ಅವನು ಕೊರಿಂಥದ ವಿಶ್ವಾಸಿಗಳ ನಿರ್ಧಾರವನ್ನು ಅವರು ಕ್ರಿಸ್ತನು ಬೋಧಿಸಿದಂತೆ ನೆಡಯುತ್ತಿದ್ದಾರೋ ಇಲ್ಲವೋ ಎಂದು ಪರೀಕ್ಷಿಸುತ್ತಿದ್ದಾನೆ. ಯಾರು ಸಮ್ಮತಿಯನ್ನು ಹೊಂದಿದ್ದಾರೋ ಅವರು ಸಾಕ್ಷಿಗಳಾಗಿದ್ದರು, ಬಾಹ್ಯ ನೋಟದಲ್ಲಿರುವ ಭೇದಗಳಿಗೆ ಇದು ಅವಶ್ಯವಾಗಿತ್ತು. ಕೊರಿಂಥದಲ್ಲಿರುವ ಎಲ್ಲಾ ಕ್ರೈಸ್ತರು ಸಭೆಯಲ್ಲಿ ಭೇದಗಳನ್ನು ನಿರ್ಮಿಸುವ ವಾತಾವರಣಕ್ಕೆ ಜವಾಬ್ದಾರರಲ್ಲ. ಯಾರು ತಮ್ಮ ಸಮೃದ್ಧಿಯನ್ನು ಪ್ರದರ್ಶಿಸುತ್ತಿದ್ದರೋ

ಅವರು ಭೇದಗಳಿಗೆ ಕಾರಣರಾಗಿದ್ದರು (ನೋಡಿರಿ 11:27). ಅವರು ಊಟಮಾಡುವಾಗ ಮತ್ತು ಕುಡಿಯುವಾಗ ಭೇದವನ್ನು ಹುಟ್ಟಿಸುವ ಆತ್ಮಕ್ಕೆ ಎಡೆಮಾಡಿಕೊಡುತ್ತಿದ್ದರು, ಅವರು ದೇವರ ನ್ಯಾಯತೀರ್ಪನ್ನು ತಮ್ಮ ಮೇಲೆ ಮತ್ತು ಕ್ರಿಸ್ತನ ಸಂಪೂರ್ಣ ದೇಹದ ಮೇಲೆ ಬರ ಮಾಡಿಕೊಳ್ಳುವವರಾಗಿದ್ದರು (11:29). ಅಸಭ್ಯವಾದ ರೀತಿಯಲ್ಲಿ ಊಟಮಾಡುವದು ಮತ್ತು ಕುಡಿಯುವದರ ಮೂಲಕ ಅವರು ದೇಹದ ಐಕ್ಯತೆಯನ್ನು ಹಾಳುಮಾಡುತ್ತಿದ್ದರು. ಅಸಮ್ಮತಿಯ ಅಳತೆಯಿಲ್ಲದೆ, ಬಹಳ ಮಟ್ಟಿಗೆ ಸಾಮಾಜಿಕವಾಗಿ ಸ್ವಂತ-ಉನ್ನತಿಯನ್ನು ಕ್ರಿಸ್ತೀಯ ಜೀವಿತದ ನಿಯಮಗಳಾಗಿ ಸಂಪೂರ್ಣ ಸಭೆಯವರು ಸ್ವೀಕರಿಸುತ್ತಿದ್ದರು.

ಕೊರಿಂಥದವರು ಇಂಥಹ ಭೇದಗಳು ಅಭ್ಯಾಸಿಸುತ್ತಿರುವ ಹಾಗೆ ಅವರಲ್ಲಿರುವ ಹೆಚ್ಚು ಸಮೃದ್ಧಿಯುಳ್ಳವರು ತಮ್ಮನ್ನು ತಾವು ಬೇರ್ಪಡಿಸಿಕೊಂಡು ತಮ್ಮ ಖಾಸಗಿ ಸಾಂಗತ್ಯದಲ್ಲಿ ಇರುತ್ತಿದ್ದರು ಅವರಿಗೆ ದೈವೀಕತೆ ಮತ್ತು ಪರಿಶುದ್ಧತೆಯೊಂದಿಗೆ ಯಾವ ಸಂಬಂಧವೂ ಇರುತ್ತಿರಲಿಲ್ಲ. ಅವರು ಕೇವಲ ಸ್ವಾರ್ಥಿಗಳು ಮತ್ತು ಹಟಮಾರಿಗಳು ಆಗಿದ್ದರು. ಇಲ್ಲಿ ಚರ್ಚಿಸುತ್ತಿರುವ ಭೇದಗಳು ಅಧ್ಯಾಯ 1ರಿಂದ 3 ಉದ್ದಕ್ಕೂ ಇರುವ ಮೂಲದಿಂದ ತೆಗೆದುಕೊಳ್ಳಲಾಗಿಲ್ಲ. ಅವು ಹೆಮ್ಮೆ ಮತ್ತು ಶ್ರೇಷ್ಠತೆಯ ವರ್ತನೆಯಿಂದಾಗಿ ಹುಟ್ಟಿಕೊಂಡು ಸಹೋದರ ಮತ್ತು ಸಹೋದರಿಯರ ಮಧ್ಯದಲ್ಲಿ ಅಡೆತಡೆಗಳನ್ನು ನಿರ್ಮಿಸಿರುವದರಿಂದ ಒಂದೇ ರೀತಿಯಾಗಿವೆ.

**ವಚನ 20. ಕರ್ತನ ಭೋಜನ** ಎಂಬ ವ್ಯಾಕ್ಯಾಂಗವು ಹೊಸ ಒಡಂಬಡಿಕೆಯಲ್ಲಿ ಈ ವಚನದಲ್ಲಿ ಮಾತ್ರ ಕಂಡುಬರುತ್ತದೆ. ಗ್ರೀಕ್ ಒಡೆತನವನ್ನು ಸೂಚಿಸುವ ಚಿಹ್ನೆಯನ್ನು ಉಪಯೋಗಿಸದೇ ಇರುವದರಿಂದ ನಾವು "ಕರ್ತನ" τοῦ κυρίου (*tou kuriou*) ಎಂಬ ವಂಶಸೂಚಕವನ್ನು ನಿರೀಕ್ಷಿಸಬಹುದು; ಆದರೆ ಪೌಲನು ವಿರಳವಾದ ಕ್ರಿಯಾವಿಶೇಷಣವನ್ನು ಉಪಯೋಗಿಸುತ್ತಾನೆ, ಇದರ ಅರ್ಥ "ಕರ್ತನಿಗೆ ಸಂಬಂಧಿಸಿದ"[20] κυριακός (*kuriakos*) ಹೊಸ ಒಡಂಬಡಿಕೆಯಲ್ಲಿ ಈ ಕ್ರಿಯಾ ವಿಶೇಷಣದ ಕೇವಲ ಇತರ ಸಂಭವಗಳು ಪ್ರಕಟನೆ 1:10ರಲ್ಲಿ "ಕರ್ತನ ದಿನ" ಎಂದು ಅನುವಾದಿಸಿದ ವ್ಯಾಕ್ಯಾಂಗಗಳಲ್ಲಿ ಕಂಡುಬರುತ್ತದೆ. ಈ ಕ್ರಿಯಾ ವಿಶೇಷಣದ ಉಪಯೋಗದ ಅರ್ಥ "ಕರ್ತನಿಗೆ ಸಂಬಂಧಿಸಿದ" ಇದಕ್ಕೆ ಮೊದಲಿನ ಎರಡು ಪದಗಳು "ಭೋಜನ" ಮತ್ತು "ದಿನ" ಪೌಲನು ಕ್ರಿಸ್ತನಲ್ಲಿ ಪರಿವರ್ತನೆ ಹೊಂದಿದವರಿಗೆ ಭೋಜನ ಮತ್ತು ವಾರದ ಮೊದಲನೆಯ ದಿನದಲ್ಲಿ ಸೇರಿಬರುವ ಸಭೆಯ ಕುರಿತು ಬೋಧಿಸುವ ವಿಧಾನವಾಗಿತು. ಈ ಎರಡೂ ಸಂಗತಿಗಳು, ದಿನ ಮತ್ತು ಭೋಜನ, ವಿಚಿತ್ರವಾದ ರೀತಿಯಲ್ಲಿ ಕರ್ತನವುಗಳಾಗಿವೆ. ಜ್ಞಾಪಕಾರ್ಥ ಮತ್ತು ಸ್ಮರಣೆ ಪ್ರತಿಯೊಬ್ಬರ ಹೃದಯದಲ್ಲಿ ಇರುತ್ತದೆ. ಪೌಲನು ಅನೇಕ ಅನುವಾದಗಳಲ್ಲಿ ಅಲಕ್ಷಿಸಿದ ವಾಕ್ಯಾಂಗವನ್ನು, ἐπὶ τὸ αὐτὸ (*epi to auto*) ಉಪಯೋಗಿಸುತ್ತಾನೆ, ಇದರ ಅರ್ಥ ಒಟ್ಟಾಗಿ. ಈ ವಾಕ್ಯಂಗವು ಅಪೊಸ್ತಲರ ಕೃತ್ಯಗಳ ಪ್ರಾರಂಭ ಅಧ್ಯಾಯಗಳಲ್ಲಿ ಸಾಮಾನ್ಯವಾಗಿದೆ (1:15; 2:1, 44 ನೋಡಿರಿ), ಇದು ಕ್ರೈಸ್ತತ್ವದ ಸಮುದಾಯದ ಸ್ವರೂಪಕ್ಕೆ ಒತ್ತು ನೀಡುತ್ತದೆ. ಕರ್ತನ ದಿನದಲ್ಲಿ ಸಭೆಯು **ಒಟ್ಟಾಗಿ** ಸೇರಿಬರುವದು ಮತ್ತು ಕರ್ತನ ಭೋಜನದಲ್ಲಿ ಸಭೆಯ ಸಾಮಾನ್ಯ ಪಾಪದ ಅರಿಕೆ ಪ್ರತಿಯೊಬ್ಬ ಕ್ರೈಸ್ತನು ಪರಲೋಕದಲ್ಲಿ ತಂದೆಯ ಬಲಗಡೆಯಲ್ಲಿ ಆಸೀನನಾಗಿರುವ ಕ್ರಿಸ್ತನಿಗೆ ಸಂಬಂಧಿಸಿದವನು ಮತ್ತು ಪಾಲುತೆಗೆದುಕೊಳ್ಳುವವನು ಮತ್ತು ಅನ್ಯೋನ್ಯತೆ ಯಲ್ಲಿರುವವನು ಎಂದು

ವ್ಯಾಖ್ಯಾನಿಸಲಾಗಿದೆ (ನೋಡಿರಿ 10:16; ಇಬ್ರಿಯ 10:12). ಭೋಜನದ ದಿನವು ಒಟ್ಟಾಗಿ ನಡೆಯುತಿತ್ತು; ಅವರು ಕರ್ತನ ದಾಹವನ್ನು ಮತ್ತು ಮರಣದ ಮೇಲೆ ಆತನ ಜಯವನ್ನು ಜ್ಞಾಪಿಸಿಕೊಳ್ಳುತ್ತಿದ್ದರು. ಇವು ಒಟ್ಟಾಗಿ ಪಾಪದ ಅರಿಕೆ ಮಾಡಲು, ಜೀವನ ಶೈಲಿಗೆ ಮತ್ತು ಅನ್ಯೋನ್ಯತೆಗೆ ಅಸ್ತಿವಾರವಾಗಿದ್ದವು.

**ವಚನ 21.** ಸಹಜವಾಗಿ, ಕೊರಿಂಥದಲ್ಲಿ ಕರ್ತನ ಭೋಜನವು ಕೇವಲ ಸಂಪ್ರದಾಯವಾಗಿತ್ತು ಸಭೆಯು ತಾವು ಸ್ವೀಕರಿಸುವ ಕರ್ತನ ಭೋಜನವು ಅಷ್ಟು ಮಹತ್ವದ್ದಾಗಿಲ್ಲ ಎಂದು ಊಹಿಸುತ್ತಿತ್ತು. ಪೌಲನು "ನೀವು ವರ್ತಿಸುವ ರೀತಿಯನ್ನು ನೋಡಿದರೆ, ನಿಮ್ಮ ಸಂಪ್ರದಾಯಗಳ ಆಚರಣೆಯಲ್ಲಿ ದೇವರಿಗೆ ಭಾಗವಿಲ್ಲ ಎಂದು ತೋರಿಬರುತ್ತದೆ, 'ಕರ್ತನ ಭೋಜನ' ದೇವರಿಗೆ ಯಾವ ಮಹಿಮೆಯನ್ನು ತರುವದಿಲ್ಲ" ಎಂದು ಇದರ ಕುರಿತಾಗಿ ಹೇಳಿದನು. ಪೌಲನು ಎರಡು ವಿಭಿನ್ನ ಸಂಗತಿಗಳನ್ನು ಚರ್ಚಿಸುತ್ತಿದ್ದಾನೆ. 11:21ರಲ್ಲಿ ಅವನು ಕರ್ತನ ಭೋಜನ, ಸಭೆಯಲ್ಲಿ ಜ್ಞಾಪಕಾರ್ಥ ಆಚರಣೆ ಮತ್ತು ಆರಾಧನೆ ಮತ್ತು ಅನ್ಯೋನ್ಯ ಭೋಜನ ಎರಡರ ಕುರಿತು ಮಾತನಾಡುತ್ತಾನೆ, ಅದರಲ್ಲಿ **ಪ್ರತಿಯೊಬ್ಬನೂ** ಕೇವಲ **ತನ್ನ ಭೋಜನದ** ಕುರಿತು ಆಸಕ್ತಿಯುಳ್ಳವನಾಗಿದ್ದಾನೆ.[21] ಕ್ರೈಸ್ತರು ಸಾಮಾನ್ಯ ಭೋಜನವನ್ನು ಆಚರಿಸುವ ಹಾಗೆ, ಸಾಮಾಜಿಕ ಆರ್ಥಿಕ ಹಂತಗಳ ಆಧಾರದ ಮೇಲೆ ಭೇದವನ್ನು ಮಾಡುವ ಹಾಗೆ, ತಾವು ಒಂದೇ ದೇಹವಾಗಿದ್ದೇವೆ, ಕರ್ತನ ಭೋಜನದಲ್ಲಿ ಪಾಲುಗಾರರಾಗುತ್ತಿರುವ ಹಾಗೆ ಐಕ್ಯತೆಯನ್ನು ಸಂಕೇತವನ್ನು ತೋರಿಸುವದನ್ನು ಸುಳ್ಳಾಗಿಸಿದ್ದಾರೆ. ತೊಡಗಿಸಿಕೊಂಡಿರುವ ವರ್ತನೆಗಳ ವ್ಯತ್ಯಾಸವನ್ನು ತೋರಿಸುತ್ತಾ ಅಪೊಸ್ತಲನು ಎರಡರ ಮಧ್ಯದಲ್ಲಿ ಸ್ವತಂತ್ರವಾಗಿ ಚರ್ಚಿಸುತ್ತಿದ್ದಾನೆ. ಒಬ್ಬನು ಹಸಿದಿರುತ್ತಾನೆ, ಅದೇ ಸಮಯದಲ್ಲಿ ಮತ್ತೊಬ್ಬನು ಕುಡಿದು ಮತ್ತನಾಗಿರುತ್ತಾನೆ. ಪೌಲನ ಪದಗಳಲ್ಲಿರುವ ದಾಹವು, ಅವರ ಈ ಅಭ್ಯಾಸವು ದೇಹದ ಐಕ್ಯತೆಯ ಭಯಂಕರವಾದ ಅಲ್ಲಗಳೆಯುವಿಕೆಯಾಗಿದೆ ಎಂದು ಪ್ರಕಟಿಸುತ್ತದೆ.

Wayne A. Meeks ಅವರು ಬಹಳ ಮಟ್ಟಿಗೆ, ಪೌಲನ ಎಚ್ಚರಿಕೆ "ಶ್ರೀಮಂತರು ಮತ್ತು ಬಡವರ[22] ಮಧ್ಯದಲ್ಲಿ ಮೂಲತಃ ಇರುವ ಭೇದವಾಗಿದೆ." ಸಭೀಕರ ಭೋಜನದ ಸಮಯದಲ್ಲಿ, ಶ್ರೀಮಂತರು ಬಡವರನ್ನು ಅವರ ಸ್ಥಾನ-ಪ್ರಜ್ಞೆಗೆ ಜಂಬ ಕೊಚ್ಚಿಕೊಳ್ಳುವದರ ಮೂಲಕ ಅವಮಾನಪಡಿಸುತ್ತಿದ್ದರು. ಕರ್ತನ ಭೋಜನದಲ್ಲಿ, ಕೊರಿಂಥದಲ್ಲಿರುವ ಕ್ರೈಸ್ತರು ತಮ್ಮನ್ನು ತಾವು ವಿಶ್ವಾಸಿಗಳು ದೇವರ ಎದುರಿನಲ್ಲಿ ಎಲ್ಲರೂ ಸಮಾನರು ಎಂದು ಹೇಳಿಕೊಳ್ಳುತ್ತಿದ್ದರು. ಸಾಮಾನ್ಯ ಭೋಜನದಲ್ಲಿ, ಶ್ರೀಮಂತರು ಸಹಜವಾಗಿ ತಮ್ಮ ಮತ್ತು ಬಡವರ ಮಧ್ಯದಲ್ಲಿ ಭೌದ್ಧಿಕ ವ್ಯತ್ಯಾಸವನ್ನು ಇಟ್ಟುಕೊಳ್ಳುತ್ತಿದ್ದರು; ಅವರು ತಮ್ಮ ಮನಸ್ಸಿಗೆ ಬಂದಾಗ ತಮಗೆ ಮನಸ್ಸಿಗೆ ಬಂದ ರೀತಿಯಲ್ಲಿ ಉಣ್ಣುತ್ತಿದ್ದರು ಮತ್ತು ಕುಡಿಯುತ್ತಿದ್ದರು (ನೋಡಿರಿ 11:33), ತಮ್ಮ ಸಹ ಕ್ರೈಸ್ತರ ವಿಷಯದಲ್ಲಿ ಕಳಕಳಿಯನ್ನು ಹೊಂದಿರಲಿಲ್ಲ.

**ವಚನ 22. ನಾನು ನಿಮ್ಮನ್ನು ಹೊಗಳುವದಿಲ್ಲ** (see 11:17) ಇದು ಈ ವಿಭಾಗವನ್ನು ಆವರಣ ಚಿಹ್ನೆಯಲ್ಲಿ ಇಡುವದು ವಿಚಾರವಾಗಿದೆ. ಈ ವ್ಯಾಖ್ಯಾನವು ಕರ್ತನ ಭೋಜನವು ಹೇಗೆ ಸ್ಥಾಪಿತವಾಯಿತು ಎಂಬ ಪೌಲನ ವಿವರಣೆ (11:23-26) ಅದರಷ್ಟಕ್ಕೆ ಕೊನೆಯಲ್ಲ. ಪೌಲನು ಸಾಮಾನ್ಯ ಭೋಜನದಲ್ಲಿ ಸಾಮಾಜಿಕ ಬೇರ್ಪಡಿಸುವಿಕೆಯ ಕುರಿತು

ಆಸಕ್ತನಾಗಿದ್ದಾನೆ. ಕರ್ತನು ಸ್ಥಾಪಿಸಿದ ಐಕ್ಯತೆಯನ್ನು ಪಕ್ಷಗಳು ಅಲ್ಲಗಳೆಯುತ್ತವೆ.

## ಕರ್ತನ ಭೋಜನ (11:23-34)

ಹೊಸ ಒಡಂಬಡಿಕೆಯ ಓದುಗರು ನಾಲ್ಕು ಸುವಾರ್ತೆಯ ವಿವರಣೆಯನ್ನು ಓದಿ ಮುಗಿಸಿದ ಮೇಲೆ, ಅವರು ಮೇಲಿಂದ ಮೇಲೆ ಉಲ್ಲೇಖಿಸಿದ ಸಾಮ್ಯಗಳ ಮತ್ತು ಯೇಸುವಿನ ಕಾರ್ಯಗಳ ಕುರಿತು ಕೆಳಗಿನ ದಾಖಲೆಗಳಲ್ಲಿ ನಿರೀಕ್ಷಿಸಿರಬಹುದು. ಹಾಗೂ, ಅಪೊಸ್ತಲರ ಕೃತ್ಯಗಳು, ಪತ್ರಿಕೆಗಳು ಮತ್ತು ಪ್ರಕಟನೆ ಕರ್ತನ ಜೀವಿತ ಮತ್ತು ಸೇವೆಯ ಕುರಿತು ಹೇಳುವದಕ್ಕೆ ಬಹಳ ಸ್ವಲ್ಪ ವಿಷಯಗಳನ್ನು ಹೊಂದವೆ. ಆತನ ಮರಣ, ಪುನರುತ್ಥಾನ ಮತ್ತು ತಿರುಗಿ ಬರುವ ಆತನ ವಾಗ್ದಾನಕ್ಕೆ ಒತ್ತು ನೀಡುತ್ತವೆ. ಪೌಲನು ಯಾವಾಗಾದರೊಮ್ಮೆ ಕರ್ತನು ನೀಡಿದ ಹೇಳಿಕೆಗಳನ್ನು ಉಲ್ಲೇಖಿಸುತ್ತಾನೆ (1 ಕೊರಿಂಥ 7:10; 9:14), ಆದರೆ ತನ್ನ ಪತ್ರಗಳಲ್ಲಿ ಎಲ್ಲಿಯೂ ಕರ್ತನ ಭೋಜನದಲ್ಲಿ ನಡೆದುಕೊಳ್ಳಬೇಕಾದ ರೀತಿಯನ್ನು ಹೋಲಿಸಿಲ್ಲ.

ಕರ್ತನ ಭೋಜನದಲ್ಲಿ, ದೇವರು ತನ್ನ ಕೃಪೆಯನ್ನು ಪ್ರಕಟಿಸುತ್ತಾನೆ ಮತ್ತು ತನ್ನ ಬಲವನ್ನು ನಿವೇದಿಸುತ್ತಾನೆ. ರೊಟ್ಟಿ ಮತ್ತು ಪಾತ್ರೆ ಕ್ರೈಸ್ತ ನಂಬಿಕೆಯ ಮೂಲ ಸಂಗತಿಯನ್ನು ಜ್ಞಾಪಿಸುತ್ತದೆ. ಇದು ಜ್ಞಾಪಕಾರ್ಥವಾಗಿದೆ, ಆದರೆ ಅದಕ್ಕಿಂತಲೂ ಮಿಗಿಲಾಗಿದೆ. ನಾವು ಈಗಾಗಲೇ ಪೌಲನ ಪತ್ರಗಳಲ್ಲಿ ನೋಡಿದ್ದೇವೆ ಪಾತ್ರೆಯು "ಪಾಲುತೆಗೆದುಕೊಳ್ಳುವದು" ಅಥವಾ ಕ್ರಿಸ್ತನ ರಕ್ತದಲ್ಲಿ "ಅನ್ಯೋನ್ಯತೆ" ಆಗಿದೆ ಮತ್ತು ರೊಟ್ಟಿಯು ಕರ್ತನ ದೇಹದಲ್ಲಿ "ಪಾಲುತೆಗದುಕೊಳ್ಳುವದು" ಅಥವಾ "ಅನ್ಯೋನ್ಯತೆಯಾಗಿದೆ" (10:16).

### ಕರ್ತನ ಭೋಜನದ ಸ್ಥಾಪನೆ (11:23-26)

**23ನಾನು ನಿಮಗೆ ತಿಳಿಸಿಕೊಟ್ಟ ಉಪದೇಶವನ್ನು ಕರ್ತನಿಂದ ಹೊಂದಿದೆನು. ಅದೇನಂದರೆ – ಕರ್ತನಾದ ಯೇಸು ತಾನು ಹಿಡಿದು ಕೊಡಲ್ಪಟ್ಟ ರಾತ್ರಿಯಲ್ಲಿ ರೊಟ್ಟಿಯನ್ನು ತೆಗೆದುಕೊಂಡು ದೇವರ ಸ್ತ್ರೋತ್ರಮಾಡಿ ಮುರಿದು – 24ಇದು ನಿಮಗೋಸ್ಕರವಾಗಿರುವ ನನ್ನ ದೇಹ; ನನ್ನನ್ನು ನೆನಸಿಕೊಳ್ಳುವದಕ್ಕೋಸ್ಕರ ಹೀಗೆ ಮಾಡಿರಿ ಅಂದನು. 25ಊಟವಾದ ಮೇಲೆ ಆತನು ಅದೇ ರೀತಿಯಾಗಿ ಪಾತ್ರೆಯನ್ನು ತೆಗೆದುಕೊಂಡು – ಈ ಪಾತ್ರೆಯು ನನ್ನ ರಕ್ತದಿಂದ ಸ್ಥಾಪಿತವಾಗುವ ಹೊಸ ಒಡಂಬಡಿಕೆಯನ್ನು ಸೂಚಿಸುತ್ತದೆ; ನೀವು ಇದರಲ್ಲಿ ಪಾನಮಾಡುವಾಗೆಲ್ಲಾ ನನ್ನನ್ನು ನೆನೆಸಿಕೊಳ್ಳುವದಕ್ಕೋಸ್ಕರ ಪಾನಮಾಡಿರಿ ಅಂದನು. 26ನೀವು ಈ ರೊಟ್ಟಿಯನ್ನು ತಿಂದು ಈ ಪಾತ್ರೆಯಲ್ಲಿ ಪಾನಮಾಡುವಷ್ಟು ಸಾರಿ ಕರ್ತನ ಮರಣವನ್ನು ಆತನು ಬರುವ ತನಕ ಪ್ರಸಿದ್ಧಿ ಪಡಿಸುತ್ತೀರಿ.**

**ವಚನ 23.** ವಾದವಿವಾದಗಳ ಮಧ್ಯದಲ್ಲಿ, ಪೌಲನು ತಾನು ಸಾರಿದ ಸುವಾರ್ತೆಯ ಕುರಿತು ಹೇಳುತ್ತಾನೆ. "ನಾನು ಅದನ್ನು ಮನುಷ್ಯನಿಂದ ಹೊಂದಲಿಲ್ಲ ನನಗೆ ಯಾರು ಉಪದೇಶಿಸಲಿಲ್ಲ, ಯೇಸು ಕ್ರಿಸ್ತನೇ ನನಗೆ ಪ್ರಕಟಿಸಿದನು" (ಗಲಾತ್ಯ 1:12). ಅಪೋಸ್ತಲನು ತಾನು ಹೊಂದಿರುವ ಅಧಿಕಾರಕ್ಕೆ ಯಾವ ಮನುಷ್ಯನ ಅಥವಾ ಯೆರೂಸಲೇಮಿನಲ್ಲಿದ್ದ

ಅಪೊಸ್ತಲರಿಗೆ ಋಣಸ್ಥನಾಗಿರಲಿಲ್ಲ. ಅದೇ ಸಮಯದಲ್ಲಿ, ತನಗಿಂತ ಮೊದಲು ಅಪೊಸ್ತಲರಾಗಿದ್ದವರು ತಿಳಿಸಿದ ಸಂಪ್ರದಾಯಗಳನ್ನು ಅಲ್ಲಗಳೆಯಲಿಲ್ಲ (2:2), ಅಲ್ಲದೇ ಅವನು ವಿಶ್ವಾಸಿಗಳಿಗೆ ಕ್ರೈಸ್ತ ಸಂಪ್ರದಾಯಗಳನ್ನು ಹಗುರವಾಗಿ ತೆಗೆದುಕೊಳ್ಳಬೇಕು ಎಂದು ಬೋಧಿಸಲಿಲ್ಲ (2 ಥೆಸಲೋನಿಕ 2:15). ತಾನು ಕೊರಿಂಥದವರಿಗೆ ನೀಡಿರುವದನ್ನು ತಾನು ದೇವರಿಂದ ಹೊಂದಿಕೊಂಡಿದ್ದೇನೆ ಎಂದು ಹೇಳುವಾಗ **ಪೌಲನು ಕ್ರಿಸ್ತನು ತನಗೆ ವಯಕ್ತಿಕವಾಗಿ ಪ್ರಕಟನೆಯನ್ನು ನೀಡಿದ್ದಾನೆ** ಎಂದು ಹೇಳಿಕೊಳ್ಳುತ್ತಿಲ್ಲ. ತಾನು ಕರ್ತನಿಂದ ಹೊಂದಿಕೊಂಡಿರುವ ಪ್ರಕಟನೆ ಅದು ಅಪೊಸ್ತಲರಾಗಿದ್ದವರು ಮತ್ತು ತನಗಿಂತ ಮುಂದೆ ಪ್ರವಾದಿಗಳಾಗಿದ್ದವರು ಪವಿತ್ರಾತ್ಮನ ಪ್ರೇರಣೆಯಿಂದ ಸುವಾರ್ತೆಯ ಮೂಲ ಸಂಗತಿಗಳನ್ನು ಅಧಿಕಾರಯುತವಾಗಿ ಮಾತಾಡಿದವುಗಳಿಂದ ಹೊಂದಿಕೊಂಡಿದ್ದೇನೆ ಎಂದು ಹೇಳುತ್ತಾನೆ. ಪೌಲನು ಕೊರಿಂಥದವರು ಕರ್ತನ ಭೋಜನವನ್ನು ಸ್ವೀಕರಿಸಿಕೊಳ್ಳುವ ರೀತಿಯನ್ನು ತಿದ್ದುವದಕ್ಕಿಂತ ಹೆಚ್ಚಾದದ್ದನ್ನು ಮಾಡುವ ಉದ್ದೇಶವನ್ನು ಹೊಂದಿದ್ದಾನೆ. ಅವನ ಒಂದು ಆಸಕ್ತಿ ಎಂದರೆ ಸಮುದಾಯ ಭೋಜನವನ್ನು ಅನುಸರಿಸಿ ನಡೆಯುವ ಭೋಜನದಲ್ಲಿ ಅಳವಡಿಸಿಕೊಳ್ಳುವದಾಗಿದೆ.

ಅಪೊಸ್ತಲನು ಬಹಳ ಮಟ್ಟಿಗೆ ಕೊರಿಂಥದವರಿಗೆ ಕರ್ತನ ಭೋಜನವನ್ನು ಆಚರಿಸಲು ತನ್ನ ಪ್ರಾರಂಭದ ಬೆಟ್ಟಿಯಲ್ಲಿ ಬೋಧಿಸಿರಬಹುದು (ನೋಡಿರಿ ಅ.ಕೃ. 18:1-11). ಅವನು ಎಲ್ಲೆಲ್ಲಿ ಸಭೆಗಳನ್ನು ಸ್ಥಾಪಿಸಿದ್ದನೋ, ಅಲ್ಲಿ ಅವನು ಖಂಡಿತವಾಗಿ ಕ್ರೈಸ್ತರಿಗೆ ಕರ್ತನ ದಿನದಲ್ಲಿ ಒಟ್ಟಾಗಿ ಕೂಡಿಬರುವದರ ಮತ್ತು ಕರ್ತನ ಭೋಜನವನ್ನು ಅಚರಿಸುವದರ ಕುರಿತು ಸೂಚನೆಗಳನ್ನು ನೀಡಿದ್ದನು. ಇತರ ಮಿಶನರಿಗಳೊಂದಿಗೆ ಪೌಲನು ಹೊಸ ಕ್ರೈಸ್ತರಿಗೆ **ಯೇಸುವು ತಾನು ಹಿಡಿದುಕೊಡಲ್ಪಡುವ ರಾತ್ರಿಯಲ್ಲಿ ರೊಟ್ಟಿಯನ್ನು ಹೇಗೆ ತೆಗೆದುಕೊಂಡನು** ಎಂಬುದನ್ನು ಹೇಳಿದ್ದನು. ಕ್ರೈಸ್ತರು ರೊಟ್ಟಿ ಮುರಿಯುವಾಗ ಮತ್ತು ಪಾತ್ರೆಯಲ್ಲಿ ಕುಡಿಯುವಾಗ, ಅವರು ಯೇಸುವಿನ ಬಲಿದಾನವನ್ನು ಜ್ಞಾಪಕ ಮಾಡಿಕೊಳ್ಳುತ್ತಿದ್ದರು.

**ವಚನಗಳು 24, 25.** ಕೇವಲ ಪೌಲ ಮತ್ತು ಲೂಕ ಆತನು ಸ್ತೋತ್ರ ಮಾಡಿ (εὐχαριστήσας, *eucharistēsas*) ಎಂಬ ಪದಗಳನ್ನು ಯೇಸು ರೊಟ್ಟಿ ಮುರಿಯುವದನ್ನು ಹೇಳುವಾಗ[23] ಉಪಯೋಗಿಸುತ್ತಾರೆ. ಮತ್ತಾಯ 25:26 ಮತ್ತು ಮಾರ್ಕ 14:22 ಅರ್ಥವು ಅಷ್ಟಾಗಿ ವ್ಯತ್ಯಾಸವನ್ನು ಹೊಂದದೇ ಇದ್ದಾಗಲೂ ಆತನು ರೊಟ್ಟಿಯನ್ನು "ಆಶೀರ್ವದಿಸಿದನು" ಎಂದು ಸೂಚಿಸುತ್ತದೆ. ಕ್ರೈಸ್ತರು ತಮ್ಮ ಸಹ ಕ್ರೈಸ್ತರೊಂದಿಗೆ ಸಭೆಯಲ್ಲಿ ರೊಟ್ಟಿಯನ್ನು ತೆಗೆದುಕೊಳ್ಳುವಾಗ. ಅವರು ಕರ್ತನ ದೇಹದಲ್ಲಿ ಪಾಲುತೆಗೆದು ಕೊಳ್ಳುವವರಾಗಿದ್ದಾರೆ.

ಕೆಲವು ಧಾರ್ಮಿಕ ಗುಂಪುಗಳು "ದ್ರವ್ಯಾಂತರಮಾಡುವದು" ಎಂದು ಬೋಧಿಸುತ್ತವೆ ಕರ್ತನ ಭೋಜನದ ರೊಟ್ಟಿಯನ್ನು ವಿಶ್ವಾಸಿಯು ತಿನ್ನುವಾಗ ನಿಜವಾಗಿಯೂ ಅದು ಕ್ರಿಸ್ತನ ದೇಹವಾಗಿ ಮಾರ್ಪಡುತ್ತದೆ. ಇದಕ್ಕೆ ವಿಭಿನ್ನವಾಗಿ, ಯೇಸು **ಇದು ನನ್ನ ದೇಹ**, ಎಂದು ಹೇಳಿದ್ದಾನೆ ಅದೇ ರೀತಿಯಲ್ಲಿ "ನಾನೇ ನಿಜವಾದ ದ್ರಾಕ್ಷೆಯ ಬಳ್ಳಿ" ಎಂದು ಸಹ ಇನ್ನೊಂದು ಸನ್ನಿವೇಶದಲ್ಲಿ ಯೇಸು ಹೇಳಿದ್ದಾನೆ (ಯೋಹಾನ 15:1). ರೊಟ್ಟಿ, ಸಾಂಕೇತಿಕವಾಗಿ ಮತ್ತು ಆತ್ಮೀಕವಾಗಿ ಯೇಸುವಿನ ದೇಹವನ್ನು ಪ್ರತಿನಿಧಿಸುತ್ತದೆ

ಅಲಂಕಾರಿಕವಾಗಿ ಯೇಸು ನಿಜವಾದ ದ್ರಾಕ್ಷೆಯ ಬಳ್ಳಿಯಾಗಿ ಇರುವಂತೆ.

ರೊಟ್ಟಿ ಮತ್ತು ಪಾತ್ರೆಯ ಮೂಲಕ, ವಿಶ್ವಾಸಿಗಳು ಯೇಸು ತನ್ನ ಜನರ ಸಲುವಾಗಿ ಮರಣಹೊಂದಿದನು ಎಂಬ ತಮ್ಮ ಸಾಮಾನ್ಯ ನಂಬಿಕೆಯನ್ನು ತೋರಿಸುತ್ತಾರೆ. ಅವನು ನಮ್ಮ ಪಾಪಗಳನ್ನು ಹೊತ್ತನು. ಕರ್ತನ ಭೋಜನವನ್ನು ತೆಗೆದುಕೊಳ್ಳುವದು ಒಂದು ಅನ್ಯೋನ್ಯತೆಯಾಗಿದೆ; ಇದು ಪಾಲು ತೆಗೆದುಕೊಳ್ಳುವದಾಗಿದೆ. ರೊಟ್ಟಿ ಮತ್ತು ಪಾತ್ರೆಯಲ್ಲಿ ಪಾಲು ತೆಗೆದುಕೊಳ್ಳುವದರ ಮೂಲಕ, ವಿಶ್ವಾಸಿಗಳು ಪರಸ್ಪರರೊಂದಿಗೆ ಹಂಚಿಕೊಳ್ಳುತ್ತಾರೆ ಮತ್ತು ಸಮೂಹವಾಗಿ ಕರ್ತನೊಂದಿಗೆ ಪಾಲುಗಾರರಾಗುತ್ತಾರೆ. ಭೋಜನದ ಮೂಲಕ, ವಿಶ್ವಾಸಿಗಳು ತನ್ನ ನಂಬಿಕೆಯನ್ನು ನವೀಕರಿಸಿಕೊಳ್ಳುತ್ತಾರೆ ಮತ್ತು ಮೇಲಿನಿಂದ ಬಲವನ್ನು ಹೊಂದಿಕೊಳ್ಳುತ್ತಾರೆ. ಕರ್ತನ ಭೋಜನ ಜ್ಞಾಪಕಾರ್ಥವಾಗಿದೆ, ಆದರೆ ಇದು ಕೇವಲ ಜ್ಞಾಪಕಾರ್ಥವಲ್ಲ.

ವಾರದಿಂದ ವಾರಕ್ಕೆ, ವಿಶ್ವಾಸಿಯ ಮನಸ್ಸುಗಳು ಕ್ರೂಜೆಯ ಮೇಲೆ ಕೇಂದ್ರಿಕರಿಸಬೇಕು. ಎರಡೂ ವಚನಗಳಲ್ಲಿ, ವರ್ತಮಾನಕಾಲವು ನಿರಂತರವಾದ ಜ್ಞಾಪಕಾರ್ಥ ಮತ್ತು ರಕ್ಷಕನ ಮರಣದಲ್ಲಿ ಪಾಲುಗಾರಿಕೆಯನ್ನು ಜ್ಞಾಪಿಸುತ್ತದೆ. ಐದನೆಯ ಶತಮಾನದಲ್ಲಿ, Augustine ಲ್ಯಾಟಿನನಲ್ಲಿ ಹೇಳಿಕೆಯನ್ನು ಬರೆದನು ಅದನ್ನು ಅನುವಾದಿಸಲಾಗಿದೆ, “ನಾನು ನಿಮ್ಮಲ್ಲಿ ಬದಲಾಗುವದಿಲ್ಲ, ನೀವು ನನ್ನಲ್ಲಿ ಬದಲಾಗಬೇಕು.”[24] ಅದೇ ಸಮಯದಲ್ಲಿ Augustine ಬಹುಶಃ ದ್ರವ್ಯಾಂತರ ಮಾಡುವಂತ ಏನಾದರೂ ಮನಸ್ಸನಲ್ಲಿ ಇಟ್ಟುಕೊಂಡಿರಬಹುದು. ದೇವರು ಕರ್ತನ ಭೋಜನದ ಮೂಲಕ ವಿಶ್ವಾಸಿಗಳು ಕ್ರಿಸ್ತನಂತಾಗಲು ಬಲಪಡಿಸುತ್ತಾನೆ ಎಂಬ ಅವನ ಗ್ರಹಿಕೆ ಸರಿಯಾಗಿದೆ. ಜನರು ಲೌಕಿಕ ಆಹಾರವನ್ನು ಊಟಮಾಡುವಾಗ, ಅದು ಪೋಷಣೆಯನ್ನು ನೀಡುತ್ತದೆ, ಆ ಕಾರಣದಿಂದ ಅವರನ್ನು ಬದಲಾಯಿಸುತ್ತದೆ; ಒಬ್ಬನು ಕರ್ತನ ಭೋಜನದಲ್ಲಿ ಪಾಲುತೆಗೆದುಕೊಳ್ಳುವಾಗ, ಬದಲಾವಣೆಯು ಬೇರೆ ವಿಧದ್ದಾಗಿರುತ್ತದೆ. ರೊಟ್ಟಿಯನ್ನು ಮತ್ತು ಪಾತ್ರೆಯನ್ನು ತೆಗೆದುಕೊಳ್ಳುವದರ ಮೂಲಕ ಆರಾಧಿಸುವವನು ಕ್ರಿಸ್ತನಲ್ಲಿ ಪಾಲುಗಾರನಾಗುತ್ತಾನೆ ಮತ್ತು ಪಾಲುತೆಗೆದುಕೊಂಡವನ ನಂಬಿಕೆ ಕಾರ್ಯಮಾಡುವ ಹಂತಕ್ಕೆ ತಲುಪುತ್ತದೆ ಅವನು ಅಥವಾ ಅವಳು ಯೇಸುವಿನಂತೆ ಆಗುತ್ತಾರೆ.

**ನನ್ನ ಜ್ಞಾಪಕಾರ್ಥವಾಗಿ ಮಾಡಿರಿ** ಎಂಬ ಪದವನ್ನು ಪೌಲನು ಕರ್ತನ ಭೋಜನವನ್ನು ಉಲ್ಲೇಖಿಸಲು ಉಪಯೋಗಿಸಿರುವಲ್ಲಿ ಕನಿಷ್ಠ ಎರಡು ತಿಳುವಳಿಕೆಗಳಿರುವ ಸಾಧ್ಯತೆ ಇದೆ. ಬಹಳ ಮಟ್ಟಿಗೆ ಯೇಸು ತಾನೇ ಪಾಲುಗಾರರನ್ನು ತಾನು ನಮ್ಮನ್ನು ರಕ್ಷಿಸಿವುದಕ್ಕಾಗಿ ನೀಡಿದ ಕ್ರಯವನ್ನು ಜ್ಞಾಪಿಸಿಕೊಳ್ಳಲು ಕರೆನೀಡುತ್ತಿದ್ದಾನೆ ಎಂದಾಗಿರಬಹುದು. ಹೀಗಿದ್ದಲ್ಲಿ, ಜ್ಞಾಪಕಾರ್ಥವು ಕೃತಜ್ಞತೆಯುಳ್ಳದ್ದಾಗಿರಬೇಕು. ಇನ್ನೊಂದು ಸಾಧ್ಯತೆ ಎಂದರೆ ಕರ್ತನ ಭೋಜನದಲ್ಲಿ ಪಾಲು ತೆಗೆದುಕೊಳ್ಳುವ ಕ್ರೈಸ್ತರು ದೇವರಿಗೆ ಕ್ರೂಜೆಯ ಮೇಲೆ ಆತನ ಬಲಿದಾನವನ್ನು ಪರಿಗಣಿಸಬೇಕೆಂದು, ಕ್ರೂಜೆಯನ್ನು “ನೆನಪು” ಮಾಡಿಕೊಳ್ಳಬೇಕೆಂದು ಮತ್ತು ತಮ್ಮ ಅಪರಾಧಗಳ ಭಾರವನ್ನು ತೆಗೆಯಬೇಕೆಂದು ಬೇಡಿಕೊಳ್ಳುವವರಾಗಿದ್ದಾರೆ. ಕೊರಿಂಥದವರು ಯಾವ ರೀತಿಯಲ್ಲಿ ಭೋಜನವನ್ನು ತೆಗೆದುಕೊಳ್ಳುತ್ತಿದ್ದರು ಎಂಬದು ಸನ್ನಿವೇಶವು ಸಲಹೆ ನೀಡುವ ಪ್ರಶ್ನೆಯಾಗಿದೆ. ನಮ್ಮನ್ನು ರಕ್ಷಿಸುವದಕ್ಕಾಗಿ ಕ್ರಿಸ್ತನು ನೀಡಿದ ಕ್ರಯವನ್ನು ಕ್ರೈಸ್ತರಾಗಿ, ನಾವು ಪ್ರತಿಫಲಿಸಬೇಕು. ವಾರಗಳು

ಕಳೆದುಹೋಗುತ್ತಿರುವ ಹಾಗೆ ನಾವು ಕ್ರೂಜೆಯ ಕುರಿತು ಯೋಚಿಸುವವರಾಗಿರಬೇಕು.

ಯೇಸು ಸುರಿಸಿರುವ ರಕ್ತದ ಮೂಲಕ ದೇವರು ತನ್ನ ಜನರೊಂದಿಗೆ **ಹೊಸ ಒಡಂಬಡಿಕೆಯಲ್ಲಿ** ಪ್ರವೇಶಿಸಿದನು. ಹೊಸ ಒಡಂಬಡಿಕೆಯನ್ನು ಮೋಶೆಯ ಮೂಲಕ ದೇವರು ಇಸ್ರಾಯೇಲ್ಯರೊಂದಿಗೆ ಮಾಡಿದ ಹಳೆ ಒಡಂಬಡಿಕೆಯಿಂದ ಬೇರ್ಪಡಿಸಬೇಕು. ಮತ್ತಾಯ 26:28 ಮತ್ತು ಮಾರ್ಕ 14:24ರಲ್ಲಿ, ಪಾತ್ರೆಯನ್ನು "ನನ್ನ ಒಡಂಬಡಿಕೆಯ ರಕ್ತ" ಎಂದು ಕರೆಯಲಾಗಿದೆ. ಲೂಕ 22:20ರಲ್ಲಿ "ಈ ಪಾತ್ರೆಯು ನಿಮಗೋಸ್ಕರ ಸುರಿಸಲ್ಪಡುವ ನನ್ನ ರಕ್ತದಿಂದ ಸ್ಥಾಪಿತವಾಗುವ ಹೊಸ ಒಡಂಬಡಿಕೆಯನ್ನು ಸೂಚಿಸುತ್ತದೆ." ಪೌಲನು ಹೇಳಿದ ವಾಕ್ಯವು ಲೂಕನ ಹೇಳಿಕೆಗೆ ನಿಕಟ ಹೋಲಿಕೆಯಾಗಿದೆ. ಆದರೆ ಕೇವಲ 1 ಕೊರಿಂಥದಲ್ಲಿರುವ ಹೇಳಿಕೆ ಮಾತ್ರ ಹೀಗೆ ಹೇಳುತ್ತದೆ, **ನೀವು ಎಷ್ಟು ಸಾರಿ ಇದನ್ನು ಕುಡಿಯುತ್ತೀರೋ ನನ್ನ ನೆನಪಿಗಾಗಿ ಮಾಡಿರಿ.** ಸಾರಾಂಶ ಸುವಾರ್ತೆಯಲ್ಲಿ, ಈ ಪದಗಳು ರೊಟ್ಟಿ ಮುರಿಯುವದನ್ನು ಅನುಸರಿಸುತ್ತದೆ, ಪಾತ್ರೆಯನ್ನು ಆಶೀರ್ವದಿಸುವದನ್ನಲ್ಲ,

ಗಾಯದಿಂದ ಸೋರುವ ರಕ್ತವು ಒಬ್ಬ ಮನುಷ್ಯನು ಒಂದು ಕಾರಣಕ್ಕಾಗಿ ತನ್ನನ್ನು ತಾನು ನೀಡುವದು ಅಥವಾ ತಾನು ಪ್ರೀತಿಸುವವರ ಜೀವಿತಕ್ಕಾಗಿ ನೀಡುವದಾಗಿದೆ ಬಲವಾದ ಕಲ್ಪನೆಯನ್ನು ಹೊಂದಿದೆ, ಸುರಿಯಲ್ಪಟ್ಟ ರಕ್ತದ ಪರಿಶುದ್ಧತೆ ಹಳೆ ಒಡಂಬಡಿಕೆಯಲ್ಲಿ ಆಳವಾಗಿ ಹರಿದುಬಂದಿದೆ. ದೇವರು ನೋಹನನೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳುವಾಗ, ಆತನು "ಆದರೆ ರಕ್ತದಿಂದ ಕೂಡಿರುವ ಮಾಂಸವನ್ನು ನೀವು ತಿನ್ನಬಾರದು; ರಕ್ತವು ಜೀವವಷ್ಟೆ" (ಆದಿ 9:4). ಮೋಶೆಯ ನಂತರ, "ಕರ್ತನ ಎಲ್ಲಾ ಮಾತುಗಳು ಬರೆಯಲ್ಪಟ್ಟವು" (ವಿಮೋ 24:4), ಅವನು ಬಲಿಷ್ಟ ಎತ್ತುಗಳನ್ನು ವಧಿಸಲು ಆಜ್ಞಾಪಿಸಿದನು. ಅವನು "ಒಡಂಬಡಿಕೆಯ ಪುಸ್ತಕವನ್ನು" "ಜನರು ಆಲಿಸುವಂತೆ" ಓದುವದನ್ನು ಮತ್ತು ಜನಸಮೂಹದ ಮೇಲೆ ರಕ್ತವನ್ನು ಪ್ರೋಕ್ಷಿಸುವದನ್ನು ಮುಂದುವರೆಸಿದನು. ಅವನ ಮಾತುಗಳು, "ಇಗೋ ಯೆಹೋವನು ನಿಮ್ಮ ಸಂಗಡ ಮಾಡಿಕೊಂಡ ಒಡಂಬಡಿಕೆಯನ್ನು ಸ್ಥಿರಪಡಿಸುವ ರಕ್ತ" (ವಿಮೋ 24:7, 8). ಇಬ್ರಿಯರಿಗೆ ಬರೆದ ಪತ್ರದ ಲೇಖಕನು ಇದನ್ನು ಪ್ರಮಾಣೀಕರಿಸಿದ ಸೂತ್ರವಾಗಿ ತೆಗೆದುಕೊಂಡನು. ". . . ರಕ್ತಧಾರೆಯಿಲ್ಲದೆ ಪಾಪ ಪರಿಹಾರ ಉಂಟಾಗುವದಿಲ್ಲ" (ಇಬ್ರಿಯ 9:22). ಸುರಿಯಲ್ಪಟ್ಟ ಯೇಸುವಿನ ರಕ್ತವು ಆತನ ಪ್ರೀತಿಗೆ ಮತ್ತು ಆತನ ಬಲಿದಾನದ ಮಟ್ಟಕ್ಕೆ ಸಾಕ್ಷಿಯಾಗಿದೆ. ಇದು ಕ್ರೈಸ್ತರ ಮಧ್ಯದಲ್ಲಿ ಕ್ಷಮಾಪಣೆ, ನಿರೀಕ್ಷೆ, ಅನ್ಯೋನ್ಯತೆ ಮತ್ತು ಬಲಪಡಿಸುವಿಕೆಯ ನಿರಂತರವಾದ ಗುರುತಾಗಿದೆ.

ದೇವರು ತನ್ನ ಜನರೊಂದಿಗೆ ಒಡಂಬಡಿಕೆಯ ಸಂಬಂಧದಲ್ಲಿ ಪ್ರವೇಶಿಸುತ್ತಾನೆ ಎಂಬುದು ಒಂದು ಅಘಾತವಾದ ಮತ್ತು ಆಸಕ್ತಿಯನ್ನು ಹುಟ್ಟಿಸುವ ಹಳೆ ಒಡಂಬಡಿಕೆಯ ವಿಚಾರವಾಗಿದೆ. ಇಬ್ರಿಯ ಪದ בְּרִית (*b^erith*, "covenant") ಎರಡು ಅಥವಾ ಮೂರು ಪಂಗಡಗಳ ಮಧ್ಯದಲ್ಲಿರುವ ಒಪ್ಪಂದ ಎಂಬ ಸಲಹೆಯನ್ನು ನೀಡುತ್ತದೆ, ಆದರೆ ಸಮಾನರ ಮಧ್ಯದಲ್ಲಿ ಒಪ್ಪಂದ ಅಗತ್ಯವಿಲ್ಲ. LXX *b^erithರಲ್ಲಿ* ಸಮರ್ಪಿಸಿಕೊಳ್ಳುವದು διαθήκη (*diathēkē*, "covenant") ಮತ್ತು ಅಲ್ಲಿಂದ ಅದು ಹೊಸ ಒಡಂಬಡಿಕೆಯಲ್ಲಿ ಪರಿಣಾಮಕಾರಿಯಾದ ಪದವಾಗುತ್ತದೆ. ದೇವರು ನೋಹನನೊಂದಿಗೆ (ಆದಿ 9:9), ಅಬ್ರಹಾಮನೊಂದಿಗೆ (ಆದಿ 15:18), ಇಸ್ರಾಯೇಲರೊಂದಿಗೆ (ವಿಮೋ 34:27) ಮತ್ತು

ದಾವೀದನೊಂದಿಗೆ (2 ಸಮು 23:5) ಒಡಂಬಡಿಕೆಯನ್ನು ಮಾಡಿಕೊಂಡನು. ಪ್ರವಾದಿಯಾದ ಯೆರೆಮೀಯ ಮನುಷ್ಯರ ಹೃದಯಗಳ ಮೇಲೆ ಬರೆದಿರುವ, ದೇವರು ತನ್ನ ಜನರೊಂದಿಗೆ ವಿವಿಧ ಒಡಂಬಡಿಕೆಗಳನ್ನು ಮಾಡಿಕೊಂಡಿರುವದನ್ನು ಅವು "ಹೊಸ ಒಡಂಬಡಿಕೆಯಲ್ಲಿ" ನೇರವೇರುವದನ್ನು ಮುನ್ ತಿಳಿಸಿದ್ದಾನೆ (ಯೆರೆಮೀಯ 31:31-34; ನೋಡಿರಿ ಇಬ್ರಿಯ 8:7-13). ಯೇಸು "ಪಾತ್ರೆಯು ಹೊಸ ಒಡಂಬಡಿಕೆಯನ್ನು ಸೂಚಿಸುವ ನನ್ನ ರಕ್ತ" ಎಂದು ಹೇಳುವಾಗ ಅವನು ದೇವರ ಸ್ವಯಂ ಪ್ರಕಟಪಡಿಸಿಕೊಳ್ಳುವ ಧೀರ್ಘವಾದ ಇತಿಹಾಸದೆಡೆಗೆ ಗಮನ ಸೆಳೆಯುತ್ತಿದ್ದಾನೆ. ಅವನು ಮುಂದಕ್ಕೆ ಕ್ರೈಸ್ತರು ದೇವರ ಕೃಪೆಯ ಹೊಸ ಒಡಂಬಡಿಕೆಯ ಭಾಧ್ಯಸ್ಥರು ಎಂದು ಪ್ರಕಟಿಸುತ್ತಿದ್ದಾನೆ (2 ಕೊರಿಂಥ 3:6).

**ವಚನ 26.** ಕರ್ತನ ಭೋಜನ, ಜ್ಞಾಪಕಾರ್ಥವಾಗಿ ಹಿಂದಕ್ಕೆ ನೋಡುವದಕ್ಕೆ ಬದಲಾಗಿ ಮತ್ತು ವಿಶ್ವಾಸಿಗಳ ಮಧ್ಯದಲ್ಲಿ ಅನ್ಯೋನ್ಯತೆಯನ್ನು ಹೊಂದಿಕೊಳ್ಳುವದರ, ಕ್ರಿಸ್ತನ ಬರೋಣವನ್ನು ಎದುರು ನೋಡುವದಾಗಿದೆ. ಭೋಜನದ ಮೂಲಕ, ಕ್ರೈಸ್ತನು **ಕರ್ತನು ತಿರುಗಿ ಬರುವವರೆಗೆ ಆತನ ಮರಣವನ್ನು ಪ್ರಸಿದ್ಧಿಪಡಿಸುವವನಾಗಿದ್ದಾನೆ**. ಕೊರಿಂಥದವರು ಬಹಳ ಮಟ್ಟಿಗೆ ನಿಜವಾದ ಕರ್ತನು ಸತ್ತನು ಮತ್ತು ಅವನು ಅವರು ರೊಟ್ಟಿಯನ್ನು ತಿನ್ನುವಾಗ ಮತ್ತು ಪಾತ್ರೆಯಲ್ಲಿ ಕುಡಿಯುವಾಗ ತಿರುಗಿ ಬರಲಿಕ್ಕಿದ್ದಾನೆ ಎಂಬುದನ್ನು ಜ್ಞಾಪಿಸಲು ಬಾಯಿಮಾತಿನಿಂದ ಹೇಳುವದನ್ನು ಉಪಯೋಗಿಸುತ್ತಿದ್ದರು; ಆದರೆ ಬಹುಶಃ ಪೌಲನು "ಪ್ರಕಟಿಸು" ಎಂದು ಅರ್ಥೈಸಿರಬಹುದು. ತಿನ್ನುವದು ಮತ್ತು ಕುಡಿಯುವ ಕ್ರಿಯೆಯಲ್ಲಿ, ಈ ಕ್ರೈಸ್ತರು ಇಂದಿನ ದಿನಗಳಲ್ಲಿ ಕರ್ತನ ಭೋಜನವನ್ನು ಆಚರಿಸುವವರ ರೀತಿಯಲ್ಲಿ ಇದ್ದರು, ಸಾಂಕೇತಿಕವಾಗಿ ಆತನ ಬಲಿದಾನವನ್ನು ಮತ್ತು ಕ್ರಿಸ್ತನು ತಿರುಗಿ ಬರಲಿಕ್ಕಿದ್ದಾನೆ ಎಂಬ ತಮ್ಮ ನಂಬಿಕೆಯನ್ನು ಸ್ವೀಕರಿಸುವವರಾಗಿದ್ದಾರೆ.

## ಕರ್ತನ ಭೋಜನವನ್ನು ಆಚರಿಸುವದು (11:27-34)

**27ಹೀಗಿರುವದರಿಂದ ಯಾವನಾದರೂ ಅಯೋಗ್ಯವಾಗಿ ಕರ್ತನ ರೊಟ್ಟಿಯನ್ನು ತಿಂದರೆ ಇಲ್ಲವೆ ಆತನ ಪಾತ್ರೆಯಲ್ಲಿ ಪಾನ ಮಾಡಿದರೆ ಅವನು ಕರ್ತನ ದೇಹಕ್ಕೂ ರಕ್ತಕ್ಕೂ ದ್ರೋಹಮಾಡಿದವನಾಗಿರವನು. 28ಪ್ರತಿಮನುಷ್ಯನು ತನ್ನನ್ನು ಪರೀಕ್ಷಿಸಿ ಕೊಂಡವನಾಗಿ ಆ ರೊಟ್ಟಿಯಲ್ಲಿ ತಕ್ಕೊಂಡು ತಿನ್ನಲಿ, ಆ ಪಾತ್ರೆಯಲ್ಲಿ ಕುಡಿಯಲಿ. 29ಯಾಕಂದರೆ ಕರ್ತನ ದೇಹವೆಂದು ವಿವೇಚಿಸದೆ ತಿಂದು ಕುಡಿಯುವವನು ಹಾಗೆ ತಿಂದು ಕುಡಿಯುವದರಿಂದ ನ್ಯಾಯತೀರ್ಪಿಗೊಳಗಾಗುವನು. 30ಈ ಕಾರಣದಿಂದಲೇ ನಿಮ್ಮಲ್ಲಿ ಬಹು ಮಂದಿ ಬಲಹೀನರೂ ರೋಗಿಗಳೂ ಆಗಿದ್ದಾರೆ ಮತ್ತು ಅನೇಕರು ಸಾಯುತ್ತಾರೆ. 31ನಮ್ಮನ್ನು ನಾವೇ ವಿಚಾರಿಸಿಕೊಂಡರೆ ನ್ಯಾಯವಿಚಾರಣೆಗೊಳಗಾಗುವದಿಲ್ಲ. 32ಆದರೆ ನಾವು ಕರ್ತನ ನ್ಯಾಯವಿಚಾರಣೆಗೆ ಒಳಗಾಗಿರಲಾಗಿ ಆತನು - ಇವರಿಗೆ ಲೋಕದವರ ಸಂಗಡ ಅಪರಾಧಿಗಳೆಂಬ ನಿರ್ಣಯವಾಗಬಾರದೆಂದು ನಮ್ಮನ್ನು ಶಿಕ್ಷಿಸುತ್ತಾನೆ. ಆದಕಾರಣ ನನ್ನ ಸಹೋದರರರೇ, 33ಈ ಭೋಜನವನ್ನು ಮಾಡುವದಕ್ಕೆ ಕೂಡಿಬರುವಾಗ ಒಬ್ಬರನ್ನೊಬ್ಬರು ಕಾದುಕೊಳ್ಳಿರಿ. 34ಒಬ್ಬನು ಹಸಿದರೆ ಅವನು ಮನೆಯಲ್ಲೇ ಊಟಮಾಡಲಿ; ನೀವು ಕೂಡಿ ಬಂದದ್ದು ನ್ಯಾತೀರ್ಪಿಗೊಳಗಾಗುವದಕ್ಕೆ ಕಾರಣವಾಗಬಾರದು. ಮಿಕ್ಕಾದ ಸಂಗತಿಗಳನ್ನು**

**ನಾನು ಬಂದಾಗ ಕ್ರಮಪಡಿಸುತ್ತೇನೆ.**

**ವಚನ 27.** ಈ ವಚನದಲ್ಲಿ ಕ್ರೈಸ್ತರು ಬಹಳ ಕಾಲದಿಂದ ಸಿಕ್ಕಿಕೊಂಡಿದ್ದಾರೆ ಕೆಲವರು ತಾವು ಕರ್ತನ ಭೋಜನವನ್ನು **ಅನರ್ಹವಾದ ರೀತಿಯಲ್ಲಿ ತೆಗೆದುಕೊಳ್ಳುತ್ತಿದ್ದೇವೆ** ಎಂಬ ಭಯದಲ್ಲಿದ್ದಾರೆ. ಅವರಲ್ಲಿ ಕೆಲವರು ಸ್ವಂತ ಪಾಪಗಳ ಪ್ರಜ್ಞೆಯಿಂದ, ಹಿಂಜರಿಯುತ್ತಾ ರೊಟ್ಟಿಯನ್ನು ಮುರಿಯುವವರಾಗಿದ್ದಾರೆ ಅಥವಾ ಅದನ್ನು ಮಾಡಲು ನಿರಾಕರಿಸುತ್ತಿದಾರೆ.

ಅಯೋಗ್ಯವಾಗಿ ಕರ್ತನ ಭೋಜನದಲ್ಲಿ ಪಾಲುತೆಗೆದುಕೊಳ್ಳುವದು ಪಾಪಕ್ಕಾಗಿ ಪಶ್ಚಾತ್ತಾಪಪಡದೇ ತೆಗೆದುಕೊಳ್ಳುವದು ಎಂದು ತಿಳಿದುಕೊಳ್ಳಲಾಗಿದೆ. ಅನೇಕ ಕ್ರೈಸ್ತರು ಒಟ್ಟಾಗಿ ತೊರೆದುಬಿಡದೇ ಇರುವ ಪಾಪಗಳನ್ನು ಹೊಂದಿದ್ದಾರೆ (ನೋಡಿರಿ ಕೊಲಸ್ಸೆ 3:8). ಇದರೊಟ್ಟಿಗೆ, ಅನೇಕ ಜನರು ಕರ್ತನ ಭೋಜನದಲ್ಲಿ ಪಾಲುತೆಗೆದುಕೊಳ್ಳುವಾಗ ತಮ್ಮ ಮನಸ್ಸುಗಳನ್ನು ಒಂದು ಹಂತದಲ್ಲಿ ಅಲೆದಾಡದಂತೆ ಹಿಡಿದಿಟ್ಟುಕೊಳ್ಳುವಲ್ಲಿ ಹೋರಾಡುತ್ತಿದ್ದಾರೆ. ಒಂದುವೇಳೆ ಪೌಲನು ಕ್ರೈಸ್ತರನ್ನು ಅಂತಿಮವಾಗಿ ಯೋಗ್ಯರು ಎಂದು ಕರೆದಿದ್ದಾಗಲೂ, ಯಾರೊಬ್ಬರು ರೊಟ್ಟಿಯನ್ನು ಮುರಿಯುವಲ್ಲಿ ಮತ್ತು ಪಾತ್ರೆಯಲ್ಲಿ ಕುಡಿಯುವಲ್ಲಿ ಧೈರ್ಯಮಾಡಬಾರದು.

ಕರ್ತನ ದೇಹ ಮತ್ತು ರಕ್ತವನ್ನು ಕ್ರೂಜೆಯ ಮೇಲಿರುವ **ಕರ್ತನ ದೈಹೀಕ ದೇಹ ಅಥವಾ ಕ್ರಿಸ್ತನ ದೇಹವಾದ ಸಭೆ** ಎಂದು ಉಲ್ಲೇಖಿಸಿ ವಚನದ ಉತ್ತಮವಾದ ತಿಳುವಳಿಕೆಯನ್ನು ನೀಡಿರಬಹುದು. "ದೇಹ ಮತ್ತು ರಕ್ತ" ಎಂದು ಜೋಡಿಸಿ ಹೇಳುವದು ಕ್ರಿಸ್ತನ ದೇಹ ಎಂದು ಹೇಳುವದಕ್ಕಿಂತ ಸಭೆಗೆ ಸರಳವಾಗಿದೆ. ಕರ್ತನ ಭೋಜನದ ಅದೇ ಹಿನ್ನೆಲೆಯಲ್ಲಿ ಪಕ್ಷ ಮತ್ತು ಪಂಗಡಗಳ ಚರ್ಚೆ (11:18) ಪೌಲನು ಸಂಪೂರ್ಣ ವಾಕ್ಯವನ್ನು ಉಪಯೋಗಿಸುತ್ತಿದ್ದಾನೆ ಎಂಬುದನ್ನು ತೋರಿಸುತ್ತದೆ. ಅಪೊಸ್ತಲನು ಕರ್ತನ ಭೋಜನದ ಸ್ಥಾಪನೆಯ ಕುರಿತಾಗಿ ಮಾತನಾಡುತ್ತಿದ್ದಾನೆ ಯಾಕಂದರೆ ಅದು ಕರ್ತನ ಮತ್ತು ಆತನ ಜನರ ಐಕ್ಯತೆಯನ್ನು ತೋರಿಸುತ್ತದೆ. ತಮ್ಮಲಿರುವ ಐಕ್ಯತೆಯನ್ನು ಪ್ರಕಟಿಸಲು ರೊಟ್ಟಿ ಮುರಿಯಲು ಸೇರಿಬರುತ್ತಾರೆ ಆದರೆ ಅನ್ಯೋನ್ಯ ಭೋಜನವಾಗಿರಬೇಕಾದ ಸಮಯದಲ್ಲಿ ತಕ್ಷಣ ತಮ್ಮನ್ನು ಸಾಮಾಜಿಕ ಆರ್ಥಿಕ ಹಿನ್ನೆಲೆಯಲ್ಲಿ ತಮ್ಮ ಮಧ್ಯ ಗೆರೆಯನ್ನು ಎಳೆಯುತ್ತಾರೆ ಎದು ಹೇಳುವದರ ಮೂಲಕ ಕೊರಿಂಥದವರು ನಡೆಸುವ ಅಸಂಬದ್ಧತೆಯ ಮೇಲೆ ಪ್ರಭಾವವನ್ನು ಬೀರಲು ಬಯಸುತ್ತಾನೆ (11:20, 21).

ಕರ್ತನ ಭೋಜನವನ್ನು ತೆಗೆದುಕೊಳ್ಳುವದು ಅದೇ ಸಮಯದಲ್ಲಿ ತಮ್ಮ ನಡತೆಯ ಮೂಲಕ ಭೇದವನ್ನು ಹುಟ್ಟಿಸುವಾಗ ಅದರ ತಿರುಳನ್ನು ಅಲ್ಲಗಳೆಯುವದು "ಅಯೋಗ್ಯವಾದ ರೀತಿಯಲ್ಲಿ" ತೆಗೆದುಕೊಳ್ಳುವದಾಗಿದೆ. ಕ್ರೈಸ್ತರು ದೇಹವನ್ನು ತಮ್ಮ ಸ್ವಾರ್ಥ ಆದ್ಯತೆಗಳಿಂದಾಗಿ, ಇತರರ ಕುರಿತು ಕಾಳಜಿಯಿಲ್ಲದೆ, ಅವರು ಕರ್ತನ ಭೋಜನವನ್ನು ಯೋಗ್ಯತೆಯಿಲ್ಲದೆ ತೆಗೆದುಕೊಳ್ಳುವವರಾಗಿದ್ದಾರೆ. KJV ಯಲ್ಲಿರುವಂತೆ "ಯೋಗ್ಯತೆಯಿಲ್ಲದೆ" ಕ್ರೈಸ್ತರನ್ನು ಅವರ ಕ್ಷಮಾಪಣೆ ವರ್ಣಿಸುವದಿಲ್ಲ ಆದರೆ ಕೊರಿಂಥದಲ್ಲಿ ಭೋಜನದಲ್ಲಿ ಪಾಲುಗೊಳ್ಳುವ ರೀತಿಯನ್ನು ವರ್ಣಿಸುತ್ತದೆ. ಕೊರಿಂಥದವರು ದೇಹ ಮತ್ತು ರಕ್ತದಲ್ಲಿ ಪಾಲು ತೆಗೆದುಕೊಳ್ಳುವದರ ಮೂಲಕ ದೇಹದ ಐಕ್ಯತೆಯನ್ನು ಆಚರಿಸುತ್ತಿದ್ದಾರೆ, ನಂತರ ಸಮೃದ್ಧಿ ಒಂದು ಕಡೆಗೆ ಮತ್ತು ಇನ್ನೊಂದೆಡೆಗೆ ಹಸಿವು ಎಂದು ವ್ಯಾಖ್ಯಾನಿಸುವ ಹಾಗೆ ಗುಂಪುಗಳಾಗಿ ವಿಭಾಗಿಸಿಕೊಳ್ಳುತ್ತಾರೆ. ಸಭೀಕರಲ್ಲಿರುವ ಭೇದವು "ದೇಹ ಮತ್ತು

ಕರ್ತನ ರಕ್ತಕ್ಕೆ" **ಅವಮಾನವನ್ನು** ಉಂಟು ಮಾಡುತ್ತದೆ. Gordon D. Fee ಅವರು ವಿಷಯ ಹೀಗಿರಬಹುದು ಎಂದು ಯೋಚಿಸುತ್ತಾರೆ:

> ಭೋಜನ ಎಂಬ ಅವರ ಭಾಷಾಂತರ ತೃಪ್ತಿಕರವಾಗಿಲ್ಲ ಎಂಬುದು ಖಚಿತವಾಗಿಲ್ಲ ಎಂದು ತೋರಿ ಬರುತ್ತದೆ, . . . ಬಹುಶಃ ಅವರು ಅಷ್ಟು ಸರಿಯಾಗಿ "ಕ್ರಿಸ್ತನ ಕುರಿತು ಯೋಚಿಸುತ್ತಿಲ್ಲ" ಅಥವಾ ಆತನೊಂದಿಗೆ ಸರಿಯಾದ ಅನ್ಯೋನ್ಯತೆಯಲ್ಲಿರುವದರಲ್ಲಿ ವಿಫಲರಾಗುತ್ತಿದ್ದಾರೆ, ಆದರೆ ಅವರು ಪರಸ್ಪರ ದೂಷಿಸುವ ಕಾರಣದಿಂದ ಅವರು ಆತನ ಮರಣದ ಮಹತ್ವದ ಅಂಶವನ್ನು ನಿರಾಕರಿಸುತ್ತಿದ್ದಾರೆ . . .[25]

**ವಚನ 28.** ತನ್ನ ಅನುಕಂಪದ, ತನ್ನ ಕುಟುಂಬವನ್ನು ನಡೆಸಿಕೊಳ್ಳುವ ರೀತಿ ಅಥವಾ ಅವನು ಏನಾಗಿದ್ದಾನೋ ಅದಕ್ಕೆ ಕೊಡುಗೆಯನ್ನು ನೀಡುವ ಅಂಶಗಳ ಮೇಲೆ ಒಟ್ಟಾಗಿ ಪ್ರತಿಕ್ರಿಯಿಸುವ ಸ್ವ-ಪರೀಕ್ಷೆಯಿಂದ ಒಬ್ಬ ಮನುಷ್ಯನಿಗೆ ಲಾಭವಾಗಬಹುದು. ಪ್ರತಿಯೊಬ್ಬ ವ್ಯಕ್ತಿಯು ಅವನ ಅಥವಾ ಅವಳ ಕ್ರಿಸ್ತನಲ್ಲಿ ಪ್ರಾಮಾಣಿಕತೆಯನ್ನು ಪರಿಕ್ಷೀಸಿಕೊಳ್ಳಬೇಕು. ಈ ಮನಸ್ಥಿತಿಯು ಕರ್ತನ ಬೋಜನದಲ್ಲಿ ಸಮುದಾಯವಾಗಿ ಸಮಂಜಸವಾಗಿ ಭಾಗವಹಿಸಲು ಜೊತೆಗೂಡುತ್ತದೆ. ಕೊರಿಂಥದಲ್ಲಿರುವ ಸಭೆಗಳಿಗೆ ಸ್ವ-ಪರೀಕ್ಷೆ ಎಂದರೆ "ದೇಹ ಮತ್ತು ಕರ್ತನ ರಕ್ತ" ಅಥವಾ ಸಭೆಯ ಐಕ್ಯತೆಯಲ್ಲಿ ಭೋಜನದ ಸೂಚನೆಗಳನ್ನು ಪರಿಗಣಿಸುವದಾಗಿದೆ.

ಪೌಲನು ಕೊರಿಂಥದರಿಗೆ ತಮ್ಮ ಅಭ್ಯಾಸವನ್ನು ಪರಿಕ್ಷೀಸಿಕೊಳ್ಳಲು ಕರೆನೀಡುತ್ತಾನೆ: **ಆದರೆ ಮುನುಷ್ಯನು ತನ್ನನ್ನು ತಾನು ಪರಿಕ್ಷೀಸಿಕೊಳ್ಳಬೇಕು.** ಒಂದುವೇಳೆ ಕ್ರೈಸ್ತನು ಹಿಂದಿನ ವಾರದಲ್ಲಿ ಮಾಡಿದ ಪಾಪಗಳನ್ನು ಜ್ಞಾಪಿಸಿಕೊಂಡು ಕರ್ತನ ಭೋಜನವನ್ನು ನಿರಾಕರಿಸುವದಕ್ಕೆ ಕರೆಯಲ್ಲ. ವಿಷಯ ಹಾಗಿದ್ದಲ್ಲಿ, ಯಾರೂ ರೊಟ್ಟಿಯನ್ನು ಮುರಿಯಲು ಪಾತ್ರೆಯಲ್ಲಿ ಕುಡಿಯಲು ಸಾಧ್ಯವಿಲ್ಲ. ಎಲ್ಲರೂ ಪಾಪ ಮಾಡಿದ್ದಾರೆ (ರೋಮಾ 3:23); ಪ್ರತಿಯೊಬ್ಬರು ಪ್ರತಿದಿನ ಪಾಪಮಾಡುತ್ತಾರೆ. ಪೌಲನ ಅರ್ಥ ಇದೂ ಸಹ ಅಲ್ಲ, ಅವನು ರೊಟ್ಟಿ ಮತ್ತು ಪಾತ್ರೆಯನ್ನು ಹಂಚುವ ಸಮಯದಲ್ಲಿ ಒಬ್ಬನು ತನ್ನ ಮನಸ್ಸನ್ನು ಕ್ರಿಸ್ತನ ಮರಣದ ಮೇಲೆ ಕೇಂದ್ರಿಕರಿಸದ ಹೊರತು ಭೋಜನದಲ್ಲಿ ಪಾಲುಗೊಳ್ಳಬಾರದು ಎಂಬುದಾಗಿದೆ. "ಅಯೋಗ್ಯವಾದ ರೀತಿಯಲ್ಲಿ" (11:27) ಈ ಯಾವ ಸಂಗತಿಗಳನ್ನು ತೊಡಗಿಸಿಕೊಳ್ಳುವದಿಲ್ಲ. ಈ ಸನ್ನಿವೇಶದಲ್ಲಿ ಪೌಲನು ಔತಣವನ್ನು ಸಂಕೇತಿಸುವ ಐಕ್ಯತೆಯು ಪ್ರಾಯೋಗಿಕವಾಗಿ ಸಹ ಅನ್ವಯಿಸಬೇಕೆಂದು ಬೇಡಿಕೊಳ್ಳುತ್ತಾನೆ. ಒಬ್ಬ ಕ್ರೈಸ್ತನು, ನಿಜವಾಗಿಯೂ, ತನ್ನನ್ನು ಪರಿಕ್ಷೀಸಿಕೊಂಡು ತನ್ನ ಪಾಪಮಯ ವರ್ತನೆಯನ್ನು ಬದಲಾಯಿಸಿಕೊಳ್ಳಬೇಕು; ಆದರೆ ಅವನು ಕರ್ತನ ಭೋಜನವನ್ನು ಸ್ವೀಕರಿಸುವದಕ್ಕಿಂತ ಇನ್ನಿತರ ಸಮಯಗಳಲ್ಲಿ ಇದು ನೈಜ್ಯವಾಗಿಲ್ಲ. ಭೋಜನವನ್ನು ಸ್ವೀಕರಿಸುವಾಗ, ಕರ್ತನ ದೇಹದ ಪ್ರತಿಯೊಬ್ಬ ಸದಸ್ಯನು ತನ್ನನ್ನು ತಾನು ಕ್ರೂಜೆಯನ್ನು ಮತ್ತು ತನ್ನ ಪಾಪಗಳಿಗಾಗಿ ಸಂದಾಯ ಮಾಡಿದ ಕ್ರಯವನ್ನು ಜ್ಞಾಪಿಸಿಕೊಳ್ಳುವದಕ್ಕೆ ಕರೆ ನೀಡಬೇಕು. ಇವೆಲ್ಲಾ ಸತ್ಯ, ಆದರೆ, ಕೊರಿಂಥ ಸಭೆಯವರು ಮಾಡಿದ ತಪ್ಪು ಐಕ್ಯತೆಗೆ ಸಂಬಂಧಿಸಿದ್ದಾಗಿದೆ. ಕ್ರೈಸ್ತರು ಕರ್ತನ ಭೋಜನವನ್ನು ಸ್ವೀಕರಿಸುತ್ತಾರೆ ಮತ್ತು ದೇಹದ ಐಕ್ಯತೆಯನ್ನು ಪ್ರಕಟಿಸುತ್ತಾರೆ. ಆದರೆ ಪ್ರಾಯೋಗಿಕವಾಗಿ ಅವರು ಭೇಧವನ್ನು

ಪ್ರೋತ್ಸಾಹಿಸುತ್ತಿದ್ದಾರೆ. ಯಾಕಂದರೆ ಭೇದವನ್ನು ಹುಟ್ಟಿಸುವ ಅವರ ಮಾರ್ಗಗಳು ಅವರು ಭೋಜನವನ್ನು ಅಯೋಗ್ಯವಾಗಿ ಸ್ವೀಕರಿಸುವಂತೆ ಮಾಡುತ್ತದೆ. ಎಲ್ಲಾ ಸಹೋದರರು ಸಮಾಜಿಕ ಗುಂಪುಗಳಲ್ಲಿ ಸೇರಿ ಬರುವಾಗ ಶ್ರೀಮಂತರು ಪ್ರೋತ್ಸಾಹಿಸುವದರಿಂದ ಏನು ಸಂಭವಿಸುತ್ತದೆ ಎಂಬುದನ್ನು ತಿಳಿದುಕೊಳ್ಳುವದು ಅವಶ್ಯವಾಗಿದೆ. ಈ ಅಭ್ಯಾಸದ ಪರಿಕ್ಷೇ, ಅದನ್ನು ತಿರಸ್ಕರಿಸುವತ್ತ ನಡೆಸುತ್ತದೆ ಎಂದು ಪೌಲನು ನಿರೀಕ್ಷಿಸುತ್ತಾನೆ. ದೇಹದ ಐಕ್ಯತೆಯನ್ನು ಸಮುದಾಯದ ಮೇಜಿನ ಮೇಲೆ ಒಟ್ಟಾಗಿ ಪಾಲಾಗುವದು, ಕರ್ತನ ಭೋಜನ ಮತ್ತು ಅದನ್ನು ಅನುಸರಿಸಿ ನಡೆಯುವ ಭೋಜನ ಸಮಂಜಸವಾದ ರೀತಿಯಲ್ಲಿ ಪ್ರಕಟಿಸುವಾಗ ಅದೇ ಸಂದೇಶವನ್ನು ನೀಡುತ್ತದೆ.

ದೇಹದ ಐಕ್ಯತೆಯನ್ನು ಅಲ್ಲಗಳೆದು ಭೋಜನದಲ್ಲಿ ಪಾಲು ತೆಗೆದುಕೊಳ್ಳುವದು ತಮ್ಮ ಮೇಲೆ ತೀರ್ಪನ್ನು ಬರಮಾಡಿಕೊಳ್ಳುವದಕ್ಕಾಗಿ ತಿನ್ನುವದು ಕುಡಿಯುವದನ್ನು ಸಂಕೇತಿಸುತ್ತದೆ. ಅದೇ ಸಮಯದಲ್ಲಿ ಕೊರಿಂಥದವರು ಮಾಡಿದಂತೆ ಕರ್ತನ ಭೋಜನದ ಅರ್ಥವನ್ನು ಅಲ್ಲಗಳೆಯಬಹುದಾಗಿದೆ, ಇದೇ ರೀತಿಯ ಅಪರಾಧ ಇನ್ನೊಂದು ರೀತಿಯಲ್ಲಿ ಸಹ ಸಾಧ್ಯ. ಕ್ರೈಸ್ತರ ನೈತಿಕ ತತ್ವಗಳು ಯಾವುದೇ ಗಲಭೆಯನ್ನು ಉಂಟು ಮಾಡುವ ಅಗೌರವ ಇದೇ ರೀತಿಯ ಪರಿಣಾಮವನ್ನು ಬೀರುತ್ತದೆ.

**ವಚನ 29.** ಕರ್ತನ ಭೋಜನದಲ್ಲಿ **ತಿನ್ನುವದು ಮತ್ತು ಕುಡಿಯುವದರಲ್ಲಿ** ಕ್ರಿಸ್ತನ ಉದ್ದೇಶ ಜ್ಞಾಪಕ ಮಾಡಿಕೊಳ್ಳುವದು, ಕ್ರಿಸ್ತನೊಂದಿಗೆ ಮತ್ತು ಸಹ ವಿಶ್ವಾಸಿಯೊಂದಿಗೆ ಅನ್ಯೋನ್ಯತೆ ಮತ್ತು ನಿತ್ಯಜೀವದ ದೃಢವಾದ ನಿರೀಕ್ಷೆಯಾಗಿವೆ. ರೊಟ್ಟಿಯನ್ನು ಮುರಿಯುವಾಗ ಮತ್ತು ಪಾತ್ರೆಯಲ್ಲಿ ಕುಡಿಯುವಾಗ **ದೇಹವನ್ನು ಸರಿಯಾಗಿ ತೀರ್ಮಾನಿಸುವಲ್ಲಿ** ವಿಫಲರಾದರೆ ಕರ್ತನ **ತೀರ್ಪನ್ನು** ಆಮಂತ್ರಿಸುವವರಾಗಿದ್ದೇವೆ (κρίμα, *krima*), ಅದು ಆತನ ದಂಡನೆ.

"ದೇಹ" ಎನ್ನುವಾಗ ಪೌಲನು ಏನೆಂದು ಅರ್ಥೈಸುತ್ತಾನೆ? ಅನೇಕ ಓದುಗರು ಅಪೊಸ್ತಲನ ಭೋಜನದ ವರ್ಣನೆಯನ್ನು ಕೇಂದ್ರಿಕರಿಸುತ್ತಾರೆ ಮತ್ತು ಈ ವರ್ಣನೆಯನ್ನು ನೀಡುವದಕ್ಕೆ ಅವನನ್ನು ನಡಿಸಿದ ಪರಿಸ್ಥಿತಿಗಳನ್ನು ಉದಾಸೀನ ಮಾಡುತ್ತಾರೆ. ವಿಶಾಲವಾದ ಸನ್ನಿವೇಶ "ದೇಹ" ಎಂಬ ವ್ಯಾಖ್ಯಾನವನ್ನು ಒದಗಿಸುತ್ತದೆ.

ಈ ವಚನದಲ್ಲಿ "ದೇಹ" ಕ್ರೂಜೆಯ ಮೇಲೆ ನೇತಾಡಿದ ನಿಜವಾದ ಕ್ರಿಸ್ತನ ದೇಹ ಎಂಬ ಅರ್ಥವನ್ನು ನೀಡುತ್ತದೆ. "ಅಯೋಗ್ಯವಾದ ರೀತಿಯಲ್ಲಿ" ರೊಟ್ಟಿ ಮತ್ತು ಪಾತ್ರೆಯನ್ನು ತೆಗೆದುಕೊಳ್ಳುವದರ ಕುರಿತು 11:27ರಲ್ಲಿ ಅಪೊಸ್ತಲನ ಎಚ್ಚರಿಕೆ ನೀಡುತ್ತಾನೆ, ಕರ್ತನು ನೀಡಿದ ಕ್ರಯದ ಮೇಲೆ ನಮ್ಮ ಮನಸ್ಸನ್ನು ಕೇಂದ್ರಿಕರಿಸಲು ವಿಫಲರಾಗುವದು ಎಂದು ಕ್ರೈಸ್ತರು ಮುಕ್ತಾಯಗೊಳಿಸುತ್ತಾರೆ, ಅವನು ದೇಹವು ಕ್ರೂಜೆಯ ಮೇಲೆ ನೇತಾಡುತ್ತಿರುವ ಹಾಗೆ, ಅಯೋಗ್ಯವಾಗಿ ಪಾಲುತೆಗೆದುಕೊಳ್ಳುವದು ಮತ್ತು ದಂಡನೆಯನ್ನು ತಮ್ಮ ಮೇಲೆ ಬರಮಾಡಿಕೊಳ್ಳುವದಾಗಿದೆ ಎಂದು ಹೇಳುತ್ತಾನೆ. KJV ಕೆಳಗಿನ ಅನುವಾದವನ್ನು ತಡವಾಗಿ ಮತ್ತು ಅಷ್ಟಾಗಿ ಸ್ವೀಕೃತಿಯನ್ನು ಹೊಂದದಿರುವ ಗ್ರೀಕ್ ಹಸ್ತಪ್ರತಿಯನ್ನು ನೀಡುವದರ ಮೂಲಕ ಗಲಭೆಗೆ ಸೇರಿಸುತ್ತದೆ: "ಏಕೆಂದರೆ ಕರ್ತನ ದೇಹವೆಂದು ವಿವೇಚಿಸದೆ ತಿಂದು ಕುಡಿಯುವವನು *ಹಾಗೆ ತಿಂದು* ಕುಡಿಯುವುದರಿಂದ ನ್ಯಾಯತೀರ್ಪಿಗೊಳಗಾಗುವನು" (ಒತ್ತು ನೀಡಲಾಗಿದೆ). ಉತ್ತಮವಾದ ಮತ್ತು ಹಳೆಯ

ಹಸ್ತಪ್ರತಿಗಳು 11:29ರಲ್ಲಿ "ವಿವೇಚಿಸದೆ" ಎಂಬ ಪದವನ್ನು ಪುನರಾವರ್ತಿಸುವದಿಲ್ಲ, ಅಲ್ಲದೇ ಅವರಿಗೆ "ಕರ್ತನು" ಎಂಬ ಪದಕ್ಕೆ ಸಮಾನವಾದ ಪದವಿಲ್ಲ. ಪೌಲನು "ದೇಹವನ್ನು ಸರಿಯಾಗಿ ತೀರ್ಮಾನಿಸದೆ" ಎಂದು ಕುಡಿಯುವವನಿಗಿರುವ ತೀರ್ಪಿನ ಕುರಿತು ಎಚ್ಚರಿಕೆಯನ್ನು ನೀಡುತ್ತಿದ್ದಾನೆ.

"ದೇಹ" ಸಭೆಗೆ ಪೌಲನು ಉಪಯೋಗಿಸುವ ಸಾಮಾನ್ಯ ಅಲಂಕಾರಿಕ ಪದವಾಗಿದೆ. ಅವನು "ಅನೇಕರಾಗಿರುವ ನಾವು ಒಂದೇ ದೇಹದಂತಿದ್ದೇವೆ" (10:17). "ದೇಹದ ಅಂಗಗಳು ಅನೇಕವಾಗಿದ್ದರೂ ಒಂದೇ ದೇಹವಾಗಿದ್ದೇವೆ" (12:12). ಸರಿಯಾದ ಆತ್ಮಪರೀಕ್ಷೆಯಿಲ್ಲದೆ ಭೋಜನವನ್ನು ತೆಗೆದುಕೊಳ್ಳುವದು ಕೊರಿಂಥದವರ ವಿಫಲತೆಯಾಗಿತ್ತು; ಕೊರಿಂಥದವರು ಪರಿಗಣಿಸಲು ಅಲಕ್ಷಿಸುತ್ತಿರುವದು ಕ್ರೂಜೆಯ ಮೇಲಿರುವ ಕರ್ತನ ನಿಜವಾದ ದೇಹವಲ್ಲ; ಅವರು ಸಭೆಯ ಐಕ್ಯತೆಯನ್ನು ಎತ್ತಿ ಹಿಡಿಯುವದರಲ್ಲಿ ವಿಫಲರಾಗಿದ್ದಾರೆ.

**ವಚನ 30**. ನಂತರ ಪೌಲನು ಹೇಳುತ್ತಾನೆ, **ಈ ಕಾರಣದಿಂದ ನಿಮ್ಮಲ್ಲಿ ಬಹುಮಂದಿ ಬಲಹೀನರೂ ರೋಗಿಗಳೂ ಆಗಿದ್ದಾರೆ ಮತ್ತು ಅನೇಕರು ನಿದ್ರೆ ಹೋಗುತ್ತಾರೆ ಎಂದು ಹೇಳುತ್ತಾನೆ.** ಪೌಲನು "ನಿದ್ರೆಹೋಗುವದು" ಎಂಬ ಪದವನ್ನು "ಮರಣ" ಎಂಬ ಅರ್ಥದಲ್ಲಿ ಉಪಯೋಗಿಸುತ್ತಾನೆ (15:51; 1 ಥೆಸಲೋನಿಕ 5:10). "ಅನೇಕರು ನಿದ್ರೆಹೋಗುತ್ತಾರೆ" ಬಹುಶಃ ಕೊರಿಂಥದಲ್ಲಿ ಅಸಂಖ್ಯಾತ ಕ್ರೈಸ್ತರು ಆತ್ಮೀಕವಾಗಿ ಮರಣ ಹೊಂದಿದ್ದಾರೆ ಎಂದು ಸೂಚಿಸುವ ಸೂಕ್ಷ್ಮವಾದ ವಿಧಾನವಾಗಿದೆ. "ನಿಮ್ಮಲ್ಲಿ ಅನೇಕರು" "ಬಲಹೀನರು ಮತ್ತು ರೋಗಿಗಳು" ಆಗಿದ್ದಾರೆ ಎಂಬ ಜ್ಞಾಪನವಾಗಿದೆ. ರೊಟ್ಟಿಯನ್ನು ಪಾತ್ರೆಯನ್ನು ತೆಗೆದುಕೊಳ್ಳುವದರ ಮೂಲಕ ಶ್ರೀಮಂತರು ದೇಹದ ಐಕ್ಯತೆಯನ್ನು ವ್ಯಕ್ತಪಡಿಸಿ, ನಂತರ ತಮ್ಮನ್ನು ತಾವು ಔತಣದಲ್ಲಿ ಬಂದಿದ್ದ ಬಡವರಿಂದ ಪ್ರತ್ಯೇಕಿಸಿಕೊಂಡರೆ ಅವರು ಅಯೋಗ್ಯವಾಗಿ ತಿಂದು ಕುಡಿಯುತ್ತಿದ್ದಾರೆ (11:27). ಈ ಕಾರಣದಿಂದ ಪ್ರಕೃತಿ ವಿಕೋಪಗಳು ಅವರ ಮೇಲೆ ಬರುತ್ತವೆ. ಪೌಲನು ಕೊರಿಂಥದಲ್ಲಿರುವ ಕಷ್ಟ ಅಪವಿತ್ರತೆಯ ಪರಿಣಾಮವಾಗಿದೆ ಎಂದು ದೃಢಪಡಿಸುತ್ತಿದ್ದಾನೆ. ಕೆಲವರು ಕರ್ತನಿಂದ ಶಿಕ್ಷೆಗೆ ಒಳಗಾಗಿದ್ದಾರೆ (11:32; ನೋಡಿರಿ ಇಬ್ರಿಯ 12:5-7) ಮತ್ತು ಕೆಲವರು ಸಾಯುತ್ತಾರೆ ಯಾಕಂದರೆ ಸಹಜವಾಗಿ ಸಭೆಯು ಕಪಟತನವನ್ನು ಅಪ್ಪಿಕೊಂಡ ಕಾರಣದಿಂದಾಗಿ.

**ವಚನ 31.** ಅಪೊಸ್ತಲನು ನಿಜವಾದ ಸ್ಥಿತಿಯೊಂದಿಗೆ ವಿಭಿನ್ನತೆಯನ್ನು ಸೇರಿಸುತ್ತಾನೆ (εἰ [*ei*] ಅದರೊಟ್ಟಿಗೆ ἄν [*an*] in the apodosis) ತನ್ನ ಎಚ್ಚರಿಕೆಗೆ ಒತ್ತುನೀಡುತ್ತಾ ಅದನ್ನು ಅನುಸರಿಸಿ ಬರುವ ಪೀಠಿಕಾ ವಾಕ್ಯದ ಸೂಚನೆಯನ್ನು ನೀಡುತ್ತಾನೆ. ಅವರು ತಮ್ಮನ್ನು ತಾವು ಪರಿಕ್ಷಿಸಿಕೊಳ್ಳುತ್ತಿದ್ದರೋ, ಈ ಸಂಗತಿಯ ಕುರಿತು ತೀರ್ಪನ್ನು ನೀಡುವದು ಪೌಲನಿಗೆ ಅನಾವಶ್ಯಕವಾಗಿತ್ತು. ಹೆಚ್ಚು ಮಹತ್ವದ ಅಂಶವೆಂದರೆ, ದೇವರು ಅವರಿಗೆ ತೀರ್ಪುನೀಡಲಿಲ್ಲ. ಹಾಗೂ, ಅವರು ತಮ್ಮನ್ನು ತಾವು ತೀರ್ಪುಮಾಡಿಕೊಳ್ಳಲಿಲ್ಲ. **ಒಂದುವೇಳೆ ನಮ್ಮನ್ನು ನಾವು ಸರಿಯಾಗಿ ತೀರ್ಪುಮಾಡಿಕೊಳ್ಳುವದಾದರೆ, ನಮಗೆ ತೀರ್ಪಾಗುವದಿಲ್ಲ**, ಪೌಲನು, ದೇವರು ತಮ್ಮನ್ನು ತಾವು ಪರೀಕ್ಷಿಸಿಕೊಳ್ಳಲು ನಿರಾಕರಿಸಿದ ಕೊರಿಂಥದವರಿಗೆ ನ್ಯಾಯ ತೀರಿಸುತ್ತಾನೆ ಎಂದು ಬರೆಯುತ್ತಾನೆ. ಪಾಪಗಳಿಗಾಗಿ ಪಶ್ಚಾತ್ತಾಪಪಡುವದು ಸ್ವ-ಪರೀಕ್ಷೆಯನ್ನು ಅನುಸರಿಸುತ್ತದೆ ಇದು ದೇವರನ್ನು ಮಹಿಮೆ

ಪಡಿಸುವ ಮತ್ತು ಆತನ ಮೆಚ್ಚಿಕೆಯನ್ನು ಹೊಂದಿಕೊಳ್ಳುವ ಮಾರ್ಗವಾಗಿದೆ. ಪೌಲನ ಎಚ್ಚರಿಕೆಯು ಕೊರಿಂಥದವರು ತಮ್ಮ ಅಭ್ಯಾಸಗಳಲ್ಲಿ ಪ್ರಾಮಾಣಿಕರಾಗಿ ಕಾಣಿಸಿಕೊಳ್ಳಬೇಕು ಎಂಬುದಾಗಿದೆ. ಅವನು ಉಪಯೋಗಿಸಿದ ಪ್ರಥಮ ಪುರುಷ ಬಹುವಚನ ಪದವು ಈ ಗದರಿಕೆಯನ್ನು ಮೃದುಗೊಳಿಸುತ್ತದೆ. ಅದರೊಂದಿಗೆ ಗುರುತಿಸಿಕೊಳ್ಳುತ್ತಾ, ಅವನು ಸ್ವ-ಪರೀಕ್ಷೆ ದೈವೀಕ ಜೀವಿತಕ್ಕೆ ಕೊನೆಯಿಲ್ಲದ ಅಂಶವಾಗಿದೆ ಎಂದು ಹೇಳುತ್ತಾನೆ.

**ವಚನ 32.** ಪ್ರಥಮ ಪುರುಷ ಬಹುವಚನವನ್ನು ಉಪಯೋಗಿಸುವದನ್ನು ಮುಂದುವರೆಸಿ ಅಪೊಸ್ತಲನು ಬರೆಯುತ್ತಾನೆ. **ನಾವು ನ್ಯಾಯವಿಚಾರಣೆಗೆ ಒಳಗಾಗುವಾಗ ನಾವು ಕರ್ತನಿಂದ ಶಿಸ್ತಿಗೆ ಒಳಪಡುತ್ತೇವೆ**. ಕೊರಿಂಥದ ಸಭೆಯ ಸಂಗತಿಗಳಲ್ಲಿ ದೇವರ ಮಧ್ಯಸ್ತಿಕೆ ಕೆಲವು ರೋಗ ಮತ್ತು ಮರಣಕ್ಕೆ ಕಾರಣವಾಗಿತ್ತು. ದೇವರು ತನ್ನ ಸಭೆ ತಾನು ಬಯಸಿದ್ದನ್ನು ಮಾಡಲಿ ಎಂದು ದೂರ ನಿಂತುಕೊಳ್ಳಲಿಲ್ಲ. ಅವನು ದೂರ ನಿಂತಿಕೊಂಡಿದ್ದಾನೆ ಎಂದು ನಂಬುದಕ್ಕೆ ಕ್ರೈಸ್ತರಿಗೆ ಯಾವ ಕಾರಣವಿಲ್ಲ. KJV ಯ ಅನುವಾದಕರು ಗ್ರೀಕ್ (ὑπὸ τοῦ κυρίου παιδευόμεθα, *hupo tou kuriou paideuometha*), ವಾಕ್ಯಂಗವನ್ನು ತೆಗೆದುಕೊಂಡಿದ್ದಾರೆ. "ನಾವು ಕರ್ತನಿಂದ ಶಿಕ್ಷೆಗೆ ಒಳಗಾಗಿದ್ದೇವೆ . . ." ಒತ್ತು ನೀಡುವ ಪದದ ಕ್ರಮ ಈ ಅರ್ಥವನ್ನು ನೀಡುತ್ತದೆ: "ಕ್ರೈಸ್ತರನ್ನು ಹೊರತು ಪಡಿಸಿ ಕರ್ತನಿಂದ ಯಾರೂ ಶಿಕ್ಷೆಗೆ ಒಳಗಾಗುವದಿಲ್ಲ."

ಯೋಬನು ದೇವರ ನೀತಿಯ ಮಾರ್ಗಗಳು ದೇವರ ಗ್ರಹಿಕೆಗೆ ಮೀರಿದವುಗಳಾಗಿವೆ ಎನ್ನುತ್ತಾನೆ (ನೋಡಿರಿ ಯೋಬ 38), ಆದರೆ ಇಷ್ಟಂತೂ ಸ್ಪಷ್ಟವಾಗಿದೆ: ದೇವರು ನ್ಯಾಯವಿಚಾರಣೆ ಮಾಡುತ್ತಾನೆ ಮತ್ತು ತಾನು ಪ್ರೀತಿಸುವವರನ್ನು **ಅವರು ಲೋಕದೊಂದಿಗೆ ದಂಡನೆಗೆ ಒಳಗಾಗಬಾರದೆಂದು ಶಿಕ್ಷಿಸುತ್ತಾನೆ**. ದೇವರ ಎಲ್ಲಾ ನ್ಯಾಯತೀರ್ಪುಗಳು ಲೋಕದ ಕೊನೆಯವರೆಗೆ ಕೆಳದರ್ಜೆಗೆ ಬರುವದಿಲ್ಲ. ಕೊರಿಂಥದ ವಿಶ್ವಾಸಿಗಳಲ್ಲಿ ಭೇದವನ್ನು ಹುಟ್ಟಿಸುವ ವಿಧಾನಗಳನ್ನು ಸ್ವೀಕರಿಸಿರುವದರಿಂದ, ದೇವರು ತಮ್ಮ ದೀಪಸ್ಥಂಭವನ್ನು ತನ್ನ ಸನ್ನಿಧಿಯಿಂದ ತೆಗೆದುಬಿಡುವನು ಎಂಬ ಸಾಧ್ಯತೆಯ ಭಯವನ್ನು ಹುಟ್ಟಿಸುತ್ತವೆ (ನೋಡಿರಿ ಪ್ರಕಟನೆ 2:5).

**ವಚನ 33.** ಅಪೊಸ್ತಲನು ತಾನು ಸರಳವಾಗಿ ಆಡಿದ ಮಾತುಗಳನ್ನು ಈ ವಚನದಲ್ಲಿ **ನನ್ನ ಸಹೋದರರೇ** ಎಂಬ ವಾಕ್ಯಂಗದ ಮೂಲಕ ಮೃದುಗೊಳಿಸುತ್ತಾನೆ. ಇಲ್ಲಿಯೂ ಸಹ, ಕೊರಿಂಥದವರ ಒಟ್ಟಾಗಿ ಕೂಡಿಬರುವಾಗ ಅವರ ಮಧ್ಯದಲ್ಲಿರುವ ಭೇದದ ವಿಷಯವನ್ನು ಬಿಟ್ಟಿಲ್ಲ. ಕರ್ತನ ಭೋಜನದ ಕುರಿತು ಅವನ ಚರ್ಚೆ ಸಭಿಕರು ಕರ್ತನ ಭೋಜನದಲ್ಲಿ ಪಾಲುತೆಗೆದುಕೊಳ್ಳುವಾಗ ನಿರ್ಧಿಷ್ಟವಾದ ದೂಷಣೆಗೆ ಸಂಬಂಧಿಸಿದ್ದಾಗಿದೆ. ಅವನು ಭೇದ ಮತ್ತು ಐಕ್ಯತೆಯ ಅವಶ್ಯಕತೆಯ ಕುರಿತು ತನ್ನ ಬೋಧನೆಯನ್ನು ಮುಕ್ತಾಯಗೊಳಿಸುತ್ತಿರುವ ಹಾಗೆ, ಪೌಲನು 11:17ರಲ್ಲಿ ಪ್ರಾರಂಭವಾದ ಎಚ್ಚರಿಕೆಯನ್ನು ಸಂಕ್ಷಿಪ್ತಗೊಳಿಸುತ್ತಾನೆ. ದೇವ ಜನರು - ಶ್ರೀಮಂತ ಅಥವಾ ಬಡವ, ಯೆಹೂದ್ಯ ಅಥವಾ ಗ್ರೀಕ, ಸ್ವತಂತ್ರ ಅಥವಾ ದಾಸ, ಯೌವನಸ್ಥ ಅಥವಾ ಪ್ರಾಯಸ್ಥರಾಗಲಿ, ಅಪರಾಧದಲ್ಲಿ ಮತ್ತು ಕ್ರೂಜೆಯಲ್ಲಿ - ಪ್ರಕಟಿಸಲ್ಪಟ್ಟ ದೇವರ ಕೃಪೆಯಲ್ಲಿ ಎಲ್ಲರೂ ಒಂದೇ ಆಗಿದ್ದಾರೆ ಎಂದು ಪೌಲನು ಸಂಕ್ಷಿಪ್ತಗೊಳಿಸುತ್ತಾನೆ. ಭೇದಗಳು ಪಕ್ಷಗಳಾಗಿ ಕ್ರೈಸ್ತ ನಂಬಿಕೆಯ

ಅರಿಕೆಯ ಮೂಲವನ್ನು ಅಲ್ಲಗಳೆದಿದ್ದಾರೆ. ಅವರು ರೊಟ್ಟಿಯನ್ನು ಮುರಿಯುವಾಗ ಮತ್ತು ಪಾತ್ರೆಯಲ್ಲಿ ಕುಡಿಯುವಾಗ ಮತ್ತು ನಂತರ ಪ್ರತಿಯೊಬ್ಬನು “ತನ್ನ ಸ್ವಂತ ಭೋಜನವನ್ನು ಮಾಡಲಿ ಎಂದು ವಿಭಾಗಿಸಿಕೊಳ್ಳುವಾಗ” (11:21) ಅವರು “ಕರ್ತನ ಭೋಜನವನ್ನು” ತೆಗೆದುಕೊಳ್ಳುವ ರೀತಿಯಲ್ಲಿ ತೆಗೆದುಕೊಳ್ಳುವದಿಲ್ಲ (11:20). ಅವರು ಸ್ಪಷ್ಟವಾಗಿ ಭೋಜನವನ್ನು ತಪ್ಪಾದ ರೀತಿಯಲ್ಲಿ ಆಚರಿಸುತ್ತಾರೆ.

**ಒಬ್ಬರಿಗೋಸ್ಕರ ಒಬ್ಬರು ಕಾದಿರ್ರಿ** ಎಂದರೆ, ಆತ್ಮನ ಐಕ್ಯತೆಯಲ್ಲಿ ಮತ್ತು ಸಮಾಧಾನದ ಬಂಧನದಲ್ಲಿ ಒಟ್ಟಾಗಿ ತಮ್ಮ ಸಾಮಾನ್ಯ ಭೋಜನದಲ್ಲಿ ಕೂಡಿ ಬನ್ನಿರಿ ಎಂಬ ಕರೆಯನ್ನು ನೀಡುವದಾಗಿದೆ (ಎಫೆಸ 4:3). ಈ ಭೋಜನದಲ್ಲಿ ಸಾಮಾಜಿಕವಾಗಿ ಪರಸ್ಪರರು ಬೆರೆತುಕೊಳ್ಳುವದು ಅವರು ಕರ್ತನ ಭೋಜನವನ್ನು ಆಚರಿಸುವಾಗ ರೊಟ್ಟಿ ಮುರಿಯುವದರಲ್ಲಿ ಮತ್ತು ಪಾತ್ರೆಯಲ್ಲಿ ಕುಡಿಯುವದರಲ್ಲಿ ನೀಡಿದ ಹೇಳಿಕೆಯನ್ನು ಈ ಭೋಜನದಲ್ಲಿ ಅನುಸರಿಸುವದು ಅವಶ್ಯವಾಗಿದೆ. ಈ ಎರಡೂ ವಿಭಿನ್ನ ಸಂಗತಿಗಳಾಗಿರುವಾಗ, ಕರ್ತನ ಭೋಜನದಲ್ಲಿ ಪಾಲು ತೆಗೆದುಕೊಳ್ಳುವದು ಮತ್ತು ಭೋಜನದಲ್ಲಿ ಪಾಲುಗಾರರಾಗುವದರಲ್ಲಿ ದೇವ ಜನರು ಐಕ್ಯತೆಯನ್ನು ಪ್ರದರ್ಶಿಸಬೇಕು.

**ವಚನ 34.** ಹಸಿವನ್ನು ತೃಪ್ತಿಪಡಿಸಿಕೊಳ್ಳುವದು ಕರ್ತನ ಭೋಜನದ ಉದ್ದೇಶವಲ್ಲ. **ಒಂದುವೇಳೆ ಯಾರಾದರೂ ಹಸಿದಿದ್ದಲ್ಲಿ**, ಪೌಲನು ಬರೆಯುತ್ತಾನೆ, **ಅವನು ಮನೆಯಲ್ಲಿ ಊಟಮಾಡಲು, ಇದರಿಂದಾಗಿ ನೀವು ಕೂಡಿ ಬಂದದ್ದು ನ್ಯಾಯತೀರ್ಪಿಗೆ ಕಾರಣವಾಗುವದಿಲ್ಲ**, ಕ್ರೈಸ್ತರು ತಾವು ಕೂಡಿಬಂದಿರುವಾಗ ಭೋಜನದಲ್ಲಿ ಪಾಲುಗಾರರಾಗಬೇಕೋ ಅಥವಾ ಆಗಬಾರದೋ; ಒಂದುವೇಳೆ ಅವರು ಹಾಗೆ ಮಾಡಿದ್ದಲ್ಲಿ, ಭೋಜನವು ಕ್ರಿಸ್ತನ ದೇಹದ ಐಕ್ಯತೆಯನ್ನು ದೃಢಪಡಿಸುವದಾಗಿರಬೇಕೆ ಹೊರತು ಅಲ್ಲಗಳೆಯುವಂತದಲ್ಲ. ಒಂದುವೇಳೆ ಕೆಲವು ಕ್ರೈಸ್ತರು ಕ್ರಿಸ್ತನಲ್ಲಿ ತಮ್ಮ ಸಹೋದರ ಮತ್ತು ಸಹೋದರಿಯರೊಂದಿಗೆ ಸಂತೋಷದಿಂದ ಹಂಚಿಕೊಳ್ಳಲು ಮನಸ್ಸಿಲ್ಲದಿದ್ದರೆ, ತಮ್ಮ ಹಸಿವನ್ನು ನೀಗಿಸಿಕೊಳ್ಳಲು ಅವರಿಗೆ ಮನೆಗಳುಂಟು. ಈ ಎಚ್ಚರಿಕೆಯು ಕರ್ತನ ಭೋಜನ ಮತ್ತು ಅನ್ಯೋನ್ಯ ಭೋಜನದ ಮಧ್ಯದಲ್ಲಿ ವಿಶಿಷ್ಟವಾದ ವ್ಯತ್ಯಾಸವಿದೆ ಎಂಬುದನ್ನು ತೋರಿಸುತ್ತದೆ. ಅವಶ್ಯಕತೆಯಲ್ಲಿ, ಕರ್ತನ ಭೋಜನವು ನಂಬಿಕೆಯನ್ನು ಬೆಳೆಸುವ ಸಂಗತಿಯಾಗಿದೆ. ಇದು ಕರ್ತನ ದಿನದಂದು ಸೇರಿಬರುವ ಕೂಟದ ಭಾಗವಾಗಿದೆ. ಪೌಲನು ವಯಕ್ತಿಕವಾಗಿ ಅಲ್ಲಿಗೆ ಬಂದಾಗ ಈ ಸಂಗತಿಯ ವಿಷಯದಲ್ಲಿ ಸಂಧಾನ ಮಾಡಿಕೊಳ್ಳದೇ ಪೌಲನಿಗೆ ಕೊರಿಂಥದವರಿಗೆ ಇನ್ನೂ ಹೆಚ್ಚಾಗಿ ಹೇಳುವದಿತ್ತು ಎನ್ನುವದರಲ್ಲಿ ಸಂದೇಹವಿಲ್ಲ.

# ಅಳವಡಿಸಿಕೊಳ್ಳುವದು

## ಕ್ರೈಸ್ತರು ಮತ್ತು ಸಂಪ್ರದಾಯಗಳ (11:1-16)

ವಿಶಿಷ್ಟವಾದ ಶೋತ್ರುಗಳಿಗೆ ನಿರ್ಧಿಷ್ಟವಾದ ಸಮಯ ಮತ್ತು ಸ್ಥಳಕ್ಕೆ ಸಂಬಂಧಿಸಿದಂತೆ ತಲೆಗೆ ಮುಸುಕುಹಾಕಿಕೊಳ್ಳುವದರ ಕುರಿತಾದ ಪ್ರಶ್ನೆ. ಕೊರಿಂಥದವರಿಗೆ, ತಲೆಗೆ ಮುಸುಕು ಹಾಕಿಕೊಳ್ಳುವದು ಗುರುತಾಗಿತ್ತು. ಅವರ ಈ

ಅಭ್ಯಾಸ ಒಂದು ಮಹತ್ವದ ಸಂಗತಿಯನ್ನು ಸೂಚಿಸುತಿತ್ತು. ಅಪೊಸ್ತಲನು ಜನರು ಆರಾಧನೆಯಲ್ಲಿ ಮತ್ತು ಸಭೆಯ ಜೀವಿತದಲ್ಲಿ ನಾಯಕನ ಪಾತ್ರವನ್ನು ವಹಿಸಿಕೊಳ್ಳಬೇಕು ಎಂದು ನಿರೀಕ್ಷಿಸಿದ್ದನು. ಸ್ತ್ರೀಯು ತನ್ನ ತಲೆಗೆ ಮುಸುಕನ್ನು ಹಾಕಿಕೊಳ್ಳದಿರುವಾಗ ಅಥವಾ ಪುರುಷನು ತನ್ನ ತಲೆಗೆ ಮುಸುಕನ್ನು ಹಾಕಿಕೊಳ್ಳುವಾಗ, ಇದು ಸಭೆಯ ನಾಯಕತ್ವದಲ್ಲಿ ದೇವರ ಯೋಜನೆಗೆ ಅಗೌರವವನ್ನು ಸಲ್ಲಿಸುವ ಅಭ್ಯಾಸವಾಗಿದೆ ಎಂದು ಹೇಳಲಾಗುತಿತ್ತು, ಇದರೊಟ್ಟಿಗೆ ಇನ್ನೊಂದು ಸಮಸ್ಯೆ ಎಂದರೆ ವಿಗ್ರಹಾರಾಧಕರು ಆರಾಧಿಸುವಾಗ ಪುರುಷರು ತಲೆಗೆ ಮುಸುಕನ್ನು ಹಾಕಿಕೊಳ್ಳುವದು ಅವಶ್ಯವಾಗಿತ್ತು. ಪೌಲನು ಪುರುಷ ನಾಯಕತ್ವವನ್ನು ಸೂಚಿಸುವ ಸಂಕೇತವನ್ನು ಅಪ್ಪಿಕೊಂಡನು. ಅವನು ವಿಗ್ರಹಾರಾಧಕರ ಅಭ್ಯಾಸವನ್ನು ವಿರೋಧಿಸುವ ತೋರಿಕೆಯ ಸಂಪ್ರದಾಯಗಳನ್ನು ತಿರಸ್ಕರಿಸಿದನು.

ಕೊರಿಂಥದವರಿಗೆ ಪೌಲನ ಎಚ್ಚರಿಕೆ ಅಧುನಿಕ ಕ್ರೈಸ್ತರಿಗೆ ಈ ಕೆಳಗಿನ ಸಂಗತಿಗಳನ್ನು ಬೋಧಿಸುತ್ತದೆ: (1) ಸಂಪ್ರದಾಯವು ನೈತಿಕವಾಗಿ ತಟಸ್ಥವಾಗಿರುವಾಗ, ವಿಶ್ವಾಸಿಗಳು ಸಂಪ್ರದಾಯವನ್ನು ಗೌರವಿಸಲು ಉತ್ತಮವಾಗಿ ಕಾರ್ಯನಿರ್ವಹಿಸುತ್ತಾರೆ. (2) ಸಾಮಾಜಿಕ ಸಂಪ್ರದಾಯವನ್ನು ಅದು ವ್ಯಕ್ತಪಡಿಸಿರುವ ಸನ್ನಿವೇಶದಿಂದ ಪ್ರತ್ಯೇಕಿಸಲಾಗುವದಿಲ್ಲ. ಕ್ರೈಸ್ತರು ಗೌರವಿಸುತ್ತಾರೆ ಅಥವಾ ಸಂಪ್ರದಾಯಗಳಿಗೆ ಗೌರವ ನೀಡುವದರಲ್ಲಿ ಕೊರತೆಯನ್ನು ಹೊಂದಿರುವಾಗ ಸಂಪ್ರದಾಯದ ಯಾವುದೇ ನೈತೀಕ ಅಥವಾ ಧಾರ್ಮಿಕ ಪರಿಣಾಮಗಳನ್ನು ಪರಿಗಣಿಸಬೇಕು, (3) ಸಾಮಾಜಿಕ ಸಂಪ್ರದಾಯವು ಯಾವಾಗಲೂ ಸಾಂಕೇತಿಕ ಮೌಲ್ಯವನ್ನು ಹೊಂದಿರುತ್ತದೆ ಅದು ಸಭ್ಯತೆಯನ್ನು ಪುನರುಜ್ಜೀವನಗೊಳಿಸುತ್ತದೆ, ಕ್ರಮವಾದ ಲೋಕದಲ್ಲಿ ಕ್ರಿಸ್ತನ ಬೋಧನೆಗಳು ಬೇರೂರಿ ಮತ್ತು ಅಭಿವೃದ್ಧಿಹೊಂದಬೇಕು. (4) ಕ್ರೈಸ್ತರಾಗಿ, ನಾವು ವಿಶಿಷ್ಟವಾದ ನೈತೀಕ ಮತ್ತು ಧಾರ್ಮಿಕ ಸಂಗತಿಗಳಲ್ಲಿ ನಮ್ಮ ನಿಲುವನ್ನು ತೆಗೆದುಕೊಳ್ಳಬೇಕು, ವಯಕ್ತಿಕ ಹೇಳಿಕೆಯನ್ನು ನೀಡುವದಕ್ಕಾಗಿ ಅಥವಾ ನಮ್ಮ ಸ್ವಾತಂತ್ರವನ್ನು ದೃಢೀಕರಿಸುವದಕ್ಕಾಗಿ ಸಾಮಾಜಿಕ ಸಂಪ್ರದಾಯಗಳನ್ನು ತಿರಸ್ಕರಿಸುವದು, ಜಾಣತನವಲ್ಲ ಮತ್ತು ಅದು ಕ್ರಿಸ್ತನ ಕಾರ್ಯಕ್ಕೆ ಅಪಾಯಕಾರಿಯಾಗಿದೆ.

## ಕರ್ತನ ಭೋಜನ: ಜ್ಞಾಪಕಾರ್ಥ ಅಥವಾ ಅದಕ್ಕಿಂತ ಹೆಚ್ಚು (11:17-34)

ಕ್ರೈಸ್ತರಿಗೆ, ಕರ್ತನ ದಿನದಲ್ಲಿ ಸಭೆಯಾಗಿ ಕೂಡಿಬರುವದು ನಮ್ಮ ಧಾರ್ಮಿಕ ಜೀವಿತಗಳಲ್ಲಿ ಪ್ರಾಮುಖ್ಯವಾದ ಸಂಗತಿಯಾಗಿದೆ. ಈ ಸಮಯದಲ್ಲಿ ನಾವು ಸಮುದಾಯವಾಗಿ ಕೂಡಿ ಬಂದು ಪರಸ್ಪರ ನಂಬಿಕೆಯನ್ನು ದೃಢೀಕರಿಸಿ, ಪರಸ್ಪರ ಸಾಂಗತ್ಯವನ್ನು ಆನಂದಿಸಿ, ಪರಸ್ಪರರನ್ನು ಪ್ರೋತ್ಸಾಹಿಸಿ ಮತ್ತು ಎಲ್ಲಕ್ಕಿಂತಲೂ ಹೆಚ್ಚಾಗಿ - ದೇವರನ್ನು ಆರಾಧಿಸುವದಾಗಿದೆ. ವಿಶ್ವಾಸಿಗಳು "ವಾರದ ಮೊದಲನೆಯ ದಿನದಲ್ಲಿ ಸಭೆಯಾಗಿ ಕೂಡಿಬರುವದರ ಉದ್ದೇಶವೇನು?" ಪ್ರಶ್ನೆಗೆ ಸಿದ್ಧ ಉತ್ತರವನ್ನು ಹೊಂದಿದ್ದಾರೆ, ಎರಡು ಪರಗಣನೆಯನ್ನು ಉಲ್ಲೇಖಿಸಬೆಕು.

ಮೊದಲನೆಯದಾಗಿ, ಕ್ರೈಸ್ತರು ಪರಸ್ಪರ ನಂಬಿಕೆಯ ಅರಿಕೆಯನ್ನು ದೃಢೀಕರಿಸಲು ಮತ್ತು ಒಬ್ಬರನ್ನೊಬ್ಬರು ಬೆಂಬಲಿಸಲು ಮತ್ತು ಒಬ್ಬರನ್ನೊಬ್ಬರು ದೈವೀಕ, ಸೇವಕತ್ವನ್ನು

ಕೇಂದ್ರಿಕರಿಸುವ ಜೀವಿತವನ್ನು ಪ್ರೋತ್ಸಾಹಿಸಲು ಕೂಡಿಬರುತ್ತಾರೆ. ಸಭೀಕರ ಕೂಟವು ಒಬ್ಬರ ಸಾಂಗತ್ಯದಲ್ಲಿ ಇನ್ನೊಬ್ಬರು ಆನಂದಿಸುವದಕ್ಕಾಗಿ ಇವೆಲ್ಲವುಗಳು ಮೂಲಕ ಅನ್ಯೋನ್ಯತೆಯಲ್ಲಿ ತೊಡಗಿಸಿಕೊಳ್ಳುವದಕ್ಕಾಗಿ. ನಾವು ಕೂಡಿಬರುವಾಗ ಅತೀವ ಆನಂದವನ್ನು ಅನುಭವಿಸುತ್ತೇವೆ. ಈ ಕಾರಣದಿಂದ, ಇಬ್ರಿಯ ಪತ್ರಿಕೆ ಲೇಖಕನು, ಹೀಗೆ ಬರೆಯುತ್ತಾನೆ, ". . . ನಾವು ಪರಸ್ಪರ ಹಿತಚಿಂತಕರಾಗಿದ್ದು ಪ್ರೀತಿಸುತ್ತಿರಬೇಕೆಂತಲೂ ಸತ್ಕಾರ್ಯಮಾಡಬೇಕೆಂತಲೂ ಒಬ್ಬರನ್ನೊಬ್ಬರು ಪ್ರೇರೇಪಿಸೋಣ, ಸಭೆಯಾಗಿ ಕೂಡಿ ಬರುವದನ್ನು ಬಿಟ್ಟು ಬಿಡದಂತೆ ನೋಡಿಕೊಳ್ಳೋಣ" (ಇಬ್ರಿಯ 10:24, 25ಅ).

ಕೂಡಿಬರುವ ಈ ಅಂಶವು ಕ್ರೈಸ್ತ ಕೇಂದ್ರಿಕೃತವಾಗಿದೆ; ಆದರೆ ನಾವು ಕೂಡಿಬರುವದಕ್ಕೆ ಎರಡನೆಯ ಉದ್ದೇಶವಿದೆ, ಅದು ಪ್ರಾಮುಖ್ಯವಾದದ್ದಾಗಿದೆ. *ಕೂಡಿಬರುವದು ಆರಾಧಿಸುವದಕ್ಕಾಗಿ.* ಕೂಡಿಬರುವದು ದೇವರ ಮೇಲೆ ಕೇಂದ್ರಿಕರಿಸುವದಕ್ಕಾಗಿ ಅಲ್ಲ ಗೌರವ ಮತ್ತು ವಿಚಾರಪೂರ್ಣ ಸ್ತುತಿ ವಿಶ್ವಾಸಿಯ ಬಲವನ್ನು ವ್ಯಾಪಿಸಿಕೊಳ್ಳುತ್ತವೆ. ನಾವು ಆರಾಧಿಸುವ ದೇವರು ನಾವು ಅವನನ್ನು ಸ್ತುತಿಸಲು ಮಾಡುವ ಮುಗ್ಗರಿಸುವ ಪ್ರಯತ್ನಗಳಲ್ಲಿ ಅನುಕಂಪವುಳ್ಳವನಾಗಿದ್ದಾನೆ ಎಂದು ವಿಶ್ವಾಸಿಸಬೇಕು.

ಕರ್ತನ ಭೋಜನ, ಆರಾಧನೆಯ ಇತರ ಅಂಶಗಳಂತೆ, ಒಂದಕ್ಕಿಂತ ಹೆಚ್ಚು ಉದ್ದೇಶವನ್ನು ಹೊಂದಿದೆ. ಪ್ರತಿಯೊಬ್ಬ ಕ್ರೈಸ್ತನು "ಕರ್ತನ ಭೋಜನವು ಏನಾಗಿದೆ? ನಾವು ಕೂಡಿಬರುವಾಗ ಏಕೆ ರೊಟ್ಟಿ ಮತ್ತು ಪಾತ್ರೆಯನ್ನು ತೆಗೆದುಕೊಳ್ಳಬೇಕು? ಕರ್ತನ ಭೋಜನವು ಅನ್ಯೋನ್ಯತೆಯಾಗಿದೆಯೋ, ಅಥವಾ ಅದು ಆರಾಧನೆಯ ಕುರಿತಾಗಿದೆಯೋ? ಆರಾದನೆ ಮತ್ತು ಅನ್ಯೋನ್ಯತೆ ಪರಸ್ಪರ ಸಂಬಂಧ ಹೊಂದಿವೆಯೋ?"

ಇಂಥಹ ಪ್ರಶ್ನೆಗಳನ್ನು ಕೇಳುವದರ ಮೂಲಕ ಲಾಭವನ್ನು ಹೊಂದಬಹುದು. ಪ್ರತಿವಾರ ಆಚರಿಸುವದು ಮೂರು ಸಂಗತಿಗಳನ್ನು ಹೊಂದಿದೆ. ದೇವರು ನಮಗೆ ಒದಗಿಸಿದ ವಾರದ ಆಚರಣೆಯ ಸಂಪೂರ್ಣ ಅರ್ಥವನ್ನು ಎಚ್ಚರಿಕೆಯಿಂದ ಪರಿಗಣಿಸೋಣ.

*ಹಿಂದಕ್ಕೆ ನೋಡುವದು.* ಅತ್ಯಂತ ಖಚಿತವಾಗಿ, ರೊಟ್ಟಿಯನ್ನು ಮುರಿಯುವದು ಮತ್ತು ಪಾತ್ರೆಯಲ್ಲಿ ಕುಡಿಯುವದು, ಹಿಂದಕ್ಕೆ ನೋಡುವದಾಗಿದೆ; ಇವು ಜ್ಞಾಪಕಾರ್ಥವಾಗಿವೆ. ವಿಶ್ವಾಸಿಗಳು ನಜರೇತಿನ ಯೇಸು ದೇವರ ಮಗನು ಎಂಬ ಸಾಮಾನ್ಯ ಅರಿಕೆಯಲ್ಲಿ ಜನರಾಗಿ ಒಟ್ಟಾಗಿ ಬಂಧಿಸಲ್ಪಟ್ಟಿದ್ದಾರೆ. ಆತನು ಕ್ರಿಸ್ತನಾದ ದೇವರಾಗಿರುತ್ತಾನೆ, ತಂದೆಯ ಬಲಪಾರ್ಶ್ವದಲ್ಲಿ ಕುಳಿತು ಆಳುತ್ತಾನೆ. ದೇವರು ಯೇಸುವಿನ ರೂಪದಲ್ಲಿ ಮನುಷ್ಯಾವತಾರ ಎತ್ತಿದನು. ನಾವು ಹೀಗೆ ಓದುತ್ತೇವೆ,

> ಯಾಕಂದರೆ ನಮಗಿರುವ ಮಹಾಯಾಕನು ನಮ್ಮ ನಿರ್ಬಲಾವಸ್ಥೆಯನ್ನು ಕುರಿತು ಅನುತಾಪವಿಲ್ಲದವನಲ್ಲ. ಆತನು ಸರ್ವ ವಿಷಯಗಳಲ್ಲಿ ನಮ್ಮ ಹಾಗೆ ಶೋಧನೆಗೆ ಗುರಿಯಾದನು, ಪಾಪ ಮಾತ್ರ ಮಾಡಲಿಲ್ಲ, ಆದದರಿಂದ ನಾವು ಕರುಣೆಯನ್ನು ಹೊಂದುವಂತೆಯೂ ಆತನ ದಯೆಯಿಂದ ಸಮಯೋಚಿತವಾದ ಸಹಾಯವು ನಮಗೆ ದೊರೆಯುವಂತೆಯೂ ಧೈರ್ಯದಿಂದ ಕೃಪಾಸನದ ಮುಂದೆ ಬರೋಣ (ಇಬ್ರಿಯ 4:15, 16).

ದೇವಜನರು ಅವರ ಅದ್ಭುತವಾದ ಇತಿಹಾಸದ ಸಂಗತಿಗಳ ಮೂಲಕ ವ್ಯಾಖ್ಯಾನಿಸಲ್ಪಡುತ್ತಾರೆ. ಆಕಾಶದಲ್ಲಿ ಕಾಮನಬಿಲ್ಲಿನ ಮೂಲಕ (ಆದಿ 9:13) ಜೂಬಿಲಿ ಸಂವತ್ಸರದಲ್ಲಿ ಕೊಂಬಿನ ಧ್ವನಿಯ ಮೂಲಕ (ಯಜಕಕಾಂಡ 25:9-12), ದೇವರು ಯಾವಾಗಲೂ ತನ್ನ ಜನರನ್ನು ಜ್ಞಾಪಕಗಳಿಂದ ತುಂಬಿಸಿದ್ದಾನೆ. ದೇವರು ಇಸ್ರಾಯೇಲರನ್ನು ತನ್ನ ಸ್ವಂತ ಜನ ಎಂದು ಹೇಳಿಕೊಳ್ಳುವಾಗ. ಅವನು ಅವರಿಗೆ ಆ ಸಂಗತಿಯ ಜ್ಞಾಪಕಾರ್ಥವಾಗಿ ಪಸ್ಕಹಬ್ಬವನ್ನು ನೀಡಿದನು. ಒಂಬತ್ತನೇ ತಿಂಗಳಿನಲ್ಲಿ ಜನಾಂಗಗಳು ಗುಡಾರಗಳನ್ನು ಸ್ಥಾಪಿಸಿ ಅರಣ್ಯದಲ್ಲಿ ನಲವತ್ತು ದಿವಸಗಳ ಕಾಲ ಅದರಲ್ಲಿ ಮಲಗುತ್ತಿದ್ದರು. ಇಸ್ರಾಯೇಲ್ಯರು ಯೋರ್ದಾನ ದಾಟಿದಾಗ, ಯೆಹೋಶುವನು ಜನರಿಗೆ ನದಿಯ ಮಧ್ಯದಿಂದ ಹನ್ನೆರೆಡು ಕಲ್ಲಿನ ಕಂಬಗಳನ್ನು ತೆಗೆದುಕೊಂಡು ಜ್ಞಾಪಕಾರ್ಥವಾಗಿ ಸ್ಥಾಪಿಸಬೇಕು ಎಂದು ಹೇಳಿದನು (ಯೆಹೋ 4:20, 21). ಜನರು ತಮಗೆ ಅತ್ಯಂತ ಪ್ರೀತಿಯಿರುವ ಸಂಗತಿಗಳನ್ನು ಸಹ ಮರೆತುಹೋಗುವ ಪ್ರವೃತ್ತಿಯನ್ನು ಬೆಳೆಸಿಕೊಂಡರು - ದಾನಿಯೇಲನು ಸಹ. ರೊಟ್ಟಿಯನ್ನು ಮುರಿಯುವಾಗ ಮತ್ತು ಪಾತ್ರೆಯಲ್ಲಿ ಕುಡಿಯುವಾಗ ಕ್ರೈಸ್ತರು ಹಿಂದಿನ ಸಮಯವನ್ನು ತಿರುಗಿ ನೋಡಬೇಕು; ನಾವು ನಮ್ಮ ಸಮಕಾಲೀನರೊಂದಿಗೆ ಮತ್ತು ನಮ್ಮ ಮುಂದೆಯೇ ಹೊರಟುಹೋದ ಎಲ್ಲಾ ವಿಶ್ವಾಸಿಗಳೊಂದಿಗೆ ನಮ್ಮ ಮನಸ್ಸನು ಐಕ್ಯತೆಯಲ್ಲಿ ತರಬೇಕು. ದೇವರು ತನ್ನ ಒಡಂಬಡಿಕೆಯನ್ನು ನಡಿಸಿದ್ದಾನೆ ಎಂಬುದನ್ನು ಜ್ಞಾಪಿಸಿಕೊಳ್ಳಬೇಕು; ಅವನು ತನ್ನನ್ನು ಬರಿದು ಮಾಡಿಕೊಂಡು ದಾಸನ ರೂಪವನ್ನು ಧರಿಸಿದನು (ಫಿಲಿಪ್ಪಿ 2:6, 7). ಅವನು ಕಷ್ಟಾನುಭವವನ್ನು ಅನುಭವಿಸಿದನು ಮತ್ತು ಪಾಪದಲ್ಲಿ ಬಿದ್ದು ಹೋದ ಜನರನ್ನು ರಕ್ಷಿಸುವದಕ್ಕಾಗಿ ಸತ್ತನು. ಕರ್ತನ ಭೋಜನದಲ್ಲಿ, ವಿಶ್ವಾಸಿಗಳು ಹರಿದ ಆತನ ದೇಹವನ್ನು ಮತ್ತು ಸುರಿದ ಆತನ ರಕ್ತವನ್ನು ಜ್ಞಾಪಿಸಿಕೊಳ್ಳಬೇಕು.

*ಸುತ್ತಲೂ ನೋಡಬೇಕು.* ರೊಟ್ಟಿ ಮುರಿಯುವಾಗ, ಕ್ರೈಸ್ತರು ಹಿಂದಕ್ಕೆ ನೋಡಬೇಕು ಆದರೆ ನಾವು ಸುತ್ತಲೂ ಸಹ ನೋಡಬೇಕು. ಕರ್ತನ ಭೋಜನವು ಕ್ರಿಸ್ತನ ದೇಹದಲ್ಲಿ ಅನ್ಯೋನ್ಯತೆಯಾಗಿದೆ. ಹಂಚಿಕೊಂಡ ರೊಟ್ಟಿ ಮತ್ತು ಪಾತ್ರೆ ಸಾಮಾನ್ಯ ನಂಬಿಕೆಯನ್ನು ವ್ಯಕ್ತಪಡಿಸುತ್ತದೆ. ಭೋಜನದ ಮೂಲಕ, ನಾವು ಯೇಸುವೇ ಕ್ರಿಸ್ತನೆಂದು ಅರಿಕೆಮಾಡುವದರಲ್ಲಿ ಒಬ್ಬರನ್ನೊಬ್ಬರು ದೃಢೀಕರಿಸುತ್ತೇವೆ, "ಪಾತ್ರೆಯಲ್ಲಿ ಪಾನಮಾಡುವದು ಕ್ರಿಸ್ತನ ರಕ್ತದಲ್ಲಿ ಪಾಲುಗಾಗರಾಗಿದ್ದೇವೆಂಬದನ್ನು ಸೂಚಿಸುತ್ತದಲ್ಲವೇ?" ಪೌಲನು, "ನಾವು ರೊಟ್ಟಿಯನ್ನು ಮುರಿದು ತಿನ್ನುವದು ಕ್ರಿಸ್ತನ ದೇಹದಲ್ಲಿ ಪಾಲುಗಾರರಾಗಿದ್ದೇವೆಂಬದನ್ನು ಸೂಚಿಸುತ್ತದಲ್ಲವೇ?" (1 ಕೊರಿಂಥ 10:16). ಕರ್ತನ ಭೋಜನವು ಪವಿತ್ರಾತ್ಮನು ಎತ್ತಿಹಿಡಿದಿರುವ, ಲೋಕದಲ್ಲಿ ಪಾಪದೊಂದಿಗೆ ಹೋರಾಡುತ್ತಿರುವ ಜೀವಿಸುವ ಕ್ರಿಸ್ತನ ದೇಹವಾಗಿದೆ. ಇಲ್ಲಿ ಆಚರಣೆ ಅನ್ಯೋನ್ಯತೆಯಾಗಿದೆ - ಒಬ್ಬರೊಂದಿಗೆ ಒಬ್ಬರು ಅನ್ಯೋನ್ಯತೆಯಿಂದಿರುವದು ಮತ್ತು ಕ್ರಿಸ್ತನೊಂದಿಗೆ ಅನ್ಯೋನ್ಯತೆಯಿಂದ ಇರುವದಾಗಿದೆ. ವಿಶ್ವಾಸಿಗಳಾಗಿ ನಾವು ಪಾತ್ರೆಯಲ್ಲಿ ಕುಡಿಯುತ್ತೇವೆ ಮತ್ತು ರೊಟ್ಟಿಯನ್ನು ಮುರಿಯುತ್ತೇವೆ; ಆದರೆ ನಾವು ಜನರಾಗಿ ಒಟ್ಟಾಗಿ ಇದನ್ನು ಮಾಡುತ್ತೇವೆ. ಸಭೆಯು ಕರ್ತನ ಭೋಜನದಲ್ಲಿ ಪಾಲು ತೆಗೆದುಕೊಳ್ಳುವಾಗ, ನಾವು ವಿಶ್ವಾಸಿಗಳಾದ ನಮ್ಮ ತಂದೆಗಳು ಮತ್ತು ತಾಯಿಗಳು ವರ್ಷಗಳುದ್ದಕ್ಕೂ

ಜ್ಞಾಪಿಸಿಕೊಳ್ಳುತ್ತಿದ್ದರು ಎಂಬುದನ್ನು ನಾವು ಜ್ಞಾಪಿಸಿಕೊಳ್ಳುತ್ತೇವೆ.

ಕರ್ತನ ಭೋಜನದಲ್ಲಿ ಅನ್ಯೋನ್ಯತೆ ಏಕ ಸಭೆಯ ಮಿತಿಯಿಂದ ಆಚೆಗೆ ಹೋಗುತ್ತದೆ. ಸ್ಥಳ ಮತ್ತು ಸಮಯದುದ್ದಕ್ಕೂ ಒಟ್ಟಾಗಿ ಸೇರಿಸುತ್ತದೆ, ದೇವಜನರು, ಕ್ರಿಸ್ತನ ಸಭೆಯ ಸದಸ್ಯರು, ದೇಶಿಯ ಮಿರಿಗಳಿಂದಾಚೆಗೆ ನಂಬಿಕೆಯಲ್ಲಿ ಪರಸ್ಪರರನ್ನು ಬೆಂಬಲಿಸುತ್ತಾರೆ. ಫೆಸಿಪಿಕ್ ಮಹಾಸಾಗರದಲ್ಲಿ ಎಲ್ಲಿಯಾದರೂ ಕರ್ತನ ದಿನವು ಪ್ರಾರಂಭವಾಗುತ್ತಿರುವ ಹಾಗೆ, ವಿಶ್ವಾಸಿಗಳು ಕೂಡಿಬರುತ್ತಾರೆ ಮತ್ತು ಆರಾಧಿಸುತ್ತಾರೆ. ಕರ್ತನ ಭೋಜನದಲ್ಲಿ, ಅವರು ದೃಶ್ಯವಾಗಿ ತಮ್ಮ ಸಾಮಾನ್ಯ ಅರಿಕೆಯನ್ನು ವ್ಯಕ್ತಪಡಿಸುತ್ತಾರೆ: ಕ್ರಿಸ್ತನು ಮಾನವರ ಪಾಪಕ್ಕಾಗಿ ಸತ್ತನು ಮತ್ತು ತಿರುಗಿ ಎದ್ದುಬಂದನು. ದಿನ ಮತ್ತು ಭೋಜನಕ್ಕೆ ಅನುಗುಣವಾಗಿ ವಿಶ್ವಾಸಿಗಳು ವಿಮೋಚನೆ ಹೊಂದಿದವರ ದೊಡ್ಡ ಸಮೂಹದಲ್ಲಿ ಸೇರಿಕೊಳ್ಳುತ್ತಾರೆ. ಕರ್ತನ ಭೋಜನದಲ್ಲಿ ಪಾಲುಗಾರರಾಗುವದರ ಮೂಲಕ, ನಾವು ಯೇಸು ನಮಗೆ ಮಾದರಿಯಾಗಿ ತೋರಿಸಿದ ಜೀವನ ಶೈಲಿಗೆ ಎಲ್ಲರೂ ಒಟ್ಟಾಗಿ ಸಮರ್ಪಿಸಿಕೊಳ್ಳುತ್ತೇವೆ ಮತ್ತು ನಾವೆಲ್ಲರೂ ನಿತ್ಯಜೀವದ ಒಂದೇ ನಿರೀಕ್ಷೆಯನ್ನು ಎದುರು ನೋಡುವವರಾಗಿದ್ದೇವೆ. ಕರ್ತನ ಭೋಜನವು ಹಿಂದಕ್ಕೆ ನೋಡುವದು, ಆದರೆ ಅದು ನಾವು ಪರಸ್ಪರರಿಂದ ಕಲಿಯುತಿರುವ ಹಾಗೆ ಸುತ್ತಲೂ ನೋಡುವದು ಸಹ ಆಗಿದೆ. ಒಬ್ಬರೊಂದಿಗೆ ಒಬ್ಬರು ಬೆಳೆಯಿರಿ, ಒಬ್ಬರನ್ನೊಬ್ಬರು ತಿದ್ದಿರಿ, ಒಬ್ಬರನ್ನೊಬ್ಬರು ಬೆಂಬಲಿಸಿರಿ ಮತ್ತು ಒಬ್ಬನ್ನೊಬ್ಬರು ಪೋಷಿಸಿರಿ.

ಕ್ರೈಸ್ತರಾಗಿರುವದು ಕೇವಲ ಅವನಾಗಲಿ ಅಥವಾ ಅವಳಾಗಲಿ ತನ್ನ ಮತ್ತು ಕರ್ತನ ಮಧ್ಯದಲ್ಲಿ ಮಾಡಿಕೊಳ್ಳುವ ಒಂದು ನಿರ್ಧಾರವಲ್ಲ. ಅದು ಸಭೆಯೆಂಬ ದೇಹದ ಜೀವಿತದಲ್ಲಿ ಪಾಲುತೆಗೆದುಕೊಳ್ಳುವದಾಗಿದೆ. ಯೇಸು ಮತ್ತು ಆತನ ದೇಹವೆಂಬ ಸಭೆಯನ್ನು, ಪ್ರತ್ಯೇಕಿಸಲಾಗುವದಿಲ್ಲ. ಕರ್ತನ ಭೋಜನವು ಅನುಭವದ ದೇಹವಾಗಿದೆ.

*ಮುಂದಕ್ಕೆ ನೋಡುವದು.* ಜ್ಞಾಪಕಾರ್ಥವಾಗಿರುವದು ಮತ್ತು ನಂಬಿಕೆಯನ್ನು ಪರಸ್ಪರ ಅರಿಕೆಮಾಡುವದರೊಟ್ಟಿಗೆ, ಕರ್ತನ ಭೋಜನವು ವಾಗ್ದಾನಕ್ಕೆ ಸಾಕ್ಷಿಯಾಗಿದೆ. ಇದು ಮುಂದಕ್ಕೆ ಪರಲೋಕದೆಡೆಗೆ ನೋಡುವದಾಗಿದೆ. ರೊಟ್ಟಿ ಮತ್ತು ಪಾತ್ರೆ ಕ್ರೈಸ್ತರಿಗೆ ಕರ್ತನು ತಿರುಗಿ ಬರುತ್ತೇನೆ ಎಂದು ಮಾಡಿದ ವಾಗ್ದಾನವನ್ನು ನೆನಪಿಗೆ ತರುತ್ತದೆ. "ನೀವು ಈ ರೊಟ್ಟಿಯನ್ನು ತಿಂದು ಈ ಪಾತ್ರೆಯಲ್ಲಿ ಪಾನಮಾಡುವಷ್ಟು ಸಾರಿ ಕರ್ತನ ಮರಣವನ್ನು ಆತನು ಬರುವ ತನಕ ಪ್ರಸಿದ್ಧಿಪಡಿಸುತ್ತೀರಿ" (11:26). ಲೌಕಿಕ ಜಗತ್ತು ಸಮಯವು ಸರಿದುಹೋಗುತ್ತಾ ಇದೆ ಎಂಬುದನ್ನು ಅಲ್ಲಗಳೆಯುತ್ತಾರೆ. ನಿರೀಶ್ವರವಾದದವರು ಲೋಕವು ಉಲ್ಕೆಗೆ ಬಲವಾಗಿ ಹೊಡೆಯುವಾಗ ಅಥವಾ ಮಾನವನು ಇದನ್ನು ಅಟೋಂಬಾಂಬ್ ಮೂಲಕ ನಾಶಗೊಳಿಸುತ್ತಾರೆ ಲೋಕವು ಅಂತ್ಯವಾಗುತ್ತದೆ. ದೈವೀಕರಲ್ಲದವರ ದೃಷ್ಟಿಯಲ್ಲಿ, ಇದು ಅನಿರೀಕ್ಷಿತ ಘಟನೆಯಾಗಿದೆ ಮತ್ತು ಏನೇ ಸಂಭವಿಸಿದರು ಪರಿಗಣಿಸಲ್ಪಡುವದಿಲ್ಲ.

ಸುವಾರ್ತೆಯ ಮೂಲ ತತ್ವ ಇತಿಹಾಸವು ಅಂತ್ಯದೆಡೆಗೆ ಚಲಿಸುತ್ತಿದೆ. ಈ ಭೂಮಿಯ ಭವಿಷ್ಯ ಕೇವಲ ಅವಕಾಶ ಅಥವಾ ಪರಿಸ್ಥಿತಿಯ ಸಂಗತಿಯಲ್ಲಿ. ನಜರೇತಿನ ಯೇಸುವಾಗಿ ಈ ಲೋಕದಲ್ಲಿ ಜೀವಿಸಿದ ಅದೇ ಕರ್ತನು ನಮ್ಮ ರಕ್ಷಕನು ಮತ್ತು ನ್ಯಾಯಾಧಿಪತಿಯಾಗಿ ಬರುತ್ತಾನೆ. ಕ್ರೈಸ್ತರು ಕರ್ತನ ಭೋಜನದಲ್ಲಿ ಪಾಲುತೆಗೆದುಕೊಳ್ಳುವಾಗ, ತಿರುಗಿ

ಬರಲಿಕ್ಕಿರುವ ಪುನರುತ್ಥಾನ ಹೊಂದಿದ ಕರ್ತನನ್ನು ಪ್ರತಿಬಿಂಬಿಸುವದಕ್ಕೆ ಸಮಯವಾಗಿದೆ. ಇದು ವಿಶ್ವಾಸಿಗಳಿಗೆ ಈ ಲೋಕವು ಮತ್ತು ಮಾನವ ಕುಲವು ಎಲ್ಲಿಗೋ ಹೋಗುತ್ತಿದೆ ಎಂಬುದನ್ನು ದೃಢಪಡಿಸುವ ಸಮಯವಾಗಿದೆ. ಸಭೆಯು ದೇವರು ಈ ಲೋಕದ ಒಡೆಯನಾಗಿದ್ದಾನೆ ಎಂಬುದನ್ನು ಸಾಕ್ಷಿಕರಿಸುತ್ತದೆ.

*ಮುಕ್ತಾಯ:* ಕರ್ತನ ಭೋಜನವು ನಂಬಿಕೆಯ ದೃಢೀಕರಿಸುವಿಕೆಯಾಗಿದೆ, ಭೂತಕಾಲವನ್ನು ದೃಷ್ಟಿಸುವದಾಗಿದೆ. ಇದು ಕ್ರಿಸ್ತನೊಂದಿಗೆ ಮತ್ತು ನಮ್ಮ ನಂಬಿಕೆಯನ್ನು ಹಂಚಿಕೊಳ್ಳುವ ಇತರರೊಂದಿಗೆ ಅನ್ಯೋನ್ಯತೆಯಾಗಿದೆ; ಉದಾಹರಣೆಗೆ, ಇದು ಸುತ್ತಲೂ ನೋಡುವದಾಗಿದೆ. ಇದು ಹಾರೈಕೆ, ನಿರೀಕ್ಷೆಯನ್ನು ವ್ಯಕ್ತಪಡಿಸುವುದಾಗಿದೆ, ಆದುದರಿಂದ ಭವಿಷ್ಯತ್ತಿನಲ್ಲಿ ನೋಡುವದಾಗಿದೆ. ಭೋಜನವು ಜೀವವನ್ನು ದೃಢಪಡಿಸುವದು, ನಿರೀಕ್ಷೆಯನ್ನು ದೃಢಪಡಿಸುವದು, ಸಮುದಾಯವನ್ನು ದೃಢಪಡಿಸುವ ಸಂಗತಿಯಾಗಿದೆ. ಅದು ಅದು ಏನಾಗಿತ್ತಿ, ಏನಾಗಿದೆ ಮತ್ತು ಏನಾಗಬಹುದು ಎಂಬುದರ ಮೇಲೆ ಗಮನವನ್ನು ಕೇಂದ್ರಿಕರಿಸುತ್ತದೆ. ಇದು ನಮ್ಮ ಮನಸ್ಸನ್ನು ಕ್ರೂಜೆಯೆಡೆಗೆ ತಿರುಗಿಸುತ್ತದೆ. ರೋಮನ್ ಲೋಕದ ಸಂಗತಿಯಲ್ಲಿ ಇದು ವಿಫಲತೆಯ ಸಂಕೇತವಾಗಿದೆ. ಕ್ರಿಸ್ತನು ಜಯದ ಸಂಕೇತವನ್ನು ಸೃಷ್ಟಿಸಿದನು. ಕರ್ತನ ಭೋಜನವು ರಕ್ಷಿಸಲ್ಪಟ್ಟವರು ದೇವರೊಂದಿಗೆ ಒಡಂಬಡಿಕೆಯನ್ನು ಮಾಡಿಕೊಂಡಿದ್ದಾರೆ ಎಂದು ಹೇಳುತ್ತದೆ.

---

**ಟಿಪ್ಪಣೆಗಳು**

[1]Anthony C. Thiselton, "Realized Eschatology at Corinth," *New Testament Studies* 24 (July 1978): 521. [2]Richard E. Oster, Jr., *1 Corinthians,* The College Press NIV Commentary (Joplin, Mo.: College Press Publishing Co., 1995), 253–75; Richard Oster, "When Men Wore Veils to Worship: The Historical Context of 1 Corinthians 11.4," *New Testament Studies* 34 (October 1988): 481–505. [3]Oster, *1 Corinthians,* 258. [4]Joseph A. Fitzmyer, "Another Look at ΚΕΦΑΛΗ in 1 Corinthians 11.3," *New Testament Studies* 35 (October 1989): 510. A good discussion is provided in Wayne Grudem, "Does Κεφαλη ('Head') Mean 'Source' or 'Authority Over' in Greek Literature? A Survey of 2,336 Examples," *Trinity Journal*, new series 6 (Spring 1985): 38–59. [5]Walter K. Lacey ರವರು ಮಧ್ಯಮ ಮತ್ತು ಕೆಳ-ವರ್ಗದ ಮಹಿಳೆಯರು "ಸಂಪೂರ್ಣವಾಗಿ ತಮ್ಮ ಮನೆಗಳಲ್ಲಿ ಉಳಿದರು" (Walter K. Lacey, "Women, Position of," in *The Oxford Classical Dictionary*, 2nd ed. [Oxford: Clarendon Press, 1970], 1139). [6]Jack P. Lewis ವಿಭಿನ್ನ ದೃಷ್ಟಿಕೋನವನ್ನು ಹೊಂದಿದ್ದರು. 1 ಕೊರಿಂಥ 11:4-16ರಲ್ಲಿ ಪೌಲನು ತಲೆ ಹೊದಿಕೆಯನ್ನು ಚರ್ಚಿಸಿದಾಗ ಮತ್ತು ಸಭೆಯು ಸೇರುವುದರ ಕುರಿತು 11:17, 18ರ ವರೆಗೆ ಬರುವುದಿಲ್ಲ ಎಂದು ಅವರು ಚರ್ಚಿಸಿದರು. (Jack P. Lewis, "The Role of Women in the Assembly: Epistles of Paul," in *These Things Are Written: Bible Lectures Presented at Harding from 1952 to 2012* [Searcy, Ark.: Truth for Today World Mission School, 2013], 700–2.) [7]Ben Witherington III, *Conflict and Community in Corinth: A Socio-Rhetorical Commentary on 1 and 2 Corinthians* (Grand Rapids, Mich.: Wm. B. Eerdmans Publishing Co., 1995), 232. [8]Oster, "When Men Wore Veils," 493–97. Gordon D. Fee was mistaken when he said that evidence is lacking for head coverings in Greek, Roman, and Jewish cultures. (Gordon D. Fee, *The First Epistle to the Corinthians,* The New International

Commentary on the New Testament [Grand Rapids, Mich.: Wm. B. Eerdmans Publishing Co., 1987], 507–8.) [9]Oster, "When Men Wore Veils," 504. ಒಂದು ಪ್ಯಾಲೇಸ್ಟಿನಿಯನ್ ಅಥವಾ ಐಯಾಸ್ಪೊರ ಯಹೂದಿ ಸಂದರ್ಭಗಳಲ್ಲಿ ತಲೆ ಮುಚ್ಚಿರುವುದನ್ನು ಮಹಿಳಾ ಅಧೀನಗೊಳಿಸುವಿಕೆಯನ್ನು ಸೂಚಿಸುತ್ತದೆ ಎಂದು ಅವರು ತೋರಿಸಿದಲ್ಲಿ Oster ಪ್ರಕರಣವು ದೃಢವಾಗಬಹುದು. ಎಫೆಸಿ 5:23 ರಿಂದ ಪುರುಷ ಮತ್ತು ಸ್ತ್ರೀ ಸಂಬಂಧಗಳ ದೊಡ್ಡ ಪ್ರಶ್ನೆಗೆ ಪರಿಣಾಮಗಳನ್ನು ಹೊಂದಿರಬಹುದು. ಅದು Oster ಈ ಪದ್ಯವನ್ನು ಪರಿಗಣನೆಯಿಂದ ತೆಗೆದು ಹಾಕಬೇಕೆಂದು ಆಶಿಸಿದರೆಂಬುದು ಆಶ್ಚರ್ಯಕರವಾಗಿದೆ. [10]Everett Ferguson, "Of Veils and Virgins: Greek, Roman, Jewish, and Early Christian Practice," *Restoration Quarterly* 56 (Fourth Quarter 2014): 241.

[11]Ibid. [12]William F. Orr and James Arthur Walther, *1 Corinthians,* The Anchor Bible (Garden City, N.Y.: Doubleday & Company, 1976), 260. [13]Hans Conzelmann, *1 Corinthians,* trans. J. W. Leitch, Hermeneia (Philadelphia: Fortress Press, 1975), 185. [14]David E. Garland, *1 Corinthians,* Baker Exegetical Commentary on the New Testament (Grand Rapids, Mich.: Baker Academic, 2003), 520. [15]Garland, 529. [16]Herodotus *Persian Wars* 1.82.7. [17]Garland, 534–35. [18]Gerd Theissen, *The Social Setting of Pauline Christianity: Essays on Corinth,* trans. and ed. John H. Schütz (Philadelphia: Fortress Press, 1982), 148–49. [19]Raymond C. Kelcy ಪ್ರಕಾರ, ಕೊರಿಯಂಥಿಯದವರು "ಕರ್ತನ ಬೋಜನಕ್ಕೆ ಮುಂಚಿತವಾಗಿ" ಸಾಮಾನ್ಯ ಭೋಜನದಲ್ಲಿ ಪಾಲ್ಗೊಳ್ಳುತ್ತಿದ್ದರು. (Raymond C. Kelcy, *First Corinthians,* The Living Word Series [Austin, Tex.: R. B. Sweet Co., 1967], 51–52.) ಊಟವಾದ ನಂತರ ಕರ್ತನ ಬೋಜನೆ ಆದೇಶವಾಗಿತ್ತೆಂಬುದು 11:33 ರ ಪರಿಣಾಮವಾಗಿತ್ತು: ". . . ನೀವು ಒಂದು ಸಾಮಾನ್ಯ ಊಟವನ್ನು ತಿನ್ನಲು ಒಟ್ಟಾಗಿ ಬಂದಾಗ, ಒಬ್ಬರಿಗೊಬ್ಬರು ಕಾಯಿರಿ." [20]ಆದ್ಯ ಕ್ರೈಸ್ತಧರ್ಮದ ಅವಧಿಯಲ್ಲಿ ಪದದ ಮೇಲೆ G. W. H. Lampe, *A Patristic Greek Lexicon* (Oxford: Clarendon Press, 1961), 785–86ರಲ್ಲಿ ಮಾಹಿತಿ ನೀಡಲಾಗಿದೆ.

[21]ಬಹುಶಃ ಕೊರಿಂಥದಲ್ಲಿ ಸಾಮಾನ್ಯ ಊಟವು ಯೂದನು 12 ಮತ್ತು 2 ಪೇತ್ರ 2:13ರ "ಪ್ರೀತಿಯ ಹಬ್ಬಗಳ" ಜೊತೆ ಹೋಲಿಸಲ್ಪಡುತ್ತದೆ. (These feasts are discussed in Duane Warden, *1 & 2 Peter and Jude,* Truth for Today Commentary [Searcy, Ark.: Resource Publications, 2009], 385–87.) [22]Wayne A. Meeks, *The First Urban Christians: The Social World of the Apostle Paul,* 2nd ed. (New Haven, Conn.: Yale University Press, 2003), 68. [23]"ಯೂಕರಿಸ್ಟ್," ಎಂಬ ಪದವನ್ನು ಕೆಲವು ಧಾರ್ಮಿಕ ಗುಂಪುಗಳು ಕರ್ತನ ಬೋಜನವನ್ನು ಉಲ್ಲೇಖಿಸಲು ಬಳಸುತ್ತಾರೆ, ಇದು "ಧನ್ಯವಾದಗಳು" ಅಥವಾ "ಕೃತಜ್ಞತೆ" ಯ ಗ್ರೀಕ್ ಪದದ ಇಂಗ್ಲಿಷ್ ರೂಪಾಂತರವಾಗಿದೆ. [24]Augustine *Confessions* 7.10.16. [25]Fee, 557.